ಬೆಲೆ ಎರಡು ಆಣೆ

ಕರ್ಮವೀರ

ಸಂಪಾದಕರು:
ಹ. ರಾ. ಪುರೋಹಿತ, ಎಂ. ಎ.


ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor,
H. R. PUROHIT, M. A.

— [ಸಂಪುಟ ೧೯] — ಹುಬ್ಬಳ್ಳಿ ಸೋಮವಾರ ತಾರೀಖು ೫—೧—೧೯೪೮ [illegible] :— [ಸಂಚಿಕೆ ೪೨] —

ಕನ್ನಡಿಗರ ನೋಂಪಿಗಿಂದು ಫಲಪ್ರಾಪ್ತಿಯ ಯೋಗ!

ಸಾಹಿತಿಗಳ ಹೊಣೆ—ಸಂಸ್ಕೃತಿ ಪೋಷಣೆ—ಪ್ರಚಾರ ಯೋಜನೆ—ಏಕೀಕರಣ ಸಾಧನೆ—ಸಬ್ ಫೆಡರೇಶನ್



ಶ್ರೀ. ತಾತಾಚಾರ್ಯ ಶರ್ಮರು

೩೧ ನೆಯ ಕನ್ನಡ ಸಾಹಿತ್ಯ ಸಮ್ಮೇಲನವು ಡಿಸೆಂಬರ ೨೮ ರಲ್ಲಿ ಕಾಸರಗೋಡಿನ ಮುದ್ದಣನಗರದಲ್ಲಿ ಒಳ್ಳೆಯ ಉತ್ಸಾಹದಿಂದ ಪ್ರಾರಂಭವಾಯಿತು. ಅಖಿಲಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಪ್ರಮುಖ ಸಾಹಿತಿಗಳು ಆಗಮಿಸಿದ್ದರು. ಅಧ್ಯಕ್ಷರಾದ ಶ್ರೀ ತಾತಾಚಾರ್ಯ ಶರ್ಮರವರು ತಮ್ಮ ಭಾಷಣದಲ್ಲಿ ಸಾಹಿತ್ಯ ಪರಿಷತ್ತಿನ ಘಟನೆ, ಆಡಳಿತ ಮೊದಲಾದವುಗಳಲ್ಲಿ ಆಗಬೇಕಾದ ಮಾರ್ಪಾಟು, ಕನ್ನಡದ ಬಗ್ಗೆ ಜಾಗೃತಿ ಹುಟ್ಟಿಸಲು ಕೈಕೊಳ್ಳಬೇಕಾದ ಕಾರ್ಯ ಮೊದಲಾದವುಗಳನ್ನು ಕೂಲಂಕಷ ವಿವೇಚಿಸಿ, ಕರ್ನಾಟಕ ಏಕೀಕರಣದ ಕಡೆಗೆ ಹೊರಳಿ ಅದನ್ನು ಸಾಧಿಸಿಕೊಳ್ಳುವ ಬಗೆಗೆ ಕೆಲವು ಸೂಚನೆಗಳನ್ನು ಮುಂದಿಟ್ಟರು. ಅವರ ಭಾಷಣ ಸಾರಾಂಶವನ್ನು ಕೆಳಗೆ ಕೊಡಲಾಗಿದೆ.

ಸಮ್ಮೇಲನದ ಅಧ್ಯಕ್ಷರನ್ನು ಸ್ಟೇಶನ್ನಿನಿಂದ ನ್ಯಾಯಮೂರ್ತಿ ಜಹಾಗೀರದಾರ ಹಾಗು ಪ್ರೊ. ಜಹಾಗೀರದಾರರೊಂದಿಗೆ ೩೧ ಜೊತೆ ಎತ್ತುಗಳನ್ನು ಹೂಡಿದ ಅಲಂಕೃತ ರಥದಲ್ಲಿ ಮೆರವಣಿಗೆಯಿಂದ ಮುದ್ದಣ ನಗರಕ್ಕೆ ಕರೆದುಕೊಂಡು ಬರಲಾಯಿತು. ಮೆರವಣಿಗೆಯು ಒಂದು ಮೈಲು ಉದ್ದವಿತ್ತು. ಶ್ರೀಯುತರಾದ ದಿವಾಕರ, ಚನ್ನಕೇಶವ ಅಯ್ಯಂಗಾರ, ಜಿನರಾಜ ಹೆಗಡೆ, ರಾಮಚಂದ್ರರಾವ ಕಕ್ಕಿಲ್ಲಾಯ ಮೊದಲಾದ ಪ್ರಮುಖರು, ಸಾವಿರಾರು ಸ್ತ್ರೀಪುರುಷರು ಬಾಲ-ಬಾಲಿಕೆಯರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಕನ್ನಡ ಜಯ ಜಯಕಾರಗಳಿಂದ ಆಕಾಶವು ಗಡುಚಿಕ್ಕಿತ್ತು. ಮೆರವಣಿಗೆಯ ನಂತರ ಅಧ್ಯಕ್ಷರಾದ ಶ್ರೀ ತಾತಾಚಾರ್ಯರು ಸ್ವಾಗತದ ಬಗ್ಗೆ ಎಲ್ಲರ ಆಭಾರ ಮನ್ನಿಸಿದರು. ಶ್ರೀ ಮಾಸ್ತಿಯವರು ತಮ್ಮ ಸಿಬ್ಬಂದಿಯೊಂದಿಗೆ ಬಂದಿದ್ದರು.

"ಕನ್ನಡ ನಾಡಿನ ಮೂಲೆಮೂಲೆಗಳಿಂದ ನನಗೆ ಅಭಿನಂದನ ಪತ್ರಗಳು ಬಂದಿವೆ, ಅಭಿನಂದನೋದ್ಗಾರಗಳನ್ನು ಕೇಳುತ್ತಿದ್ದೆನೆ. ಅನೇಕ ಕನ್ನಡ ಪತ್ರಿಕೆಗಳು ನನ್ನನ್ನು ಅಭಿನಂದನ ಮಾಡಿವೆ. ಅನೇಕರು ನನ್ನ ಯೋಗ್ಯತಾಸಿದ್ಧಿ ಕುರಿತು ಗುಣಗಾನ ಮಾಡುವಾಗ ಅನೇಕ ಗುಣವಾಚಕಗಳನ್ನು ಉಪಯೋಗಿಸಿದ್ದಾರೆ.

'ಪತ್ರಿಕೋದ್ಯಮಿ, ಶೈಲಿಶಿಲ್ಪಿ, ಸಾಂಸ್ಕೃತಿಕ ಸೇನಾನಿ, ಸ್ವಾತಂತ್ರ್ಯಯೋಧ, ಸಂಶೋಧಕ, ಸತ್ಯಾಗ್ರಹ ಸಂಘದ ಉಪಾಸಕ, ಕೆಚ್ಚೆದೆಯ ಪತ್ರಿಕಾಕರ್ತ, ಇವೇ ಆ ಮಾತುಗಳು. ಅವುಗಳೆಲ್ಲಲ್ಲ ನನಗೆ ಬಹಳ ಪ್ರಿಯವಾದುದ್ದು ಸ್ವಾತಂತ್ರ್ಯಯೋಧನೆಂಬುದು!

ಉಡುಪಿಯ "ಪ್ರಕಾಶ" ವಾಣಿಯಿಂದ ಈ ಅಧ್ಯಕ್ಷಪದವಿಯ ಜವಾಬ್ದಾರಿ ಎಷ್ಟೆಂಬುದು ಸ್ಪಷ್ಟವಾಗುತ್ತದೆ. "ಕನ್ನಡ ನಾಡನ್ನು ಕಟ್ಟಲ್ಪಡಬೇಕು" ಈ ವಾಕ್ಯವೊಂದರಲ್ಲಿ ಸಮ್ಮೇಳನದ—ಪರಿಷತ್ತಿನ—ಕರ್ತವ್ಯ ಏನೆಂಬುದು ಸೂಚಿತವಾಗಿದೆ. ಅಧ್ಯಕ್ಷನೆಂದರೆ ಕೇವಲ ಒಬ್ಬ ವ್ಯಕ್ತಿಯಲ್ಲ. ಈ ಸಮ್ಮೇಳನದ ಮುಖ—ಪರಿಷತ್ತಿನ ಮುಖ—ಕನ್ನಡ ಜನಪದದ ಮಹಾಮುಖ. ಕನ್ನಡ ನಾಡಿನ ಜನರು "ನಾಡನ್ನು ಕಟ್ಟಬೇಕು" ಎಂದು ಸಂಕಲ್ಪಮಾಡಿ ಅನೇಕ ವರ್ಷಗಳಾದವು. ಆ ಸಂಕಲ್ಪಸಾಧನೆಯ ಸಿದ್ಧಿಯ ಕಾಲ ಸಮೀಪಿಸುತ್ತಿರುವಹಾಗಿದೆ. "ಇಗೋ ಸಿದ್ಧಿಸಿತು" ಎಂದು ಕಾಸರಗೋಡಿನ ವೇದಿಕೆಯಿಂದ ಕನ್ನಡಿಗರೆಲ್ಲ ಉಚ್ಚಕಂಠದಿಂದ, ಸಾಗರ ಘೋಷವನ್ನು ಮೀರಿಸಿ ಘೋಷಿಸಿದ್ದಾದರೆ ಸಿದ್ಧಿಸಿತು! ಇಚ್ಛಾಶಕ್ತಿಯನ್ನು ಮೀರಿಸಿದ ಶಕ್ತಿ ಮತ್ತೊಂದಿಲ್ಲ.

ಅಭಿಮಾನ ಧನರಾಗಬೇಕು

ಇಚ್ಛಾಶಕ್ತಿಯ ಜೊತೆಗೆ ಮತ್ತೊಂದು ಬೇಕು. ಇಚ್ಛೆಯು ಮೊದಲನೆಯ ಹೆಜ್ಜೆಯಾದರೆ, ಪ್ರಗತಿ ಪಥದಲ್ಲಿ, ಮಹತ್ಸಾಧನೆಯ ಯಾತ್ರಾಪ್ರವಸರದಲ್ಲಿ ಅಭಿಮಾನವು ಎರಡನೆಯ ಹೆಜ್ಜೆ. ಅಭಿಮಾನವಿಲ್ಲದೆ ಇರುವಿಕೆಯೇ ಇಲ್ಲ. ಅಭಿಮಾನಶೂನ್ಯರಿಗೆ ಎಲ್ಲವೂ ಶೂನ್ಯವೇ. ಜಗತ್ತೇ ಶೂನ್ಯ. ಸ್ವಾಭಿಮಾನ ಬೇಕು. ಕನ್ನಡರು, ಕನ್ನಡಮನ, ಕನ್ನಡನುಡಿ, ಕನ್ನಡಿಗರು ಎಂಬ ಅಭಿಮಾನ ಬೇಕು. ಅಂತೆಯೇ ಕನ್ನಡದೇಶ, ಕನ್ನಡಜನ, ಕನ್ನಡಜನಪದ ಎಂಬ ಅಭಿಮಾನವಿರಬೇಕು.

ಸಂಸ್ಕೃತಿ—ಪ್ರಜಾತಂತ್ರ

ಸಾಹಿತ್ಯವು ಜೀವನವಾದರೆ, ಜನಜೀವನವು ಕಲಾವಿದನ, ಸಾಹಿತಿಯ, ಸೌಂದರ್ಯೋಪಾಸಕನ, ಸಾಧಕನ ಮೂಲಕ ರೂಪಗೊಂಡು, ಸಂಯಮಗೊಂಡು, ವ್ಯಕ್ತವಾಗುತ್ತದೆ; ಆ ವ್ಯಕ್ತಿಯು ಸಾಹಿತ್ಯದಲ್ಲಿ ಗದ್ಯ, ಪದ್ಯ, ನಾಟಕ ವಿಮರ್ಶೆ ಹೀಗೆ ನಾನಾ ರೂಪ ಹೊಂದುತ್ತದೆ. ಕಲೆಯಲ್ಲಿ ಚಿತ್ರ, ರೂಪ, ಶಿಲ್ಪ ಮೊದಲಾದ ವರ್ಣ, ಮೃದುರೇಖಾವಿಲಾಸದಲ್ಲಿ ಕಾಣಬರುತ್ತದೆ. ಗಾಯನದಲ್ಲಿ ನಾದರೂಪದಲ್ಲಿ ಕೇಳಿಬರುತ್ತದೆ.

ಇದು ಪ್ರಜಾತಂತ್ರದ ಯುಗ. ಪ್ರಜೆಯ ಅಪೇಕ್ಷೆಯಂತೆ ಸುತ್ತಲಿನ ಪ್ರಪಂಚ. ಈ ಅಪೇಕ್ಷೆಗಳು ನಿರ್ಮಲವಾಗಿರಬೇಕು; ಆದರ್ಶಯುತವಾಗಿರಬೇಕು. ಪ್ರಜಾತಂತ್ರವು ಸಾಮಾನ್ಯ ಜನರಲ್ಲೂ ಮಹದಪೇಕ್ಷೆಗಳನ್ನು ಹುಟ್ಟಿಸುತ್ತದೆ. ಮತ್ತೆ ಸಂಸ್ಕೃತಿಯು ಈ ಅಪೇಕ್ಷೆಗಳಿಗೆ ಶಿಕ್ಷಣ ಕೊಟ್ಟು ಸಂಯಮವಿತ್ತು, ಸೌಂದರ್ಯವಿತ್ತು, ರಕ್ತಿಯುತವನ್ನಾಗಿ ಮಾಡುತ್ತದೆ. ಭಾವಸಂಯಮ, ಶಕ್ತಿಯ ಉತ್ಪತ್ತಿ, ಸಂವರ್ಧನ ಇದೇ-ಸಂಸ್ಕೃತಿಯ ಮೂಲ.

ಪ್ರಜಾತಂತ್ರವು ಸ್ಥಿರಪಡಬೇಕಾದರೆ, ಪ್ರಜಾತಂತ್ರಕ್ಕೆ ಯಾವ ಪೀಡೆಯೂ ಇಲ್ಲದೆ ಅದರ ಯೋಗಕ್ಷೇಮ ಸಾಧನ ಯೋಗ್ಯವಾದ ವಾತಾವರಣ, ಜೀವನ, ವ್ಯವಸ್ಥೆ ಇರಬೇಕಾದರೆ ಪ್ರಜೆಗಳ ಪ್ರಜ್ಞೆ ಬೆಳೆಯಬೇಕು. ಅವರ ಲೋಕಜ್ಞಾನದ ಮಟ್ಟ ಹೆಚ್ಚಬೇಕು. ಆ ಹೆಚ್ಚಿನ ಮಟ್ಟದಿಂದ ಕೆಳಕ್ಕೆ ಅದು ಒಂದು ಗೆರೆಯೂ ಇಳಿಯದಂತೆ ನೋಡಿಕೊಳ್ಳಬೇಕು.

ಕಲಾವಿದ, ಸಾಹಿತಿ ಇವರಿಬ್ಬರೂ ರಾಷ್ಟ್ರ ಸೃಷ್ಟಿ ಸ್ಥಿತಿ ಕಾರಣಕರ್ತರು. ಸಾಹಿತಿಗಳೇನು ಸೃಷ್ಟಿ ಮಾಡುವರು; ಕಲಾವಿದರೇನು ನಿರ್ಮಾಣ ಮಾಡುವರು. ಅದು ಇಂದಿನ ಜನಜೀವನದ ಪ್ರತಿಬಿಂಬವಾಗಿರಬೇಕು. ಒಂದು ಕಡೆ ಇರುವ ನಡೆಯುವ, ಪ್ರಸಕ್ತ ಜೀವನದ ಸತ್ಯಚಿತ್ರಗಳನ್ನೆತ್ತಿ ತೋರಿಸುವದು, ಇನ್ನೊಂದು ಕಡೆ ಇರಬೇಕಾದ, ಸಾಧಿಸಬೇಕಾದ ಆದರ್ಶ ಜೀವನ ಚಿತ್ರಗಳನ್ನು ನಿರ್ಮಿಸುವುದು ಇವೆರಡೂ ಕೆಲಸಗಳೂ ಮುಂಬರಿಯಬೇಕು. ಈ ಕೆಲಸಗಳಿಗೆ ಬೇಕಾದ ಶಕ್ತಿಯನ್ನು ರಾಷ್ಟ್ರದಲ್ಲಿ ಉತ್ಪತ್ತಿ ಮಾಡಬೇಕು. ಅಂತಹ ಶಕ್ತಿಯ ಉತ್ಪತ್ತಿ ಸ್ಥಾನವೆನಿಸಬೇಕು ಸಾಹಿತ್ಯ ಪರಿಷತ್ತು.

ಕ್ರಾಂತಿಗೆ ಸ್ವಾಗತ

ಕರ್ನಾಟಕದಲ್ಲಿ ಕ್ರಾಂತಿಯನ್ನು ಇಂದು ತರುಣ ಲೋಕವು ಅಪೇಕ್ಷಿಸುತ್ತದೆ. ಅಪೇಕ್ಷಿಸ್ಯ ಪಡೇನು! ಕ್ರಾಂತಿಜ್ವಾಲೆಯು ನಾಡನ್ನೆಲ್ಲ ಆವರಿಸಿ ಹಳೆಯದನ್ನೆಲ್ಲ ದಹಿಸುತ್ತದೆ. ಕಿಡಿಯು ಕಿಚ್ಚುರಗೊಳ್ಳುವಂತೆ ಎಲ್ಲರನ್ನೂ ಬಿಸಿಗೊಳಿಸುತ್ತದೆ. ಇದನ್ನು ಸಮಾನು[illegible] ದೂರದೃಷ್ಟಿಯಿಂದ ಕಾಣಲಾಗದವರು ಸರ್ವನಾಶವಾಯಿತೆಂದು ಗೋಳಾಡುತ್ತಿದ್ದಾರೆ. ಪಿಶಾಚವಾದಿಗಳು ನಿಟ್ಟುಸಿರನ್ನು ಬಿಡುತ್ತಿದ್ದಾರೆ. ನಿರಂಕುಶಾಧಿಕಾರಿಗಳು, ಗುತ್ತಿಗೆದಾರರು, ಸಾಹುಕಾರರು ಭಗ್ನಮನೋರಥರಾಗಿ ಧಿಕ್ಕಾರಿಗಳನ್ನು ನಡೆಸುತ್ತ ಅಲ್ಪಸ್ವಲ್ಪವನ್ನಾದರೂ ಉಳಿಸಿಕೊಳ್ಳೋಣವೆಂಬ ದುರಾಶೆಯಿಂದ ಹೊಸ ಹೊಸ ಕೋಟೆ ಕೊತ್ತಲಗಳನ್ನು ಕಟ್ಟಿಕೊಳ್ಳುತ್ತಲಿದ್ದಾರೆ. ಕ್ರಾಂತಿ ಸಮಾರಂಭದಲ್ಲಿ ಇವೆಲ್ಲ ಅನಿವಾರ್ಯ. ಈ ಸಂದರ್ಭದಲ್ಲಿ ಸತ್ಯಪ್ರೇಮಿಗಳು, ಸತ್ಯಪರಾಕ್ರಮಿಗಳು, ರಾಷ್ಟ್ರಸ್ಥಾಪನಾಕುಶಲಿಗಳು, ಕಲಾವಿದರು, ಸಾಹಿತಿಗಳು, ಪಾರಮಾರ್ಥಿಕ ಪ್ರಯೋಗಪಟುಗಳು, ಎಲ್ಲರೂ ಐಕ್ಯಕ ಧ್ಯೇಯದಿಂದ "ಕ್ರಾಂತಿಗಿದೋ ಸ್ವಾಗತ" ವೆಂದು ಸಾರುತ್ತ ಮುಂದುವರಿಯಬೇಕು.

ಕಾರ್ಯಕ್ಷೇತ್ರ ವಿಸ್ತಾರ

ಈ ಪರಿಷತ್ತಿನ- ರಾಷ್ಟ್ರ ಪರಿಷತ್ತಿನ ಕಾರ್ಯಕ್ಷೇತ್ರ ವಿಸ್ತಾರವಾಗಬೇಕೆಂಬುದನ್ನು ಗ್ರಹಿಸಿದ್ದಾಯಿತು. ಆ ಕ್ಷೇತ್ರವಿಸ್ತಾರ ವಿವರಗಳನ್ನಿಲ್ಲಿಗ ಕೊಡಲು ಸಾಧ್ಯವಿಲ್ಲವಾದರೂ ಸಂಗ್ರಹವಾಗಿ ಸೂಚನೆ ಮಾಡಬಹುದು.

ಭಾಷೆ—ಸಾಹಿತ್ಯ

೧. ಭಾಷಾಸಾಹಿತ್ಯ ಸಂಶೋಧನ, ವ್ಯವಸಾಯ ಮತ್ತು ಪ್ರಚಾರ. ೨. ಪ್ರಾಚೀನ ಗ್ರಂಥಗಳ ಸಂಗ್ರಹ, ಸಂರಕ್ಷಣೆ ಮತ್ತು ಪ್ರಕಟನೆ. ೩. ವಿಶ್ವಕೋಶ, ನಿಘಂಟುಗಳ ನಿರ್ಮಾಣ.

೪. ಶಬ್ದ ಸಂಪತ್ತು, ಲಿಪಿ, ೫ ಪ್ರಮಾಣ ವಿಶಿಷ್ಟ (Standardised) ಪಠ್ಯ ಪುಸ್ತಕಗಳ ಪ್ರಕಟನೆ, ೬ ಗ್ರಂಥಕರ್ತರಿಗೆ ಪ್ರೋತ್ಸಾಹ. ೭. ವಯೋನುಪೂರ್ವ ಸಾಹಿತ್ಯ ಮತ್ತು ಶಿಶುಸಾಹಿತ್ಯ. ೮ ಗದ್ಯ ಸಾಹಿತ್ಯ ಪ್ರಾಧಾನ್ಯ.

ಸಾಂಸ್ಕೃತಿಕ ಸಂಶೋಧನೆ

೧ ಇತಿಹಾಸ, ಗತವೈಭವಶೇಷಗಳ ಅಧ್ಯಯನ ೨. ಶಿಲಾಶಾಸನಾನ್ವೇಷಣ. ೩ ಪ್ರಾಚೀನ ವಸ್ತು, ವಾಸ್ತುಶಿಲ್ಪ ಪರೀಕ್ಷೆ. ೪. ಸಂಶೋಧನ ಕಾರ್ಯಕ್ಕಾಗಿ ಪ್ರಮುಖಟ್ಟುಗಳ ಏರ್ಪಾಟು, ೫ ಚಿತ್ರಕರ್ಮ, ಚಿತ್ರಕೂಟ ವ್ಯವಸ್ಥೆ ೬ ನಾನಾ ಪ್ರಾಚೀನ ಲಿಪ್ಯನ್ವೇಷಣ ಶಾಖೆಗಳು, ಸಂಶೋಧನ ಸಂಸ್ಥೆಗಳೊಂದಿಗೆ ಸಂಬಂಧ. ೭. ಸಂಸ್ಕೃತಿಗೆ ಸಂಬಂಧಪಟ್ಟಂತೆ ಅನುಸಂಧೇಯ, ನಿದರ್ಶನ(Reference) ಗ್ರಂಥಗಳ ರಚನೆ, ಪ್ರಕಟನೆ.

ಪ್ರಚಾರ—ಪ್ರಕಟನೆ

೧. ಪ್ರಮುಖ ಕಾರ್ಯಗಳೆಲ್ಲ ಕನ್ನಡದ ಮೂಲಕವೇ ಆಗುವಂತೆ ಮಾಡಬೇಕು. ೨. ನ್ಯಾಯಸ್ಥಾನಗಳ ಕೆಲಸವೆಲ್ಲ ಕನ್ನಡದಲ್ಲೇ ಆಗಬೇಕು. ೩. ಮಕ್ಕಳ ಶಿಕ್ಷಣವು ಕಾಲೇಜುಗಳಲ್ಲೂ ಕನ್ನಡದ ಮೂಲಕವಾಗಿಯೇ ನಡೆಯಬೇಕು. ೪. ವಿಶ್ವವಿದ್ಯಾನಿಲಯಗಳ ಶಿಕ್ಷಣವೂ ಕನ್ನಡ ಮೂಲಕವಾಗಿಯೇ ನಡೆಯಬೇಕು. ೫. ಸಂಚಾರಿ ಪುಸ್ತಕಗಳು, ನಾಟಕ ಪ್ರದರ್ಶನಗಳು, [illegible] ಗಾಯನಗಳು, ಹರಿಕಥೆಗಳ ವ್ಯವಸ್ಥೆ ೬. ಪ್ರದರ್ಶನಗಳ ಏರ್ಪಾಟು; ಚಲನ ಚಿತ್ರಗಳ ನಿರ್ಮಾಣ ಮತ್ತು ಪ್ರದರ್ಶನ ವ್ಯವಸ್ಥೆ. ೭. ಸುಸಜ್ಜಿತ ಸರ್ವಾಂಗ ಪರಿಪೂರ್ಣ ಮುದ್ರಣಾಲಯ; ಗ್ರಂಥ ಪ್ರಕಟನೆ ಮತ್ತು ಮಾರಾಟದ ವ್ಯವಸ್ಥೆ. ೮. ಕನ್ನಡ ನಾಡಿನ ಸಂಸ್ಕೃತಿ, ಅಭಿಮಾನ ಪ್ರಚಾರ ಮಾಡಲು ನೈಪುಣ್ಯ ಪಡೆದ ಪ್ರಚಾರಕರನ್ನು, ಉತ್ಸಾಹಿಗಳನ್ನು ಸಿದ್ಧಗೊಳಿಸುವ ಶಿಕ್ಷಣ ಕೇಂದ್ರವಾಗಬೇಕು.

ವಿಶ್ವವಿದ್ಯಾನಿಲಯಗಳಲ್ಲಿ ಮಾತ್ರವಲ್ಲ, ಕನ್ನಡ ನಾಡಿನ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲೂ ಶಿಕ್ಷಣ ಮಾಧ್ಯಮವು ಕನ್ನಡವೇ ಆಗಿರಬೇಕು. ಮೈಸೂರು ಸಂಸ್ಥಾನದಲ್ಲಿ ಹೈಸ್ಕೂಲು ಶಿಕ್ಷಣವು ಕನ್ನಡದ ಮೂಲಕವೇ ಆಗಬೇಕೆಂಬ ತತ್ವವನ್ನು ಸರ್ಕಾರದವರು ಅಂಗೀಕರಿಸಿ ಹತ್ತಾರು ವರ್ಷಗಳಾದವು. ಅದರೇನು? ಆಚರಣೆಯಲ್ಲಿ ಅದೊಂದು ಪ್ರಹಸನವಾಗಿ ಪರಿಣಮಿಸಿದೆ. ಹೈಸ್ಕೂಲುಗಳಲ್ಲಿ ಶಿಕ್ಷಣವನ್ನು ಕನ್ನಡದ ಮೂಲಕವಾಗಿಯಾದರೂ ಕೊಡಬಹುದು, ಇಂಗ್ಲಿಷ್ ಮೂಲಕವಾಗಿಯಾದರೂ ಕೊಡಬಹುದು ಎಂಬುದಾಗಿ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಕರ್ನಾಟಕದ ರಾಷ್ಟ್ರಭಾಷೆ ಕನ್ನಡ

ಈ ನಾಡಿನಲ್ಲಿ ನೆಲಸಿರುವವರ ಮನೆಮಾತು ಏನೇ ಆಗಿರಲಿ ಅವರು ಕನ್ನಡವನ್ನು ತಮ್ಮ ದೇಶಭಾಷೆಯೆಂದು ಅಂಗೀಕಾರ ಮಾಡಬೇಕು; ಮನೋಲೋಕದ ಅಂಗೀಕಾರ ಮಾತ್ರವಲ್ಲ ಕನ್ನಡ ಕಲಿಯಬೇಕು; ತಮ್ಮ ಸಕಲ ವ್ಯವಹಾರವನ್ನೂ ಕನ್ನಡದ ಮೂಲಕವಾಗಿಯೇ ನಡೆಸಬೇಕು. ತಮ್ಮ ಮಕ್ಕಳ ಮರಿಗಳ ವಿದ್ಯಾಭ್ಯಾಸವನ್ನೆಲ್ಲ ಕನ್ನಡದ ಮೂಲಕವಾಗಿಯೇ ನಡೆಸಬೇಕು. ಕನ್ನಡದ ಮೂಲಕವಾಗಿಯೇ ಉನ್ನತಿ[illegible] ಜ್ಞಾನ ಅವರಲ್ಲಿ ಮೂಡಬೇಕು.

ಕನ್ನಡ ನಾಡಿನಲ್ಲಿ ಪ್ರಮುಖರಾಗಿರುವ ಕನ್ನಡ ಪ್ರಮುಖರಾಗಬೇಕು. ಸರಕಾರದ [illegible] ಕಾರ್ಯಗಳೂ ಕನ್ನಡ ಭಾಷೆಯ ಮೂಲಕವಾಗಿಯೇ ನಡೆಯಬೇಕು.

ಇಷ್ಟು ನ್ಯಾಯಾಸ್ಥಾನಗಳ ಮಾತಾದರೂ ಆಯ್ತು. ಕನ್ನಡ ನಾಡಿನಲ್ಲಿ ನ್ಯಾಯಾಸ್ಥಾನಗಳ ಭಾಷೆಯೂ [illegible] ಕನ್ನಡವೇ ಆಗುವುದು ನ್ಯಾಯವಾಗಿದೆ. [illegible] ಆರಂಭವಾಗಿ ಹೈಕೋರ್ಟಿನ ವರೆಗೂ ಕನ್ನಡವೊಂದೇ ಮಾಧ್ಯಮವಾಗಬೇಕು.

—೬ ನೆಯ ಪುಟಕ್ಕೆ

ದಾನಿ ವಾಟುಮಲ್

ಲೇ— ನಾಡಿಗ ಕೃಷ್ಣಮೂರ್ತಿ

ವಿಶೇಷ ಲೇಖನ ೧೧

ಭಾರತದಿಂದ ವಲಸೆ ಬಂದು ಅಮೇರಿಕದಲ್ಲಿ ನೆಲೆಸಿರುವ ಭಾರತೀಯರು ಅತಿ ವಿರಳ. ಹಾಗೆ ಬಂದವರು ಕೆಲವರೂ ಕೂಡ ಧನಿಕರಾಗಲು ಶಕ್ಯವಾಗಲಿಲ್ಲ. ಧನಿಕರಾದವರು ಒಬ್ಬಿಬ್ಬರು, ಹಾಯ್ಲಾದನ್ನೇ ಮರೆತಂತೆ ಕಾಣುತ್ತದೆ. ಆದರೆ ಸಿಂಧ ಪ್ರಾಂತದ ಶ್ರೀ ಗೋವಿಂದರಾಮ ವಾಟುಮಲ್ ಮಹಾಶಯನ ದಾರಿಯೇ ಬೇರೆಯಾಯಿತು. ಈ ವಾಟುಮಲ್ ಯಾರು? ಈತ ಅಮೇರಿಕದಲ್ಲಿದ್ದುಕೊಂಡು ಭಾರತೀಯರಿಗೆ ಮಾಡಿದ ಸೇವೆಯೇನು? ಈ ಪ್ರಶ್ನೆಗಳಿಗೆ ಉತ್ತರವೇ ಈ ಲೇಖನದ ಸಾರಾಂಶ.

"ಶ್ರೀ ಗೋವಿಂದರಾಮ ಜೆ. ವಾಟುಮಲ್, ಅಮೇರಿಕೆಯ ಪ್ರಜೆಯಾದದ್ದು ಅಮೇರಿಕನ್ನರ ಭಾಗ್ಯ" ಎಂದು ನ್ಯಾಯಾಧೀಶರು ಅವರ ಪತ್ರಕ್ಕೆ ಸಹಿ ಹಾಕುತ್ತ ಹೇಳಿದರು. ವಾಟುಮಲ್‌ರವರು ಈಗ ಹೊನಲೂಲು ನಗರದಲ್ಲಿ ವ್ಯಾಪಾರ ಮಾಡುತ್ತಿದ್ದಾರೆ. ಕೆಲವು ತಿಂಗಳ ಹಿಂದೆ ಹವಾಯಿ ದ್ವೀಪದ ಬಗ್ಗೆ ನಾ ಬರೆದ ಲೇಖನದಿಂದ ಹೊನಲೂಲುವಿನ ಅಂದಚಂದ ವಾಚಕರು ತಿಳಿದಿರಬಹುದು. ವಾಟುಮಲ್‌ರ ಜನ್ಮಸ್ಥಳ, ಸಿಂಧ ಪ್ರಾಂತದ ಹೈದರಾಬಾದ. ಇವರ ತಂದೆ ಆ ನಗರದ ನೀರು ಸರಬರಾಜು ವ್ಯವಸ್ಥೆಯ ಕಂಟ್ರಾಕ್ಟರಾಗಿದ್ದರು. ವಾಟುಮಲ್‌ರಿಗಾಗಿನ್ನೂ ಎಂಟು ವರ್ಷ. ಅವರ ತಂದೆ, ಒಂಟೆಯ ಮೇಲೆ ಸವಾರಿ ಮಾಡುತ್ತಿದ್ದಾಗ ಕೆಳಗಡೆ ಬಿದ್ದು ಕೈಕಾಲು ಮುರಿದುಕೊಂಡು, ಸಂಪಾದಿಸಲು ಅನರ್ಹರಾದರು. ನಂತರ, ವಾಟುಮಲ್ಲರ ಹಿರಿಯಣ್ಣ ಶ್ರೀ ಜಮ್ನಾದಾಸ, ಪರದೇಶಕ್ಕೆ ತೆರಳಿ ಅಲ್ಲಿ ಸಂಪಾದನೆ ಮಾಡಿ, ಸಂಸಾರದ ಖರ್ಚಿಗೆ ಹೈದರಾಬಾದಿಗೆ ಹಣ ಕಳುಹಿಸುತ್ತಿದ್ದರು. ಇನ್ನಿಬ್ಬರು ಸಹೋದರರು ದಿನಗೂಲಿ ಮಾಡಿ ಜೀವಿಸುತ್ತ, ಶ್ರೀ ಗೋವಿಂದರಾಮ ಮತ್ತು ನಾಲ್ವರು ಹೆಣ್ಣುಮಕ್ಕಳು ಆತನ ತಂದೆಯನ್ನು ಕಾಪಾಡುತ್ತಿದ್ದರು. ಗೋವಿಂದರಾಮರಿಗೆ ಪ್ರೀತಿಯಿಂದ "ಗಾಮಾ" ಎಂದು ಕರೆಯುತ್ತಿದ್ದರು.

ಗಾಮ ಚಿಕ್ಕಂದಿನಿಂದಲೂ ಕಷ್ಟಪಟ್ಟು ದುಡಿದು ಓದಿದ ಹುಡುಗ. ಪ್ರೈಮರಿ ಮತ್ತು ಪ್ರೌಢ ವಿದ್ಯಾಭ್ಯಾಸ ಮುಗಿಸಿ ಇಂಜನಿಯರಿಂಗ್ ಓದಲು ಹವಣಿಸಿದಾಗ, ಆತನ ಪರದೇಶದಲ್ಲಿದ್ದ ಅಣ್ಣ, ಸಹಾಯ ಮಾಡಿದ. ಪರದೇಶದಲ್ಲಿದ್ದ ಅಣ್ಣ ಎಂದೆನೆ ತಪ್ಪಾದೀತು. ಆ ವೇಳೆಗೆ ಜಮ್ನಾದಾಸ, ಹವಾಯಿ ದ್ವೀಪದಲ್ಲಿ ನೆಲಬರಾಗಿದ್ದರು. ಗಾಮ ವಿದ್ಯಾಭ್ಯಾಸ ಮುಗಿಸಿದ ನಂತರ, ೩೦ ರೂಪಾಯಿ ವೇತನದ ಮೇಲೆ ಸರಕಾರಿ ಕೆಲಸಕ್ಕೆ ಸೇರಿದನು. ಈ ವೇತನವೇ ಆತನಿಗೆ ಜಾಸ್ತಿಯಾಗಿ ಕಂಡಿತು. ಇದೇ ಕೆಲಸದಲ್ಲಿದ್ದ ಇಂಗ್ಲೀಷರವರಿಗೆ ಇದಕ್ಕೆ ೨೦ರಷ್ಟು ಸಂಬಳ ಸಲ್ಲುತ್ತಿದ್ದಾಗ, ಗಾಮನಿಗೆ ಆಶ್ಚರ್ಯವಾಯಿತು.

ಒಂದು ದಿನ ಒಂದು ಪುಸ್ತಕದಂಗಡಿಯಲ್ಲಿ ಪುಸ್ತಕಗಳನ್ನು ತಿರುವಿ ಹಾಕುತ್ತಿದ್ದಾಗ, ಲಿಂಕನ್ ಮಹಾಶಯನ ಆತ್ಮಚರಿತ್ರೆಯ ಪುಸ್ತಕಗಳನ್ನು ಕಂಡನು. ತುಂಬ ಆಸಕ್ತಿಯಿಂದ ಲಿಂಕನ್ ಮಹಾಶಯನ ಚರಿತ್ರೆಯನ್ನು ಓದಿದನು. ತನ್ನ ದೇಶದಲ್ಲಿ ಇಂಗ್ಲೀಷರ ಕೈಲಿ ನಡೆಯುತ್ತಿದ್ದ ಬೇದಭಾವನೆಗಳು, ಲಿಂಕನ್ ಮಹಾಶಯ, ಅಮೇರಿಕದಲ್ಲಿ, ನಿಗ್ರೋ ಜನರಿಗಾಗಿ ಕಷ್ಟಪಡುತ್ತಿದ್ದ ಸನ್ನಿವೇಶಗಳು ಒಂದೇ ಆಗಿ ಕಂಡವು. ಓದುತ್ತಾ ಓದುತ್ತಾ, ಗಾಮ ಲಿಂಕನ್ ಮತ್ತು ಆತನ ದೇಶದಲ್ಲಿ ಆಸಕ್ತಿ ಹೊಂದಿದನು. ಭಾರತದಲ್ಲೂ ಇಂತಹ ಲಿಂಕನ್ ಮಹಾಶಯ ಒಬ್ಬ ಜನ್ಮ ತಾಳಬಾರದೇ ಎಂದು ತನ್ನಲ್ಲಿಯೇ ಯೋಚಿಸಿಕೊಂಡನು. ೧೯೧೭ ರಲ್ಲಿ ಹವಾಯಿಯಲ್ಲಿದ್ದ ತನ್ನ ಅಣ್ಣನಿಂದ ಬಂದ ಕಾಗದ ಗಾಮನ ಸ್ಥಿತಿಯನ್ನೇ ಬದಲಾಯಿಸಿತು. ಆ ಕಾಗದದ ಒಕ್ಕಣೆ ಹೀಗಿತ್ತು. "ನನಗೊಂದು ಚಿಕ್ಕ ದಿನಸಿ ಅಂಗಡಿ ಇದೆ. ನನ್ನ ಗುಮಾಸ್ತನಿಗೆ ಅಕ್ಷರ ಬರದು. ನೀನೇನಾದರೂ ಬಂದು ನನಗೆ ಸಹಾಯ ಮಾಡುವುದಾದರೆ ತುಂಬ ಚೆನ್ನಾದೀತು.

ಮೂರು ತಿಂಗಳ ನಂತರ, ತನ್ನ ಸಣ್ಣ ಟ್ರಂಕನ್ನು ಕೈಯಲ್ಲಿ ಹಿಡಿದುಕೊಂಡು, ಹೊನಲೂಲುವಿನ ಬಂದರಿನಲ್ಲಿಳಿದು ವಾಟುಮಲ್ ತಮ್ಮ ಸ್ವರ್ಗಭೂಮಿಯನ್ನು ಕಂಡುಕೊಂಡರು. ರಸ್ತೆಯಲ್ಲಿ ನಡೆದು ಬರುವಾಗ ನಿಗ್ರೋ ಪೋಲೀಸನೊಬ್ಬ ಬಿಳಿಯ ತಪ್ಪಿತಸ್ಥನನ್ನು ಎಚ್ಚರಿಸುತ್ತಿದ್ದ ದೃಶ್ಯ, ಆತನನ್ನು ವ್ಯಾಪಾರಗಾರರು ಮತ್ತು ನೆರೆಹೊರೆಯವರು, "ಮಹಾಶಯರೇ" ಎಂದು ಕರೆದ ಬಗೆ, ತಮ್ಮ ಅಂಗಡಿಯ ಎದುರುಗಡೆ ಬೀಸಿ [illegible] ರನ್ನು ನೇಮಿಸಿಕೊಂಡ ಸಂಗತಿ, ಪ್ರತಿ ದಿನವೂ ಬಸ್ಸುಗಳಲ್ಲಿ, ಬಿಳಿಯ ಜನರು, ಹೊನಲೂಲುವಿನ ಹೆಣ್ಣುಮಕ್ಕಳಿಗೆ ಜಾಗ ಬಿಟ್ಟುಕೊಡುವುದು, ಮುಂತಾದವು ಆಶ್ಚರ್ಯವನ್ನುಂಟು ಮಾಡಿದವು. ಬೇದಭಾವಗಳ ತವರೂರಾಗಿದ್ದ ಹೈದರಾಬಾದ ಎಲ್ಲಿ! ಎಲ್ಲ ಜನರೂ ಸಮತೆಯಿಂದ ನೆರೆದು ಸುಖ ಸಂತೋಷದಲ್ಲಿ ಮಗ್ನರಾಗಿದ್ದ ಸ್ವರ್ಗಭೂಮಿಯಂತಿದ್ದ ಹೊನಲೂಲು ಎಲ್ಲಿ!

ಹೊನಲೂಲುವಿನ ವಾಸ, ವ್ಯಾಪಾರ, ವಾಟುಮಲ್ಲರಿಗೆ ವ್ಯಾಮೋಹವನ್ನುಂಟು ಮಾಡಿತು. ಜನರನ್ನು ಒಲಿಸಿಕೊಂಡವರು, ಅಲ್ಲಿಯ ನೀತಿ ನಡೆವಳಿಕೆಗಳನ್ನು ಒಪ್ಪಿದವರು, ಆ ಸರಕಾರದ ಪ್ರಜೆಯಾಗಬಯಸಿ, ಸರಕಾರಕ್ಕೆ ಅರ್ಜಿ ಹಾಕಲು ಕೋರ್ಟಿಗೆ ತೆರಳಿದರು.

ಅಲ್ಲಿಯೇ ಅವರ ಪ್ರಥಮ ಪ್ರೇಮ ದರ್ಶನದ ಮೊಗ್ಗು ಹೂವಾಗಿ ಅರಳಿತು. ಅಲ್ಲೊಬ್ಬ ಅಮೇರಿಕನ್ ಹುಡಿಗಿಯನ್ನು ಸಂದರ್ಶಿಸಿದರು ವಾಟುಮಲ್. ಆಕೆ ಓರೆಗಾನ್ ಸಂಸ್ಥಾನದ ರೀಡ್ ಕಾಲೇಜಿನಲ್ಲಿ ಸಂಗೀತದ ಉಪಾಧ್ಯಾಯಿನಿಯಾಗಿ ಕೆಲಸ ಮಾಡುತ್ತಿದ್ದಳು. ಆಕೆಯೇ ಎಲೆನ್ ಜೆನ್‌ಸನ್. ಸವಿ ಪ್ರಾರಂಭವಾಯಿತು ಮೀಟಿಂಗ್. ಸಿನಿಮಾ, ನೃತ್ಯ ಪ್ರದರ್ಶನ, ಸಂತೋಷಕೂಟ, ಊಟದ ಸಮಾರಂಭ, ಎಲ್ಲದರಲ್ಲಿಯೂ ವಾಟುಮಲ್ ಮತ್ತು ಎಲೆನ್ ಭಾಗ ವಹಿಸುತ್ತಿದ್ದರು. ವಾಟುಮಲ್ ತನ್ನ ಜೀವನದ ಗೋಪುರಗಳನ್ನು ಆಕೆಯ ಮುಂದೆ ಕಟ್ಟಿ, ಅದರಲ್ಲಿ ಆಕೆ ಭಾಗ ವಹಿಸಬೇಕೆಂದು ಕೇಳಿಕೊಂಡರು. ೧೯೨೨ ರಲ್ಲಿ ಇಬ್ಬರೂ ಗಂಡಹೆಂಡತಿಯರಾದರು. ಹಾಗೆ ಮದುವೆ ಮಾಡಿಕೊಂಡದ್ದರಿಂದ ಎಲೆನ್ ತನ್ನ ಪ್ರಜಾ ಹಕ್ಕನ್ನು ಕಳೆದುಕೊಂಡಳು. ಕಾರಣ ವಾಟುಮಲ್ ಪರಕೀಯರಾದ್ದರಿಂದ ಇಬ್ಬರೂ ಅಮೇರಿಕೆಯ ಪ್ರಜೆಗಳಾಗಲು ಎಲ್ಲ ಕಾಗದಪತ್ರಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು. ಅದಕ್ಕಿನ್ನೂ ಒಂದು ತಿಂಗಳು ಬೇಕಿತ್ತು. ಆದರೆ ಇದ್ದಕ್ಕಿದ್ದಂತೆಯೇ ಒಂದು ದಿನ ಪತ್ರಿಕೆಯಲ್ಲಿ "ಭಾರತೀಯರು ಅಮೇರಿಕದ ಪ್ರಜೆಗಳಾಗಲು ಸುಪ್ರೀಮ ನ್ಯಾಯಾಸ್ಥಾನ ಬಹಿಷ್ಕಾರ ಹಾಕಿದೆ" ಎಂಬ ಸುದ್ದಿ ಬಂತು. ವಾಟುಮಲ್ ತುಂಬಾ ವಿಷಣ್ಣವದನರಾದರು. ಈಗ ವಾಟುಮಲ್ಲರಾಗಲೀ, ಎಲೆನ್‌ರಾಗಲಿ ಅಮೇರಿಕದ ನ್ಯಾಯಬದ್ಧ ಪ್ರಜೆಗಳಾಗುವಂತಿರಲಿಲ್ಲ. ಧೈರ್ಯಗುಂದದೆ ಇಬ್ಬರೂ ಮುನ್ನುಗ್ಗಿದರು. ವ್ಯಾಪಾರ ಬಲಿಯುತ್ತ ಬಂದಿತು. ದಿನ ದಿನಕ್ಕೆ ಹೆಚ್ಚು ಅಂಗಡಿಗಳ ಮಾಲೀಕರಾದರು. ಇವರ ಅಣ್ಣ ತನ್ನ ಜೀವನಕ್ಕೆಷ್ಟು ಬೇಕೋ ಅಷ್ಟರಿಂದ ತೃಪ್ತರಾಗಿ, ಉಳಿದ ವ್ಯಾಪಾರ ತಮ್ಮನಿಗೇ ಬಿಟ್ಟುಬಿಟ್ಟರು. ೧೦ ವರ್ಷದ ಅವಧಿಯಲ್ಲಿ ಗಾಮ್ಮಾ ದಂಪತಿಗಳು ಒಂದು ದೊಡ್ಡ ಅಂಗಡಿಯ ಮಾಲೀಕರಾದರು.

ಶ್ರೀ ವಾಟುಮಲ್ಲರ ಬಿಡಾರದಲ್ಲಿ ಯಜಮಾನ ಸೇವಕರಿಗೆ ಭಿನ್ನತೆಯಿಲ್ಲ. ಎಲ್ಲರೂ ಸರಿಸಮಾನಸ್ಕಂದರಾಗಿ ನಡೆದುಕೊಳ್ಳುತ್ತಾರೆ. ಪ್ರತಿ ತಿಂಗಳೂ ಹೊನಲೂಲುವಿನ ಅತಿ ದೊಡ್ಡ ಹೊಟೇಲಿನಲ್ಲಿ ವಾಟುಮಲ್ ಕಂಪನಿಯವರಿಗಾಗಿ ಸತ್ಕಾರಕೂಟ ಏರ್ಪಡುತ್ತದೆ. ಕೆಲಸಗಾರರಿಗೆ ಸಂಬಳದ ರಜಾ, ಆರೋಗ್ಯ ವಿಮಾ ಮತ್ತು ಬೋನಸ್ ಪದ್ಧತಿಯನ್ನು ಏರ್ಪಡಿಸಿದ ಕೀರ್ತಿ ವಾಟುಮಲ್ಲರದು. ಪ್ರತಿಯೊಬ್ಬ ಕೆಲಸಗಾರನಿಗೆ ತನ್ನದಾದ ಒಂದು ಮನೆ ಇದೆ.

೧೯೩೭ ರ ವೇಳೆಗೆ ವಾಟುಮಲ್ಲರ ಐಶ್ವರ್ಯ ಬೆಳೆಯುತ್ತಾ ಬಂದಿತು. ಹೊಸದಾದ ಅಂಗಡಿಯ ಕಟ್ಟಡವೊಂದು ನಿರ್ಮಾಣವಾಯಿತು. ಹೊನಲೂಲುವಿನ ಸುಪ್ರಸಿದ್ಧ ಸಮುದ್ರದಡಿಯಲ್ಲಿರುವ ವೈಕಾಕಿ ದಂಡೆಯಲ್ಲೊಂದು ಅಂಗಡಿ ಸ್ಥಾಪನೆಯಾಯಿತು. ಹೊನಲೂಲು ನಗರದಲ್ಲಿ ಮೂರನೆಯ ಅಂಗಡಿಯೂ ಸ್ಥಾಪಿಸಲ್ಪಟ್ಟಿತು. ವಾಟುಮಲ್ಲರ ಈ ಕಾರ್ಯಕ್ರಮಗಳಲ್ಲಿ ಶ್ರೀಮತಿ ವಾಟುಮಲ್ಲರು, ಸಹಭಗಿನಿಯಾಗಿ ಕೆಲಸ ಮಾಡಿದರು, ಮಾಡುತ್ತಿದ್ದಾರೆ. ಇಬ್ಬರು ಹೆಣ್ಣುಮಕ್ಕಳು, ಒಬ್ಬ ಹುಡುಗ ಇವರ ಆರೈಕೆಯ ಜೊತೆಗೆ ಮೂರು ಅಂಗಡಿಗಳ ಜಾಹೀರಾತು ವ್ಯವಸ್ಥೆಯನ್ನು ಶ್ರೀಮತಿ ವಾಟುಮಲ್ಲರೇ ಖುದ್ದಾಗಿ ಮಾಡುತ್ತಿದ್ದರು. ಒಂದು ವರ್ಷ ಮುಖ್ಯ ಅಂಗಡಿಯ ಯಜಮಾನ್ಯವನ್ನೂ ವಹಿಸಿದ್ದರು. ನಂಬಿಗೆಯ ಕೆಲಸಗಾರರ ಬೆಂಬಲದಿಂದ ವರ್ಷಕ್ಕೆ ೨೦ ಲಕ್ಷ ಡಾಲರು ಲಾಭ ಪಡೆಯುವಂತಾದರು. ಈ ಹಣ ಹೇಗೆ ವೆಚ್ಚವಾಗಬೇಕು? ವಾಟುಮಲ್ಲರ ತರುಣ ಜೀವನದ ಕನಸುಗಳು ಒಂದೊಂದಾಗಿ ಬರಲು ಪ್ರಾರಂಭವಾಯಿತು. ಭಾರತವನ್ನು ಅಮೇರಿಕದಂತೆ ಮಾಡಬೇಕು. ಭಾರತೀಯರ ಜೀವನ ಎಲ್ಲ ರೀತಿಯಿಂದಲೂ ಮೇಲಾಗಬೇಕು. ಈ ಹಂಬಲದ ಜೊತೆಗೆ, ಭಾರತದ ರೋಗರುಜನಾದಿಗಳನ್ನು ತಡೆಗಟ್ಟಬೇಕೆಂಬ ಆಶೆ ಬೇರೆ.

ಭಾರತದ ಮುಕ್ತಿ, ಕೈಗಾರಿಕಾಭಿವೃದ್ಧಿಯಲ್ಲಿ ತಮ್ಮ ಧನವ್ಯಯ ಎಂದು ಮನಗಂಡರು ವಾಟುಮಲ್ಲರು. ಭಾರತದಲ್ಲಿ ಸಣ್ಣ ಸಣ್ಣ ಮನೆಯ ಉಪಯೋಗಕ್ಕೆ ಬರುವ ಯಂತ್ರಗಳನ್ನು ತಯಾರಿಸಲು ಕಬ್ಬಿಣ ಬೇಕಾದಷ್ಟು ಸಿಕ್ಕುತ್ತಿದ್ದಿತಾದರೂ ಅದಕ್ಕೆ ಬೇಕಾದ ಬುದ್ಧಿ (ವಿಜ್ಞಾನ) ಯ ಕೊರತೆಯಿತ್ತು. ೭ ಲಕ್ಷ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಕೊಡಲು ನೀರಿನ ಶಕ್ತಿ ಬೇಕಾದಷ್ಟಿದ್ದರೂ ಅದನ್ನು ತಯಾರಿಸಲು ಜ್ಞಾನ ಪಡೆದ ಇಂಜನಿಯರುಗಳ ಕೊರತೆ ಇತ್ತು. ಔಷಧ ಸಾಮುಗ್ರಿಗಳು ದೊರಕಿದರೂ ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಲು ಹೇಳುವ ವೈದ್ಯರ ಕೊರತೆ ಕಂಡು ಬಂದಿತು. ತನ್ನ ಲಾಭದ ಹಣದಲ್ಲಿ ಕೆಲವನ್ನು ಈ ನಿಟ್ಟಿಗೆ ವೆಚ್ಚ ಮಾಡಬಯಸಿ, ಯಾವ ರೀತಿಯಲ್ಲಿ ಉಪಯೋಗಿಸಬೇಕೆನ್ನುವ ಬಗ್ಗೆ ಗೆಳೆಯರನ್ನು ಸಲಹೆ ಕೇಳಿದರು. ಆ ವಕೀಲ ಗೆಳೆಯರು "ಜೆ. ಜೆ." (ಇದು ಅಮೇರಿಕನ್ನರು ಪ್ರೀತಿಯಿಂದ ಕರೆಯುವ ಹೆಸರು) ಹೇಳಿದ್ದನ್ನೆಲ್ಲ ಸಾವಧಾನದಿಂದ ಕೇಳಿ ಕೊನೆಗೆ, ೪೦ ಕೋಟಿ ಜನರ ಅಭಿವೃದ್ಧಿ ಒಬ್ಬನೇ ಹೇಗೆ ಮಾಡಬಲ್ಲ ಎಂದು ಉದ್ಗಾರ ತೆಗೆದರು. ಅದಕ್ಕೆ ಕೋಟಿಗಟ್ಟಲೇ ಹಣ, ಲಕ್ಷಗಟ್ಟಲೆ ಜನಸಹಾಯ ಬೇಕೆಂದರು. ಜೆ. ಜೆ. ತಕ್ಷಣ ಉತ್ತರವಿತ್ತರು. "ದೂರದ ಹಾದಿ ನಡೆಯಲು ಮೊದಲು ಹೆಜ್ಜೆಯಿಡಬೇಕು. ಅಂದರೇನೆ ಕೊನೆಗೆ ತುದಿ ಮುಟ್ಟುವುದು. ಕಾರಣ, ಆ ಪ್ರಯಾಣ ಮಾಡಲು ನಾ ಮೊದಲ ಹೆಜ್ಜೆಯಿಡುವೆ" ಎಂದರು. ಆ ವಕೀಲರು ಮೂಗು ಮುರಿದುಕೊಂಡರು.

ಭಾರತದಿಂದ ಬುದ್ಧಿವಂತರಾದ ವಿದ್ಯಾರ್ಥಿಗಳನ್ನು ಅಮೇರಿಕಕ್ಕೆ ಕರೆತಂದು ಅವರಿಗೆ ಇಲ್ಲಿಯ ವೈಜ್ಞಾನಿಕ ಬೆಳವಣಿಗೆಯ ರೀತಿ ನೀತಿಗಳನ್ನು ಕಲಿತುಕೊಳ್ಳಲು ಅನುಕೂಲವಾಗುವಂತೆ ಒಂದು ಯೋಜನೆಯನ್ನು ತಯಾರಿಸಿದರು. ಅದಕ್ಕಾಗಿ ಹಣ ಕೂಡಿಸಲು ತಮ್ಮ ವ್ಯಾಪಾರದಲ್ಲಿಯೇ ನಿಧಿ ಸಂಸ್ಥೆಯನ್ನು ಒಂದು ಪಾಲುಗಾರನನ್ನಾಗಿ ಮಾಡಿ ಮೊದಲನೆಯ ವರ್ಷ, ೧೫೦೦೦ ಡಾಲರು ಹಣವನ್ನು [illegible] ಭಾರತೀಯ ವಿದ್ಯಾರ್ಥಿಗಳಿಗೆ ವಾಟುಮಲ್ಲರ ಭಾಗ್ಯನಿಧಿಯ ಸಹಾಯ ದೊರೆಯಿತು. ಅವರಿಗೆ ಹೋಗಿ ಬರಲು ಅನುಕೂಲವಾಗುವಂತೆ ದಾರಿಯ ಖರ್ಚು, ವಿಶ್ವವಿದ್ಯಾನಿಲಯದ ಫೀ, ಪುಸ್ತಕಗಳ ಖರ್ಚು ಮತ್ತು ಜೀವನಕ್ಕಾಗಿ ತಿಂಗಳೊಂದಕ್ಕೆ ೧೫೦ ಡಾಲರು (೫೦೦ ರೂ.) ಹೀಗೆ ೨ ವರ್ಷದ ಖರ್ಚು ಕೊಡಲಾಯಿತು. ಜಾತಿಯ ಗೊಂದಲವಿಲ್ಲದೆ ಭಾರತದ ಎಲ್ಲ ವಿದ್ಯಾರ್ಥಿಗಳೂ ಈ ಅವಕಾಶ ಪಡೆಯಲು ಅನುಕೂಲ ಮಾಡಿಕೊಡಲಾಯಿತು. ಆದರೆ ಪ್ರತಿಭಾವಂತರಾದ ೧೪ ವಿದ್ಯಾರ್ಥಿಗಳೂ ಈ ಲಾಭ ಪಡೆದರು. ಇದರಲ್ಲಿ ಕನ್ನಡಿಗರಿಗೂ ಒಂದು ಸ್ಥಾನ ಸಿಕ್ಕಿದ್ದು, ಹೆಮ್ಮೆಯ ಮಾತೇ ಸರಿ. ವಿದ್ಯಾರ್ಥಿಗಳನ್ನು ಆರಿಸುವಾಗ, ಪ್ರತಿಭೆ ಮತ್ತು ಯೋಗ್ಯತೆ, ಹಿಂತಿರುಗಿ ಭಾರತಕ್ಕೆ ಸೇವೆ ಸಲ್ಲಿಸುವ ಚೈತನ್ಯ ಇವೇ ಅಳತೆಗೋಲಾಗಿದ್ದವು.

ವಾಟುಮಲ್ಲರ ಔದಾರ್ಯ ಭಾರತದಲ್ಲಿ ಪ್ರಕಟವಾದಾಗ, ಭಾರತದ ವಿದ್ಯಾಪ್ರವೀಣರೆಲ್ಲ ಈ ಕಾರ್ಯ ಸ್ತುತ್ಯ ಎಂದರು. ೨೦೦೦ ಅರ್ಜಿಗಳು ಧಾರಾಕಾರವಾಗಿ ಬಂದವು. ಇವರಲ್ಲಿ ೧೪ ವಿದ್ಯಾರ್ಥಿಗಳನ್ನು ಆರಿಸಲಾಯಿತು. ಆರಿಸಿದ ನ್ಯಾಯಾಧೀಶರು ಅಮೇರಿಕದ ಸುಪ್ರಸಿದ್ಧ ವೈಜ್ಞಾನಿಕರು ಮತ್ತು ವಿದ್ಯಾಪ್ರವೀಣರು.

ಇವರ ಪೈಕಿ ಶ್ರೀ ಮಹೇಂದ್ರ ಭಟ್ಟರು ಮತ್ತು ಅವರ ಪತ್ನಿ, ಟ್ಯೂಲೇನ್ ವಿಶ್ವವಿದ್ಯಾನಿಲಯದಲ್ಲಿ ಆರೋಗ್ಯ ವಿಭಾಗ ಅಭ್ಯಾಸ ಮಾಡುತ್ತಿದ್ದಾರೆ. ಮಂಗಳೂರು ಕನ್ನಡಿಗರು ಅವರ ಪ್ರತಿಭೆಯನ್ನು ಶಾಲೆಯ ಅಧಿಕಾರಿಗಳು ಪ್ರಶಂಸಿದ್ದಾರೆ. ಡಾ, ಲಕ್ಷ್ಮಿ ಮತ್ತು ಶ್ರೀಮತಿ ನಸಿರುದ್ದೀನ್ ಇವರು ತಾಯಿಯ ಆರೈಕೆ, ಗೃಹ ಸಂಸಾರ ನೀತಿಗಳನ್ನು ಕಲಿಯುತ್ತಿದ್ದಾರೆ. ಸೂಲಗಿತ್ತಿ ವಿದ್ಯೆಯು ಇವರ ಕಾರ್ಯಕ್ರಮದಲ್ಲಿದೆ.

ಬೊಂಬಾಯಿಯ ಶ್ರೀ ಎಂ. ಎ. ಲೋಕಂಡೆಯವರು ರಟ್ಗರ್ ವಿಶ್ವವಿದ್ಯಾನಿಲಯದಲ್ಲಿ, ಕೊಳಕು ನಿವಾರಣಾ ವಿದ್ಯೆಯನ್ನು ಕಲಿಯುತ್ತಿದ್ದಾರೆ. ಬೊಂಬಾಯಿನ ಸಾವಿರಾರು ಕೂಲಿಕಾರರು ವಾಸಿಸುವ ಕೊಳಕು ಗೃಹಗಳನ್ನು ಸ್ವಚ್ಛ ಮಾಡುವ ಸಲುವಾಗಿಯೇ ಇವರಿಲ್ಲಿಗೆ ಆ ವಿದ್ಯೆಯನ್ನು ಕಲಿಯಲು ಬಂದಿದ್ದಾರೆ.

ಭಾರತದ ಆಹಾರವನ್ನು ಹೆಚ್ಚಿಸಲು ಮೀನುಗಳ ಸಂಬಂಧವಾಗಿ ಹೆಚ್ಚಿನ [illegible] ಒಳ್ಳೆಯ ಆಹಾರದ ಮೀನುಗಳನ್ನು ತಯಾರಿಸುವ ಬಗೆಯನ್ನು ಕಲಿಯುತ್ತಿರುವವರು ಕನ್ನಡಿಗರಾದ ಮೈಸೂರಿನ ಶ್ರೀ ಹೆಚ್. ರಂಗಯ್ಯಂಗಾರ್ ಎಂಬುವರು ಇವರು ಸುಪ್ರಸಿದ್ಧ ಕ್ರಿಕೆಟ್ ಆಟಗಾರರು. ವಾಷಿಂಗ್‌ಟನ್ ವಿಶ್ವವಿದ್ಯಾನಿಲಯದಲ್ಲಿ ಸೀಯಾಟಲ್ ನಗರದಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಮೀನಿನ ರುಚಿಯನ್ನು ಕಂಡ ಐಯ್ಯಂಗಾರರು ಭಾರತದ ೪೦೦೦ ಮೈಲ ಸಮುದ್ರ ದಂಡೆಯಲ್ಲಿ ಮತ್ತು ೬೦೦೦೦೦ ಚದರ ಮೈಲಿ ಇರುವ ನದಿ, ಕೊಳ, ಸರೋವರಗಳಲ್ಲಿ ಮೀನು ಹಿಡಿಯುವದು. ಅವರ ಅದೃಷ್ಟ ಹೇಗಿದೆಯೋ ನೋಡಬೇಕು.

> ಕೊಲಂಬಿಯಾ (ಅಮೇರಿಕಾ) ದಲ್ಲಿಯ ಭಾರತೀಯ ವಿದ್ಯಾರ್ಥಿಗಳೆಲ್ಲರೂ ಸೇರಿ ಒಂದು ಸಂಘವನ್ನು ಸ್ಥಾಪಿಸಿಕೊಂಡು ಶ್ರೀ ನಾಡಿಗ ಕೃಷ್ಣಮೂರ್ತಿಯವರನ್ನು ಅದರ ಪ್ರಥಮ ಕಾರ್ಯದರ್ಶಿಯನ್ನಾಗಿ ಮಾಡಿದ್ದಾರೆ. ಭಾರತದಿಂದ ಬರುವ ಹೊಸ ವಿದ್ಯಾರ್ಥಿಗಳಿಗೆ ಅನುವು ಮಾಡಿಕೊಡುವದು, ಭಾರತದ ಸಂಸ್ಕೃತಿಯನ್ನು ಅಮೇರಿಕನ್ನರು ಮತ್ತು ಇತರರಲ್ಲಿ ಹರಡುವದು ಮತ್ತು ಭಾರತೀಯ ನಿವಾಸ ಒಂದನ್ನು ಸ್ಥಾಪಿಸುವದು ಇವೇ ಮೊದಲಾದವು ಈ ಸಂಘದ ಮುಖ್ಯ ಗುರಿಗಳು.

ಪ್ರಪಂಚದ ಮೂರನೆ ಒಂದು ಭಾಗದ ಜಾನುವಾರುಗಳಿರುವ ಭಾರತದ ಜಾನುವಾರುಗಳ ಆರೈಕೆ ಪಾಲನೆವಿದ್ಯೆಯನ್ನು ಕಲಿಯಲು ಪಾಟ್ನಾದ ಶ್ರೀ ಅಮರ ರಾಥೋರ್‌ರವರು ಬಂದಿದ್ದು ಅವರು ಐಯೋವಾ ವಿಶ್ವವಿದ್ಯಾನಿಲಯದಲ್ಲಿ ಉತ್ತಮ ರೀತಿಯ ಹಾಲು ತಯಾರಿಸುವ ರೀತಿಯನ್ನು ಕಲಿಯುತ್ತಿದ್ದಾರೆ.

ವಿಶ್ವವಿದ್ಯಾನಿಲಯಗಳಲ್ಲಲ್ಲದೆ ಅನೇಕ ಕಾರಖಾನೆಗಳಲ್ಲಿಯೂ ವಾಟುಮಲ್ ವಿದ್ಯಾರ್ಥಿಗಳು ತರಬೇತುಹೊಂದುತ್ತಿದ್ದಾರೆ. ನಾಲ್ವರು ತರುಣ ಭಾರತೀಯ (ವಿದ್ಯಾರ್ಥಿಗಳು) ಇಂಜನಿಯರುಗಳು ಆಲಿಸ್ ಚಾಲ್ಮರ್ಸ್‌ರವರ ಸಿಮೆಂಟ್ ಕಾರಖಾನೆಯಲ್ಲಿ ಎಲೆಕ್ಟ್ರಿಕ್ ಮಿಲ್ಲುಗಳು, ಮೋಟಾರುಗಳು, ಪವರ್ ಜನರೇಟರನ್ನು ಚಿತ್ರಿಸುವ ಬಗೆ ಮುಂತಾದುವನ್ನು ಕಲಿಯುತ್ತಿದ್ದಾರೆ. ಮೂವರು ಸಿಗ್ರಾಮ್ಸ್ ಫರ್‌ಮೆಂಟಿಂಗ್ ಶಾಲೆಯಲ್ಲಿ ಕೈಗಾರಿಕೆಗೆ ಆಲ್ಕೋಹಾಲ ತಯಾರಿಸುವ ರಸಾಯನ ಶಾಸ್ತ್ರಜ್ಞರಾಗಿ ಕೆಲಸ ಮಾಡುತ್ತಿದ್ದಾರೆ. ಇನ್ನೊಬ್ಬರು ಗಿಸೋಲ್ಟ್ ಮೇಷಿನ್ ಕಂಪೆನಿಯಲ್ಲಿ ಸಣ್ಣ ಯಂತ್ರಗಳನ್ನು ಮೋಟಾರುಗಳನ್ನು ತಯಾರಿಸುವ ವಿಧಾನವನ್ನು ಕಲಿಯುತ್ತಿದ್ದಾರೆ.

ಈ ವರ್ಷ ಶ್ರೀ ವಾಟುಮಲ್ ದಂಪತಿಗಳು ತಮ್ಮ ೨೫ ನೇ ವರ್ಷದ ಮದುವೆಯ ಜ್ಞಾಪಕಾರ್ಥಕವಾಗಿ, ಸಣ್ಣ ಕ್ರಿಮಿಗಳ ವಿಭಜನೆಯನ್ನು ಗುರ್ತಿಸುವ Beckman Spectrophotometer ನ್ನು ಭಾರತಕ್ಕೆ ದಾನ ಮಾಡಿದ್ದಾರೆ.

ಮದರಾಸಿನ ಡಾ. ಪುರುಷೋತ್ತಮರು ಮತ್ತು ಪೂನಾದ ಶ್ರೀಮತಿ ತಾರಾಧಿಯೋಧರರು ರಾಷ್ಟ್ರದ್ಯಂತ ಆಹಾರ ಪೂರೈಕೆಯ ನೀತಿಯನ್ನು ಕಲಿಯಲು ಬೋಸ್ಟನ್ ಮತ್ತು ವಿಸ್‌ಕಾನ್‌ಸಿನ್ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದಾರೆ. ಕಡಿಮೆ ಆಹಾರ ಸೇವಿಸಿದರೂ ಅದರ ಶಕ್ತಿ ಕುಂದದಂತೆ ಮಾಡಿ ಭಾರತದ ಕ್ಷಾಮ ನಿವಾರಣೆ ಇವರ ಗುರಿ.

ಶ್ರೀ ವಾಟುಮಲ್ಲರು ತಮ್ಮ ವಿದ್ಯಾರ್ಥಿ ಯೋಜನೆಯೊಂದಿಗೆ ಭಾರತ-ಅಮೇರಿಕೆಯ ಬಾಂಧವ್ಯ ಬೆಳೆಯಿಸಲು, ಸುಪ್ರಸಿದ್ಧ ಜ್ಞಾನಿಗಳನ್ನು ಭಾರತದಿಂದ ಕರೆಯಿಸುವ ಏರ್ಪಾಡು ಮಾಡಿದ್ದಾರೆ. ಹಾಗೆಯೇ ಅಮೇರಿಕದಿಂದಲೂ ಕಳುಹಿಸಿದ್ದಾರೆ. ಭಾರತದ ಹೆಸರಾಂತ ವೇದಾಂತಿಗಳಾದ ಸರ್ ಎಸ್. ರಾಧಾಕೃಷ್ಣನ್ನರು ಅಮೇರಿಕೆಯಲ್ಲಿ ಭಾರತದ ಬಗ್ಗೆ ಭಾಷಣ ಮಾಡಲು ಇದೇ ಜನವರಿಯಲ್ಲಿ ಬರುವವರಿದ್ದಾರೆ. ಅಮೇರಿಕದ ಸುಪ್ರಸಿದ್ಧ ಚರಿತ್ರಕಾರ, ಪಲಿಟ್ಜರ್ ಬಹುಮಾನಿತ ಡಾ. ಮೆರ್ಲಿ ಕರ್ಟಿ, ನಾಲ್ಕು ತಿಂಗಳ ವರೆಗೆ ಭಾರತದಲ್ಲಿ ಸಂಚಾರ ಮಾಡಿ ಅಮೇರಿಕದ ಬಗ್ಗೆ ಭಾಷಣಗಳನ್ನು ಮಾಡಿದರು. ಲಕ್ನೋದಲ್ಲಿ ನೆರೆದ ಸಭಿಕರು ಕರ್ಟಿಯವರ ಭಾಷಣಕ್ಕೆ ಮನಸೋತು ಲಕ್ನೋ ವಿಶ್ವವಿದ್ಯಾನಿಲಯದಲ್ಲಿ, ಅಮೇರಿಕದ ಚರಿತ್ರೆಯಲ್ಲಿ ಕುಶಲನಾದ ವಿದ್ಯಾರ್ಥಿಗೆ ಬಹುಮಾನವೊಂದನ್ನು ಕೊಡಲು, "ಮೆರ್ಲಿ ಕರ್ಟಿ ಅವಾರ್ಡ" ನ್ನು ಸ್ಥಾಪಿಸಿದ್ದಾರೆ. ಈಗ

[ಮುಂದಿನ ಪುಟಕ್ಕೆ]

ವಿವಿಧ ಪ್ರಪಂಚ

ಅಣುಬಾಂಬಿನ ಗಂಡ!

'ಆಟಂ ಬಾಂಬು, ಆಟಂ ಬಾಂಬು' ಎಂದು ಇಂದು ಎಲ್ಲರೂ ಅದರ ವಿನಾಶಕ ಶಕ್ತಿಗಂಜಿ ಭಯಾಶ್ಚರ್ಯಗಳನ್ನು ವ್ಯಕ್ತಪಡಿಸುತ್ತಾರೆ. ಅದಕ್ಕೂ ಒಂದು ಬಲವಾದ ವೈರಿಯಿದೆ ಎಂಬುದನ್ನು ತಿಳಿದರೆ ಆಟಂ ಬಾಂಬು ತಯಾರಿಕೆಯಲ್ಲಿ ಅಹೋರಾತ್ರ ದುಡಿಯುತ್ತಿರುವ ಅಮೇರಿಕ ದಂತಹ ರಾಷ್ಟ್ರಗಳಿಗೆ ಹೇಗಾಗಬಹುದು? ವನಚರಗಳಿಗೆಲ್ಲ ಸಿಂಹ ರಾಜ; ಸಿಂಹವನ್ನು ನುಂಗುವಂಥದು ೩ ಕೋಡು ೮ ಕಾಲಿನ ಶರಭ; ಅದರ ನೆತ್ತಿಯನ್ನು ಕುಕ್ಕಬಲ್ಲುದೆಂದರೆ ಗಂಡಭೇರುಂಡ— ಎಂದು ಕವಿ ಸಮಯವಿರುವಂತೆ ಭಾರತದಲ್ಲಿಂದು 'ಅಣುಬಾಂಬಿನ ಗಂಡ'ನೆನಿಸಿದ ವಿಶ್ವಕಿರಣದ ಸಂಶೋಧನ ಬಹಳ ಉತ್ಸಾಹದಿಂದ ಸಾಗಿದೆ.

ಅಮೇರಿಕದಲ್ಲಿಯ ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ (ಮಹಾವಿದ್ವಾನ್) ಪದವಿಯನ್ನು ಪಡೆದುಬಂದ ೩೭ ವರ್ಷ ವಯಸ್ಸಿನ ಡಾ. ಪಯರ ಸಿಂಗಜಿಲ್ ಎಂಬವರೀಗ Tata Institute of Fundamental Research ತಾತಾರವರ ಮೂಲಭೂತ ಸಂಶೋಧನ ಸಂಸ್ಥೆಯಲ್ಲಿ ವಿಶ್ವಕಿರಣ ಸಂಶೋಧನವನ್ನು ನಡೆಸತೊಡಗಿದ್ದಾರೆ. ಡಿಸೆಂಬರ ತಿಂಗಳ ಬೆಳಗಿನ ಜಾವದ ಚಳಿಯಲ್ಲಿ ಡಾ. ಜಿಲ್ಲರು ಮುಂಬಯಿಯ ಜುಹೂದಿಂದ ಪ್ರಯೋಗಾರ್ಥ ಜಲಜನಕ (Hydrogen) ವನ್ನು ತುಂಬಿ "ಬಲೂನು"ಗಳನ್ನು ಮೇಲಕ್ಕೆ ಕಳುಹಿದರು. ಅವು ೮೦ ಸಾವಿರ ಅಡಿ ಎತ್ತರ ಹೋಗಿ ಮುಟ್ಟಿವೆಯಂತೆ!

ವಿಜ್ಞಾನಕ್ಕೆ ಗೊತ್ತಿರುವ ಕಿರಣಗಳಲ್ಲೆಲ್ಲ ಈ Cosmic Rays— ವಿಶ್ವಕಿರಣಗಳೇ ಅತ್ಯಂತ ಪ್ರಬಲವಾದುವು. ಕಣ್ಣಿಗೆ ಕಾಣುವ ಸಾಧಾರಣ ಸೂರ್ಯಕಿರಣಗಳಲ್ಲಿ ೩ 'ವ್ಹೋಲ್ಟ' ಶಕ್ತಿಯಿದ್ದರೆ ಈ ಕಿರಣದ "ಇಲೆಕ್ಟ್ರಾನ್" ಗುಂಡೊಂದರಲ್ಲಿ ನೂರು ಕೋಟಿ 'ವ್ಹೋಲ್ಟ'ನಷ್ಟು ಶಕ್ತಿ ತುಂಬಿದೆ. ಈ ಕಿರಣದಲ್ಲಿಯ ವಸ್ತುಹೃದಯ ಭೇದಕ ಅಣುವಿಗೆ "ಮೆಜೊಟ್ರೋನ್" ಎನ್ನುತ್ತಾರೆ. ಇದು ಒಂದು Atom- ಪರಮಾಣುವನ್ನು ೧೦ ಸಾವಿರ ಚೂರುಗಳಾಗಿ ಒಡೆಯಬಲ್ಲುದಂತೆ!

ಡಾ. ಜಿಲ್ಲರ ಸಂಶೋಧನದಿಂದ ಇಲ್ಲಿಯ ವರೆಗೆ ಜಗತ್ತಿನ ವಿಜ್ಞಾನಿಗಳಿಗೆ ತಿಳಿಯದ ಹೊಸ ವಿಧದ ಮೂಲಭೂತ ಕಣಗಳು ಹೊರಬಿದ್ದಿವೆ. ಅವರು ತಮ್ಮ ಪ್ರಯೋಗ ಶಾಲೆಯಲ್ಲಿ ಇಷ್ಟರ ವರೆಗೆ ವಿಶ್ವಕಿರಣ ಶಕ್ತಿಯನ್ನು ಹಿಡಿದಿಡುವ ಕಾರ್ಯವನ್ನು ಮಾಡಿಲ್ಲ. ಆದರೆ ಇದನ್ನು ಮುಂದುವರಿಸುವುದರಿಂದ ಸೃಷ್ಟಿಯ ಮೂಲಭೂತ ಬೀಜಕಣದ ಚೂರುಗಳಿಂದ ಅದ್ಭುತಪರಿಮಾಣದ ಶಕ್ತಿಯನ್ನು ಒದಗಿಸಿಕೊಂಡು ಕಾರ್ಯನಿರ್ವಾಹಕ್ಕೆ ಬಳಸಬಹುದೆಂದು ನಂಬಲಾಗಿದೆ.

ಅಗ್ನ್ಯಸ್ತ್ರಕ್ಕೆ ವರುಣಾಸ್ತ್ರದಿಂದ ಪ್ರತೀಕಾರ, ಪಶುಬಲಕ್ಕೆ ಪಾಶುಪತ ಬಲದಿಂದ ಸೋಲು; ಹಾಗೇ ಪರಮಾಣು ಬಾಂಬಿಗಿಂದು ವಿಶ್ವಕಿರಣವು ಪ್ರತ್ಯಸ್ತ್ರವಾಗಿ ನಿಲ್ಲಬಹುದೆಂದು ನಿರೀಕ್ಷಿಸಲಾಗಿದೆ. ಸ್ವತಂತ್ರ ಭಾರತವು ಜಗತ್ತಿನವರು ನಿಂತು ಶಾಂತಿ ಸಂದೇಶವನ್ನು ಬೀರಬೇಕಾದರೆ 'ಜ್ಞಾನೇ ಮೌನಂ ಕ್ಷಮಾ ಶಕ್ತೌ' ಎಂಬ ನುಡಿಯಂತೆ ಉಳಿದ ರಾಷ್ಟ್ರಗಳಿಗೆ ಸಮಬಲವೆನಿಸಿದರೆ ಮಾತ್ರ ಅದರ ಶಾಂತಿಸಂದೇಶ ಪರಿಣಾಮಕಾರಿಯಾದೀತಲ್ಲದೆ ಬರಿದೆ ಅಸಹಾಯಕತೆಯಿಂದ ಕೂಗಿದರೆ ಫಲವುಂಟೇ?

ಲೋಹನಿಕಷ

ವಿದ್ಯುತ್ತಿನಿಂದ ಆಗದ ಕೆಲಸವಿಲ್ಲ. ವಿದ್ಯುಲ್ಲತೆಯೇ ವಿಜ್ಞಾನ ಸಾಮ್ರಾಜ್ಞಿ. ಇದಕ್ಕೆ ಹೊಸ ದೃಷ್ಟಾಂತವೆಂದರೆ, ಲೋಹಗಳನ್ನು ಗುರುತಿಸ ಉಪಯೋಗಿಸುವ ಒಂದು ವಿದ್ಯುದ್ಯಂತ್ರ. ಬೇರೆ ಬೇರೆ ಲೋಹಗಳನ್ನು ಇದು ಗುರುತಿಸುತ್ತದೆ. ಒಂದೇ ಲೋಹದ ಬೇರೆ ಬೇರೆ ಬಗೆಯನ್ನೂ ನಿರ್ದೇಶಿಸುತ್ತದೆ. ಬಣ್ಣ, ಪಾಲಿಶ್, ತುಕ್ಕು ಈ ಎಲ್ಲವನ್ನೂ ಭೇದಿಸಿ ಅದು ಲೋಹದ ನಿಜಜಾತಿಯನ್ನು ಬಯಲಿಗೆಳೆಯಬಲ್ಲುದು.

ಈ ಸಾಧನವನ್ನು ಉದ್ಯೋಗ ಕೇಂದ್ರಗಳಲ್ಲಿ ಬಳಕೆಗಾಗಿ ತಯಾರಿಸಿದ್ದಾರಾದರೂ ಅದನ್ನೀಗ ಬೆಳ್ಳಿಯ ನಾಣ್ಯವನ್ನು ಖೋಟಾ ನಾಣ್ಯಗಳಿಂದ ಬೇರ್ಪಡಿಸಲು ಬಳಸಲಾಗುತ್ತಿದೆಯಂತೆ. ಇದು ಸ್ಟರ್ಲಿಂಗ್ ಬೆಳ್ಳಿಯನ್ನೂ ಬೆಳ್ಳಿಯ ತಟ್ಟಿಗಳನ್ನೂ ಬೇರೆ ಬೇರೆ ಗುರುತಿಸುತ್ತದೆ. ಉಕ್ಕಿನ ವಿವಿಧ ರೀತಿಗಳನ್ನು ಬೇರ್ಪಡಿಸಿ ಹೇಳುತ್ತದೆ. ತಾಮ್ರ ಹಿತ್ತಾಳೆಯ ಮಿಶ್ರಣಗಳನ್ನು ಗಿಲೀಟು ಮೋಸಗಳಿಂದ ಬೇರೆ ಮಾಡಿ ತೋರಿಸುತ್ತದೆ.

ಈ ಯುರಿತ್ಯ ಲೋಹಗಳ ಭೌತಿಕ, ರಾಸಾಯನಿಕ ಭೇದಗಳಂತೆ ಅವುಗಳ ವೈದ್ಯುತ ಮತ್ತು [illegible] ಶಕ್ತಿಗಳೂ ಬೇರೆ ಬೇರಾಗಿರುತ್ತವೆ. ಇದು ತನ್ನ ಮುಖದ ಮೇಲೆ ಗಡಿಯಾರ ಗಂಟೆ ತೋರಿಸುವಂತೆ ಲೋಹವೊಂದು ನಿರ್ದಿಷ್ಟ ವರ್ಗದಿಂದ ಎಷ್ಟು ಮಟ್ಟಿಗೆ ಭಿನ್ನವಾಗಿದೆ ಎಂಬುದನ್ನು ತೋರಿಸುತ್ತದೆ.

ಈ ಯಂತ್ರವು ನೋಡುವುದಕ್ಕೆ ಟೇಬಲ್ ಮಾಡೆಲ್ ರೇಡಿಯೋದ ಹಾಗೆ ಲೋಹದ ಪೆಟ್ಟಿಗೆಯಲ್ಲಿರುತ್ತದೆ. ಸೂಜಿಯು ಗುರುತಿನಿಂದ ಮುಳ್ಳು ಎಡಬಲಕ್ಕೆ ಸರಿದಾಡಿ ಇಟ್ಟ ಲೋಹದ ತುಣುಕಿನ ಸ್ವರೂಪವನ್ನು ಮಾಪಕ ವ್ಯವಸ್ಥೆಯಿರುವ ತನ್ನ ಮುಖದಲ್ಲಿ ತೋರಿಸುತ್ತದೆ!

ಉಪ್ಪರಿಗೆ ಬೀದಿ

ಬ್ರಿಟಿಶ ಸಂಸ್ಥೆಗೆ ಮಾಡಲಾದ ಸೂಚನೆಗಳನ್ನು ಕಾರ್ಯ ರೂಪಕ್ಕೆ ತಂದರೆ ಇಂಗ್ಲೆಂಡಿನಲ್ಲಿ ಉಪ್ಪರಿಗೆಯಿಂದ ಉಪ್ಪರಿಗೆಗೆ ಹರಿವ ರಸ್ತೆಗಳು ತಯಾರಾಗಬಹುದೆಂದು ಹೇಳಲಾಗಿದೆ. ಈ ರಸ್ತೆಯು ನೂರಡಿ ಎತ್ತರದ ಅಂಗಡಿ ಮನೆಗಳ ಮೇಲೆ ರಚಿಸಲ್ಪಡಬಹುದು. ಅಡ್ಡ ರಸ್ತೆಬರುವಲ್ಲಿ ಸೇತು ಕಟ್ಟಬಹುದು.

ಇದರಿಂದ ಬಹಳ ಅನುಕೂಲವಿದೆ. ಇದೆಂದೂ ಭೂಗತವಾದ ಉಪಮಾರ್ಗ, ಜಲಮಾರ್ಗ, ವಾಯುನಾಳ, ಕಾಲುವೆ ಮುಂತಾದವುಗಳಿಗೆ ಯಾವ ಬಾಧಕವನ್ನೂ ಉಂಟುಮಾಡದು; ಟೆಲಿಫೋನ್ ಮುಂತಾದುದರ ವೈದ್ಯುತ ತಂತಿಗಳಿಗೂ ಇದರಿಂದ ತೊಂದರೆ ಸಂಭವಿಸದು. ಈ Roof Top Roadways ಮನೆಮೇಲಿನ ದಾರಿಗಳ ರಚನೆಯಿಂದ ಭೂಮಿಯ ಮೇಲೆ ಎತ್ತರಿಸಿದ ರಸ್ತೆ ಮುಂತಾದವನ್ನು ರಚಿಸುವ ಅಗತ್ಯ ತಪ್ಪುತ್ತದೆ; ದೊಡ್ಡ ದೊಡ್ಡ ವ್ಯಾಪಾರ ಗೃಹಗಳಿಗೆ ವಾಹನಾದಿಗಳಿಂದ ಅಪಘಾತ ಉಂಟಾಗಿ ಆಗಾಗ ಆಗುವ ಸಾಮಾನು ಮುಂತಾದ್ದರ ನಷ್ಟ ಉಂಟಾಗುವುದು ಇಲ್ಲವಾಗುತ್ತದೆ.

ಜೀವನ ಸೌಕರ್ಯ ಹೆಚ್ಚಿಸಲು ವಿಜ್ಞಾನವಿಂದು ಬಹಳ ದುಡಿದಿದೆ. (ಅದರ ನಾಶಕ್ಕೂ ಹಾಗೇ ದಾರಿ ಹಾಕಿಕೊಟ್ಟಿದೆ). ಮಹಡಿಯಿಂದ ಮಹಡಿಗೆ ದಾಟಿಕೊಂಡು "ಕಿಂಗ್ ಕಾಂಗ್" ಇಲ್ಲವೆ ಕರಿಮೊಗದ ಮಂಗ (ಮುಸ್ಯ) ತಿರುಗಾಡಿದಂತೆ ಮನುಷ್ಯರು ತಿರುಗಾಡಲು ಅನುಕೂಲ ಮಾಡಿಕೊಳ್ಳುವುದೊಂದು ಸೋಜಿಗವಲ್ಲವೆ? ಒಂದು ಸುಖವೆನಿಸಿದರೆ, ಅದಕ್ಕಿಂತ ಮುಂದಿನ ಹೆಚ್ಚಿನ ಸುಖಯಾವುದು?—ಎಂದು ಮನುಷ್ಯ ಹುಡುಕುತ್ತಾನೆ. ಇದು ಅದಕ್ಕೊಂದು ಉದಾಹರಣೆ.

ಹಣ ಎಣಿಸುವ ಯಂತ್ರ

ನಿನ್ನದೇ ಆದರೆ ಎಲ್ಲ ಹಣ, ಬಹಳ ಬಹಳ ರೊಕ್ಕ ಎಣಿಸುತ್ತ ಕೂತುಕೊಳ್ಳುವುದೆಂದರೆ ಸ್ವರ್ಗಕ್ಕೆ ಮೂರೇ ಗೇಣು ಮಾತ್ರ ಕಡಿಮೆಯೆನಿಸುವುದು ಸಹಜ; ಆದರೆ ಒಂದು ಬ್ಯಾಂಕಿನಲ್ಲಿ ಕುಳಿತು ಇನ್ನೊಬ್ಬರ ರೊಕ್ಕ ಎಣಿಸುತ್ತ ಕುಳಿತುಕೊಳ್ಳುವುದೆಂದರೆ ಯಾರಿಗೂ ಬೇಡ ಎನಿಸುವುದಿಲ್ಲವೆ?

ಈ ಬೇಜಾರದ ಕೆಲಸವನ್ನು ಸುಲಭಮಾಡಲು ವಾಶಿಂಗ್‌ಟನ್ನಿನಲ್ಲಿಯ ಥಾಮಸ್ ಈ ಹೇಸ್ ಎಂಬವನು ನೋಟುಗಳನ್ನು ಪ್ರತ್ಯೇಕಿಸುವ ಮತ್ತು ಎಣಿಸುವ ಒಂದು ಯಂತ್ರವನ್ನು ಕಂಡು ಹಿಡಿದಿದ್ದಾನೆ; ಅದನ್ನು ಅವನು ೨೪,೩೫,೬೧೦ ನೆಯ ನಂಬರಿನಲ್ಲಿ "ಪೇಟೆಂಟ್" ಮಾಡಿಸಿದ್ದಾನೆ.

ಈ ಯಂತ್ರಕ್ಕೆ ಐದು ಭಾಗಗಳಿವೆ. ಅವು ೧, ೨, ೫, ೧೦ ಮತ್ತು ೨೦ ಡಾಲರ್ ನೋಟುಗಳನ್ನು ಕ್ರಮವಾಗಿ ಎಣಿಸುತ್ತವೆ. ಪ್ರತಿಯೊಂದು ಭಾಗದ ಮೇಲೂ ಒಂದು ಜೊತೆ ಉರುಳುಗೋಲು ಇರುತ್ತದೆ. ಅವುಗಳ ನಡುವೆ ಯಂತ್ರವು ಮಿಶ್ರ ನೋಟುಗಳನ್ನು ಒಳಸೆಳೆದುಕೊಳ್ಳುತ್ತದೆ. ಅನಂತರ ಯಂತ್ರವು ತನ್ನ ವಿಭಾಗದ ಮೇಲಿರುವ ರಜಿಸ್ಟರಿನಮೇಲೆ ಪ್ರತ್ಯೇಕವಾಗಿ ಎಣಿಸಿ ಒಗೆಯುತ್ತದೆ. ಅದೇ ಕಾಲದಲ್ಲಿ ಯಂತ್ರದ ತುದಿಯಲ್ಲಿರುವ ಕೂಡಿಸುವ ವಿಭಾಗವು ಅವುಗಳ ಬೆಲೆಯನ್ನು ಕೂಡಿಸಿತೋರಿಸುತ್ತದೆ.

ಕೊನೆಯಲ್ಲಿ ಎಲ್ಲ ಬಿಲ್ಲು (ನೋಟು ಇತ್ಯಾದಿ) ಗಳೂ ಗಣಿಸಲ್ಪಟ್ಟು ಒಟ್ಟು ಒಂದು ಮೊತ್ತವಾಗಿ ತೋರಿಸಲಾಗುತ್ತದೆ.

ಕಾಗದದ ಕತೆ

ಚೀನದ ತ್ಸಾಯಿಲುಂಗನು ಕ್ರಿ. ಶ. ೧೦೫ ರಲ್ಲಿ ಕಾಗದವನ್ನು ಕಂಡು ಹಿಡಿದನು. ಅತನು ಅದರ ತಯಾರಿಕೆಗೆ ಹಳೆಯ ಬಿದಿರುಬಲೆ, ಚಿಂದಿ, ಮರದ ತೊಗಟೆ ಮುಂತಾದುವನ್ನು ಬಳಸುತ್ತಿದ್ದನು. ಆ ಪ್ರಥಮ ಯುಗದಲ್ಲಿ ಅವನು ಕಾಗದ ತಯಾರಿಸುವವರ ದೇವರೇ ಆದನು.

೬೦೦ ವರ್ಷಗಳವರೆಗೆ ಈ ಗುಟ್ಟು ಚೀನದಲ್ಲಿ ಉಳಿಯಿತು. ಒಮ್ಮೆ ಇಂದಿನ ಚೀನಿ ತುರ್ಕಿಯ ಇಬ್ಬರು ಮಾಂಡಲಿಕರಲ್ಲಿ ಕಲಹ ಉತ್ಪನ್ನವಾಯಿತು. ಇಬ್ಬರಲ್ಲಿ ಒಬ್ಬನು ಚೀನೀಯರ ನೆರವನ್ನೂ ಮತ್ತೊಬ್ಬನು ಅರಬರ ಸಹಾಯವನ್ನೂ ಕೇಳಿದನು. ಆಗ ಅರಬರೇ ಜಯಶಾಲಿಗಳಾದರು. ಕೈದಿಯಾಗಿ ಸಿಕ್ಕಿದ ಚೀನೀಯರಲ್ಲಿ ಕೆಲವರು ಕಾಗದ ತಯಾರಿಸಬಲ್ಲವರಾಗಿದ್ದರು. ಅವರನ್ನು ಒತ್ತಾಯ ಪಡಿಸಿ ಅರಬರು ಕಾಗದದ ಗುಟ್ಟನ್ನು ತಿಳಿದುಕೊಂಡರು.

೮ ನೆಯ ಶತಮಾನದ ಕೊನೆಯಲ್ಲಿ ಸಮರ್ಕಂದ, ಬಾಗದಾದ ಮತ್ತು ಡಮಾಸ್ಕಸಗಳಲ್ಲಿ ಕಾರಖಾನೆಗಳು ಹುಟ್ಟಿಕೊಂಡವು. ಅನಂತರ ಅವು ಇಡೀ ಅರಬ ಪ್ರದೇಶದಲ್ಲೆಲ್ಲ ಹರಡಿದವು. ೫ ಶತಮಾನಗಳ ವರೆಗೆ ಸಾರಸೀನರಲ್ಲಿಯೇ ಆ ವಿದ್ಯೆ ಅಡಗಿತ್ತು. ಅವರು ಮೊರಾಕೊ ಮತ್ತು ಸ್ಪೇಯಿನುಗಳ ಮೂಲಕ ಪಾಶ್ಚಾತ್ಯ ಪ್ರಪಂಚಕ್ಕೆ ಅದನ್ನು ಮುಟ್ಟಿಸಿದರು. ಮುಸ್ಲಿಂ ಸ್ಪೇಯಿನು ಅವನ್ನು ಕ್ರಿಶ್ಚಿಯನ್ ಯುರೋಪಿಗೆ ಒಪ್ಪಿಸಿತು. ಮುಸ್ಲಿಂ ಸಾಮ್ರಾಜ್ಯದ ಹೊರಗೆ ಪಾಶ್ಚಾತ್ಯ ಪ್ರಪಂಚದಲ್ಲಿ ಸ್ಥಾಪಿತವಾದ ಮೊದಲನೆಯ ಕಾಗದದ ಕಾರಖಾನೆಯೆಂದರೆ ಪಿಫ್ರಾಲ್ಸಿ ಇದ್ದಿದ್ದು. ಅದನ್ನು ೧೧೮೯ ರಲ್ಲಿ ಸ್ಥಾಪಿಸಲಾಯಿತು. ಹೀರೌಲ್ಟು ಪಿರನೀಸ ಪರ್ವತ ಪಂಕ್ತಿಯ ಫ್ರೆಂಚ ಪಾರ್ಶ್ವದಲ್ಲಿದೆ. ಈ ಕತೆ "ಮ್ಯಾಂಚೆಸ್ಟರ್ ಗಾರ್ಡಿಯನ್ನಿ"ನಲ್ಲಿ ಹೊರಬಿದ್ದಿದೆ.

ಟೆಲಿಟೈಪರ್

ಟೆಲಿಫೋನ್, ಟೆಲಿಗ್ರಾಫ್, ಟೆಲಿ ಪ್ರಿಂಟರ್ ಇವುಗಳಂತೆ ಟೆಲಿ ಟೈಪರ್ ಎಂಬ ಯಂತ್ರವನ್ನು ಕಂಡು ಹಿಡಿದು ಅಮೇರಿಕದಲ್ಲಿ ಬಳಸುತ್ತಿದ್ದಾರೆ. ಆದರೀಗ ಜರ್ಮನಿಯ ವಿಜ್ಞಾನಿಗಳು ಅದಕ್ಕಿಂತ ಅನುಕೂಲವಾಗುವಂಥ ಟೆಲಿಟೈಪರನ್ನು ಕಂಡು ಹಿಡಿದಿರುರೆಂದು ವರದಿ ಬಂದಿದೆ.

ಅಮೇರಿಕದ ಟೆಲಿ ಪ್ರಿಂಟರು ಪ್ರತಿಯೊಂದು ಅಕ್ಷರಕ್ಕೂ ಬೇರೆ ಬೇರೆ ಮುದ್ರಣದ ಮೊಳೆಯನ್ನು ಬಳಸಿದರೆ ನಾಜಿ ಯಂತ್ರವು ಸಾಕ್ಷಾತ್ ಅಕ್ಷರಗಳ ಉದ್ದ ಮತ್ತು ಅಡ್ಡ ಗೆರೆಗಳನ್ನು ಮುದ್ರಿಸುವ ಸೂಕ್ಷ್ಮಸಂದೇಶ (Impulse) ವನ್ನು ಕಳುಹಿಕೊಡಬಲ್ಲದು.

ಅಮೇರಿಕದ ಟೆಲಿಟೈಪರುಗಳಲ್ಲಿ ಒಮ್ಮೊಮ್ಮೆ ತಪ್ಪು ಅಕ್ಷರ ಮುದ್ರಿತವಾಗುತ್ತಿದೆ. ಇವರಲ್ಲಿ ಸುತ್ತಿನಲ್ಲಿ (Circuits) ನಡು ನಡುವೆ ಅಡೆತಡೆ ಉಂಟಾಗಿ ಅಕ್ಷರಗಳ ರೂಪ ಕೆಲವೊಮ್ಮೆ ಕೆಟ್ಟರೂ ತಪ್ಪು ಅಕ್ಷರವೆಂದೂ ಮುದ್ರಿತವಾಗುವುದಿಲ್ಲ.

ಇದು ಬಹಳ ಸರಳವಾದ ಯಂತ್ರ. ಜರ್ಮನಿಯ ತಯಾರಿಕೆಯಲ್ಲಿ ಇದರ ತೂಕ ಕೇವಲ ೬೦ ರತ್ತಲು. ಒಂದೇ ಒಂದು ನಿಮಿಷದಲ್ಲಿಯೇ ನಿಮಿಷವೊಂದಕ್ಕೆ ೧೫೦ ಅಕ್ಷರಗಳನ್ನು ಮಾತ್ರ ಇದು ಕಳುಹ ಬಲ್ಲದು.

ಈ ಯಂತ್ರದ ಕಾರ್ಯ ಮಾರ್ಗಕ್ಕೂ ನಮ್ಮ [illegible] ಟೆಲಿಪ್ರಿಂಟರ್ [illegible] ಕ್ರಮ ಕಾರ್ಯಗಳಿಗೂ ಭೇದವಿಲ್ಲ. [illegible] ದಲ್ಲಿ [illegible] ಗ್ರಾಹಕ ಯಂತ್ರಗಳ ಮೂಲಕ [illegible] ಕೇಂದ್ರ [illegible] ಸಂಸ್ಥೆಯಲ್ಲಿ [illegible] ಜೋಡಿಸಿಯುತ್ತಿರುವ [illegible] ಅದೇ ಕಾಲದಲ್ಲಿ ಸಂಬಂಧಿಸಿದ ಗ್ರಾಹಕ ಯಂತ್ರಗಳಲ್ಲಿ [illegible] (ವಿದ್ಯುತ್ತ ಸಹಾಯದಿಂದ) [illegible] ಗುವುದು. [illegible] ಕಾಗದವೊಂದನ್ನು [illegible] ತೆರದು [illegible] ಮುದ್ರಿತ [illegible] ತೋರಲಾಗುತ್ತದೆ.

ಇಪ್ಪತ್ತು ಬಣ್ಣದ ಪುಟಗಳ ಮುದ್ರಣ

[illegible] ಒಂದು [illegible] ಕಂಡು ಹಿಡಿದಿದ್ದಾನೆ. [illegible] ಕಾಗದ ಮುದ್ರಿತವಾಗುತ್ತ [illegible] ಬರುತ್ತದೆ.

[illegible]

ಅದೇ [illegible] Non-stop Press—[illegible] ಕೊಡಲಾಗಿದೆ.

ಮಾತಾಡುವ ಟೈಪರೈಟರ

[illegible] ಮಾತಾಡುವ ಟೈಪ ರೈಟರನ್ನು ತಯಾರಿಸಿದ್ದಾನೆ!

ಒಂದು ವಿಧದ ವೈದ್ಯುತ ಸಂಬಂಧಗಳಿಂದ ಮತ್ತು [illegible] ಟೈಪರಿಗೆ ಜೋಡಿಸಲಾಗಿದೆ "[illegible]" ಎಂಬ ಅಕ್ಷರದ [illegible] "[illegible]—Double you" ಎಂದು [illegible] ತ್ತದೆ!

ಒಂದು ರೇಡಿಯೋ ಧ್ವನಿವರ್ಧಕದ ಮೂಲಕ ಈ ಯಂತ್ರವು [illegible] ರವನ್ನು ಉಚ್ಚರಿಸುತ್ತದೆ. [illegible] ಆರಂಭಿಸಿ ಈಗ ಯಂತ್ರವನ್ನು ಪೂರ್ಣಗೊಳಿಸಿದ್ದಾನೆ.

ಕನ್ನಡಿಗರ ನೋಂಪಿಗಿಂದು ಫಲಪ್ರಾಪ್ತಿಯ ಯೋಗ

(ಮೊದಲನೆಯ ಪುಟದಿಂದ)

ಪ್ರಚಾರಾವಶ್ಯಕತೆ

ಶರೀರಾರೋಗ್ಯಕ್ಕೆ, ಮನಸ್ಸಿನ ನೆಮ್ಮದಿಗೆ, ಒಟ್ಟು ಜೀವನದ ಭದ್ರತೆಗೆ ರಕ್ತಸಂಚಲನವು ಅವಶ್ಯಕ. ಆ ರಕ್ತ ಸಂಚಾರವಾದರೂ ಅಂಗಾಂಗಗಳಲ್ಲೂ ನಡೆಯಬೇಕು. ಒಂದು ಮಟ್ಟದ ಕಾವಿನಿಂದ, ಒಂದು ಪ್ರಮಾಣದ ವೇಗದಿಂದ ರಕ್ತ ಪರಿಚಲನವಾಗಬೇಕು. ಈ ಕಾರ್ಯ ಕ್ಷಣಕಾಲ ಸಹ ನಿಲ್ಲದಂತೆ ನೋಡಿಕೊಳ್ಳಬೇಕು. ಹಾಗೆಯೇ ಒಂದು ದೇಶದ ಭದ್ರತೆ ಮತ್ತು ಯೋಗ ಕ್ಷೇಮ ಸಾಧನೆಯ ಕೆಲಸ. ಅಂದಮೇಲೆ ರಾಷ್ಟ್ರ ಶರೀರದಲ್ಲಿ ಜ್ಞಾನ ಪ್ರಚಾರ ವಾಹಿನಿಯು ಏಕ ಪ್ರಕಾರವಾಗಿ ವೇಗವಾಗಿ ನಾಡಿನ ನಾನಾ ನಾಳಗಳಲ್ಲಿ ಹರಿಯುತ್ತಿರಬೇಕು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಚಾರಕ್ಕೆ ಪ್ರಥಮ ಸ್ಥಾನ. ಕನ್ನಡ ನಾಡಿನಲ್ಲಿ ಈಗ ನಾಡಿನ ಭಾಷೆ ಸಾಹಿತ್ಯ ಕಲಾಕೌಶಲ ಇತಿಹಾಸ ಸಾಂಪತ್ತಿಕ ಸೌಭಾಗ್ಯ, ವಿನಾಶ ಕಾರ್ಯ ಪ್ರವೃತ್ತಿಗಳು ದೌರ್ಬಲ್ಯಗಳು ಇವುಗಳನ್ನು ಕುರಿತು ಸುವ್ಯವಸ್ಥಿತವಾದ ರೀತಿಯಿಂದ ಪ್ರಚಾರ ನಡೆಸಬೇಕು. ಇದಕ್ಕಾಗಿ ಪ್ರಚಾರ ಪ್ರಕಟನ ಕಾರ್ಯವಿಧಾನಗಳನ್ನು ರೂಢಿಸಬೇಕು. ಸಂಚಾರೋಪನ್ಯಾಸಗಳು ನಡೆಯುತ್ತ ಹೋಗಬೇಕು ವಿದ್ವಾಂಸರೂ ಕವಿಗಳೂ ಗಮಕಿಗಳೂ ವಾಗ್ಮಿಗಳೂ ತಂಡೋಪತಂಡವಾಗಿ ಮೇಲೆ ಮೇಲೆ ನಾಡಿನಲ್ಲೆಲ್ಲಾ ಸಂಚಾರ ಮಾಡಬೇಕು.

ಕರ್ನಾಟಕ ಏಕೀಕರಣ ಪ್ರಯತ್ನ

ರಾಜಕೀಯವಾಗಿ ಕನ್ನಡ ನಾಡೊಂದಾಗುವವರೆಗೂ ನಮ್ಮ ಆಶಯಗಳೆಲ್ಲ ಬರಿಯ ಕನಸಾಗಿಯೇ ಉಳಿಯುತ್ತವೆ. ಕನ್ನಡ ನಾಡು ಸುಮಾರು ಇಪ್ಪತ್ತು ಆಡಳಿತಗಳಿಗೆ ಹರಿದು ಹಂಚಿಕೆಯಾಗಿ ಹೋಗಿರುವುದೇ ಇದಕ್ಕೆ ಕಾರಣ ಆಡಳಿತವು ಒಂದಲ್ಲ ಒಂದು ರೀತಿಯಿಂದ ಏಕಮುಖವಾಗುವವರೆಗೆ ಕನ್ನಡಿಗರ ಏಕೀಕರಣ ಮನೋರಥವೀಡೇರುವ ಹಾಗಿಲ್ಲ. ರಾಜಕೀಯವಾದ ಏಕೀಕರಣವಾಗಬೇಕು; ಅಂದರೆ ಕರ್ನಾಟಕ ಮಹಾರಾಷ್ಟ್ರ ನಿರ್ಮಾಣವಾಗಬೇಕು.

ನೆಹ್ರುಗಳ ಮಾತು

ದೆಹಲಿ ಶಾಸನ ಸಭೆಯಲ್ಲಿ ಆಂಧ್ರ ಪ್ರಾಂತ್ಯದ ವಿಚಾರ ಬಂತು. ಆಗ ಮಹಾಪ್ರಧಾನ ಜವಾಹರಲಾಲ ನೆಹ್ರುಗಳು—

"ಆಂಧ್ರ ಪ್ರಾಂತ್ಯವಾಗಬೇಕೆಂದು ಕೇಳುವದು ಬಹಳ ನ್ಯಾಯವಾಗಿದೆ. ಈ ಪ್ರಶ್ನೆಯ ಕುರಿತಾದ ತಪ್ಪುಗಳಷ್ಟೇನೂ ಇಲ್ಲ. ೧೯೪೫ ನೆಯ ಇಸವಿಯ ಇಂಡಿಯಾ ಸರಕಾರ ಶಾಸನದಲ್ಲಿ ಒರಿಸಾ ಮತ್ತು ಸಿಂಧ ಪ್ರಾಂತ್ಯಗಳನ್ನು ಸೇರಿಸಿದಂತೆ ಹೊಸರಾಜ್ಯಾಂಗ ವ್ಯವಸ್ಥೆಯಲ್ಲಿ ನಾನಾ ಪ್ರಾಂತ್ಯಗಳೊಂದಿಗೆ ಇದನ್ನು ಸೇರಿಸಬಹುದು. ರಾಜ್ಯಾಂಗವ್ಯವಸ್ಥೆಯನ್ನಂಗೀಕರಿಸಿದ ಕೂಡಲೆ ತೀರ್ಮಾನವನ್ನಾಚರಣೆಗೆ ತರಬಹುದು ಎಂಬುದಾಗಿ ಹೇಳಿದರು. ಅಷ್ಟುಮಾತ್ರವಲ್ಲ—

" ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರಾಂತಗಳ ನಿರ್ಮಾಣದ ಮಾತನ್ನೆತ್ತಿದರೆ ಅಸಾಧ್ಯ ಕಷ್ಟಗಳೇಳುತ್ತವೆ. ಸಂಬಂಧಪಟ್ಟ ಪ್ರಾಂತ್ಯಗಳ ಸ್ವರೂಪ ಮತ್ತು ಜೀವನ ರಚನೆಗೇ ಪ್ರಚಂಡ ಸಂಚಕಾರ ಬರುತ್ತದೆ. ಈ ಪ್ರಶ್ನೆಯನ್ನು ಸರ್ವತೋಮುಖವಾಗಿ ಪರೀಕ್ಷೆ ಮಾಡಬೇಕಾಗಿದೆ,ಆಗ ಮಾತ್ರ ತೀರ್ಮಾನವು ತೃಪ್ತಿಕರವಾಗಿಯೂ ಸಂಬಂಧಪಟ್ಟ ಪಕ್ಷಗಳಿಗೆ ಅಂಗೀಕಾರ ಯೋಗ್ಯವೂ ಆಗುತ್ತದೆ." ಅಂದರು.

ಆಗ ಶ್ರೀ. ದಿವಾಕರರವರು ಛಿದ್ರಕರ್ನಾಟಕದ ದುರಂತ ಪರಿಸ್ಥಿತಿಯನ್ನು ಮಹಾಪ್ರಧಾನರ ಗಮನಕ್ಕೆ ತಂದರು.

ಹಲವು ಸದಸ್ಯರು ಉಪಮಹಾಪ್ರಧಾನ ಸರದಾರ ಪಟೇಲರಿಗೀವಿಚಾರದಲ್ಲಿ ಪ್ರತಿಭಟನಾ ರೂಪದ ಪತ್ರವೊಂದನ್ನು ಬರೆದಿದ್ದಾರೆ. ಆಂಧ್ರ ಪ್ರಾಂತ್ಯ ನಿರ್ಮಾಣದೊಂದಿಗೇ ಕರ್ನಾಟಕ ಪ್ರಾಂತ್ಯ ನಿರ್ಮಾಣ ಕಾರ್ಯವನ್ನು ಕೈಕೊಳ್ಳಬೇಕೆಂದು ತಿಳಿಸಿದ್ದಾರೆ. ಕೇಳ್ಕರರ ತೀರ್ಮಾನ ಕನ್ನಡಿಗರಿಗೆ ಒಪ್ಪಿಗೆ ಇಲ್ಲ. ಬಳ್ಳಾರಿ ಸಮಸ್ಯೆ ತೀರ್ಮಾನವಾಗದೆ ಆಂಧ್ರ ಪ್ರಾಂತ ನಿರ್ಮಾಣ ತೀರ್ಮಾನವಾಗಬಾರದು.

ಕರ್ನಾಟಕ ಸಬ್—ಫೆಡರೇಷನ್

ಸದ್ಯಕ್ಕೆ ಗೋವೆ, ಹೈದರಾಬಾದ್ ಕರ್ನಾಟಕ ಕ್ಷೇತ್ರಗಳನ್ನು ಬಿಟ್ಟರೆ, (೧) ಮುಂಬಯಿಯ ನಾಲ್ಕು ಜಿಲ್ಲೆಗಳು; (೨) ಮದರಾಸಿನ ಮೂರು ಜಿಲ್ಲೆಗಳು; (೩) ಕೊಡಗು; (೪) ಮೈಸೂರು ಸಂಸ್ಥಾನ; (೫) ದಕ್ಷಿಣದ ಹದಿನಾಲ್ಕು ಸಂಸ್ಥಾನಗಳು; ಹೀಗೆ ಐದು ಪ್ರತ್ಯೇಕ ಕ್ಷೇತ್ರ ಮತ್ತು ಆಡಳಿತಗಳುಂಟಾಗುತ್ತವೆ. ಐದನೆಯ ಕ್ಷೇತ್ರದಲ್ಲಿ ಹದಿನಾಲ್ಕು ಆಡಳಿತಗಳಿವೆ. ಇವೆಲ್ಲವನ್ನು ಒಂದುಗೂಡಿಸಬೇಕು. ಅವುಗಳ ಇಂದಿನ ಸ್ವರೂಪವನ್ನು ಸಾಕಾದಷ್ಟು ಮಟ್ಟಿಗೆ ಹಾಗೆಯೇ ಉಳಿಸಿ ಅನಿವಾರ್ಯವಾದಷ್ಟು ಬದಲಾವಣೆಗಳನ್ನು ಮಾಡಿ ಈ ಕಾರ್ಯವನ್ನು ಸಾಧಿಸಬಹುದು. 'ಕರ್ನಾಟಕ ಸಬ್-ಫೆಡರೇಷನ್' ಮೂಲಕ ಮಾತ್ರ ಕನ್ನಡನಾಡಿಗೇ ವಿಶಿಷ್ಟವೆನಿಸಿರುವ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವೆಂದು ಕಂಡುಬರುತ್ತದೆ.

'ಸಬ್-ಫೆಡರೇಷನ್'ನಲ್ಲಿ ಅಂಗರಾಜ್ಯಗಳು ಐದಿರಬೇಕೆ; ಮೂರಿರತಕ್ಕದ್ದೆ; ಎರಡೇ ಸಾಕೆ ಎಂಬ ಪ್ರಶ್ನೆಗಳನ್ನು ಚೆನ್ನಾಗಿ ಪರೀಕ್ಷೆಮಾಡಬೇಕು, ಅಂಗರಾಜ್ಯಗಳ ಸಂಖ್ಯೆಯನ್ನು ಆದಷ್ಟು ಮಟ್ಟಿಗೆ ಕಡಿಮೆ ಮಾಡುವುದು ರಾಷ್ಟ್ರ ಭದ್ರತೆಯ ದೃಷ್ಟಿಯಿಂದ ಬಹಳ ಅವಶ್ಯಕವೆಂಬುದನ್ನು ಇತ್ತೀಚಿನ ಭಾರತದ ಇತಿಹಾಸವು ನಮ್ಮ ಅನುಭವಕ್ಕೆ ತಂದುಕೊಡುತ್ತಿದೆ.

(೧) ಮೇಲೆ ಸೂಚಿಸಿದಂತೆ ಐದು ವಿಭಾಗಗಳನ್ನುಳಿಸಿ, ಐದು ಅಂಗರಾಜ್ಯಗಳನ್ನು ಮಾಡೋಣವೆ?

(೨) ಮುಂಬಯಿ, ಮದರಾಸು, ಕೊಡಗನ್ನು, ಸೇರಿಸಿ ಒಂದು ರಾಜ್ಯ; ಮೈಸೂರು ಸಂಸ್ಥಾನವೇ ಒಂದುರಾಜ್ಯ; ಸಂಸ್ಥಾನಗಳ ಕೂಟವೊಂದು ರಾಜ್ಯ; ಒಟ್ಟು ಮೂರು ಅಂಗರಾಜ್ಯಗಳನ್ನು ನಿರ್ಮಿಸೋಣವೆ?

(೩) ಹದಿನಾಲ್ಕು ಸಂಸ್ಥಾನಗಳನ್ನೂ ಮುಂಬಯಿ ಮತ್ತು ಮದರಾಸು ಪ್ರಾಂತ್ಯಗಳ ಕರ್ನಾಟಕದೊಂದಿಗೇ ಬೆರೆಸಿ ಒಂದು 'ಡೊಮಿನಿಯನ್ ಕರ್ನಾಟಕ'; ಒಂದು ಮೈಸೂರು ಸಂಸ್ಥಾನ; ಹೀಗೆ ಎರಡೇ ಅಂಗರಾಜ್ಯಗಳನ್ನು ಉಳಿಸೋಣವೆ?

ಸಬ್ ಫೆಡರೇಷನ್' ಆಲೋಚನೆಯು ಒಪ್ಪಿಗೆಯಾಗುವುದಾದರೆ ಪ್ರತಿನಿಧಿ ನಿಪುಣರ ಸಮಿತಿಯೊಂದನ್ನು ರಚಿಸಿ ಅಲ್ಲಿ, (೧) 'ಸಬ್—ಫೆಡರೇಷನ್ ರೂಪ, ರಚನೆ (೨) ಅಂಗರಾಜ್ಯಗಳ ಸಂಖ್ಯೆ, (೩) ಸಬ್ ಫೆಡರೇಷನ್ ಕೇಂದ್ರ: (೪) ಅಂಗರಾಜ್ಯಗಳು ಕೇಂದ್ರಕ್ಕೆಬಿಟ್ಟುಕೊಡಬೇಕಾದ ಆಡಳಿತಾಂಶಗಳು (೫) ಕೇಂದ್ರದ ಹಣಕಾಸು: ಇವೇ ಮುಂತಾದ ವಿವರಗಳನ್ನೆಲ್ಲ ನಿಶ್ಚಯಮಾಡಬೇಕು. ಕರ್ನಾಟಕ ಏಕೀಕರಣ ಮಹಾಸಭೆಯು ಇತ್ತ ಕಡೆ ಗಮನಕೊಡಬಹುದು.

ಸೀಮಾಚಿಹ್ನೆಗಳ ನಿರ್ಣಯ

ಗಡಿಗಳನ್ನು ನಿಶ್ಚಯಮಾಡುವ ಕೆಲಸವು ಎಷ್ಟು ಅವಶ್ಯಕವೋ ಅಷ್ಟು ಕ್ಲಿಷ್ಟವಾಗಿದೆ. ಈ ಕ್ಲಿಷ್ಟತೆಯ ಗರ್ಭದಲ್ಲಿ ಮುಖ್ಯವಾಗಿ ಪ್ರಾಂತ್ಯ ಪ್ರಾಂತ್ಯಗಳ ದ್ವೇಷಾಸೂಯೆಗಳು ಅಡಗಿಕೂತಿವೆ. ಈಗ ನಾವು ಕರ್ನಾಟಕದ ವಿಷಯದಲ್ಲಿ ನಾಲ್ಕು ಕಡೆಯ ಗಡಿಗಳನ್ನು ಗಾಂಧೀಜಿಯವರ ಸಲಹೆಯಂತೆ ನಾವೇ ನಿಶ್ಚಯಮಾಡಿಕೊಳ್ಳಬೇಕು. ಮಹಾರಾಷ್ಟ್ರ, ಆಂಧ್ರ, ತಮಿಳುನಾಡು ಕೇರಳ ಪ್ರಾಂತ್ಯ ಬಂಧುಗಳೊಂದಿಗೆ ಸ್ನೇಹದಿಂದ, ದೂರ ದೃಷ್ಟಿಯಿಂದ ರಾಷ್ಟ್ರ ಭಾರತದ ಹಿತಸಾಧನೆಯ ದೃಷ್ಟಿಯಿಂದ ಈ ಕಾರ್ಯವನ್ನು ಸಾಧಿಸಬೇಕಾಗಿದೆ. ಈ ಗಡಿ ನಿರ್ಮಾಣಕಾರ್ಯದಲ್ಲಿ ಕೆಲವು ತತ್ವಗಳನ್ನು ಮತ್ತು ವಿಧಾನಗಳನ್ನು ಅಂಗೀಕರಿಸಿ ಅನುಸರಿಸತಕ್ಕದ್ದು ಅವಶ್ಯಕ.

೧. ಗಡಿಪ್ರಾಂತಗಳಲ್ಲಿ ಒಂದೊಂದು ಹಳ್ಳಿಯಲ್ಲೂ ಜನರು ಯಾವ ಭಾಷೆಯನ್ನು ಬಳಸುತ್ತಾರೆ. ಅವರ ಮಾತೃಭಾಷೆ ಏನು? ಎಂಬುದರ ಒಂದು ಪರೀಕ್ಷೆ ನಡೆಯಬೇಕು. ಆ ಪರೀಕ್ಷೆಯ ಫಲವಾಗಿ ಒಂದು ಹಳ್ಳಿಯ ಜನರು ನೂರಕ್ಕೆ ಅರವತ್ತು ಮಂದಿ ಕನ್ನಡಮಾತೃಭಾಷೆ ಉಳ್ಳವರಾದರೆ ಆ ಹಳ್ಳಿಯನ್ನು ಕರ್ನಾಟಕಕ್ಕೆ ಸೇರಿಸಬೇಕು. ಹಾಗಿಲ್ಲವಾದರೆ ಆಂಧ್ರ ಗಡಿಯಾದರೆ ಆಂಧ್ರಕ್ಕೆ ಸೇರಬೇಕು. ತಮಿಳು ಗಡಿಯಾದರೆ ತಮಿಳು ನಾಡಿಗೆ, ಕೇರಳದ ಗಡಿಯಾದರೆ ಕೇರಳಕ್ಕೆ! ಮಹಾರಾಷ್ಟ್ರದ ಗಡಿಯಾದರೆ ಮಹಾರಾಷ್ಟ್ರಕ್ಕೆ ಸೇರಬೇಕು.

೨ ಗಡಿಪ್ರಾಂತ್ಯದ ಹಳ್ಳಿಗಳಲ್ಲಿ ಮೇಲಿನಂತೆ ಮಾಡುವುದಕ್ಕೆ ಬದಲಾಗಿ (ಪ್ಲೆಬಿಸ್ಸೈಟ್) ಪ್ರಜೆಗಳಿಗೇ ತಾವು ಯಾವ ಪ್ರಾಂತಕ್ಕೆ ಸೇರಬೇಕೆಂಬ ನಿಶ್ಚಯಾಧಿಕಾರವನ್ನು ಕೊಟ್ಟು ಬಿಡಲೂಬಹುದು. ಅವರ ಸಂಖ್ಯಾಬಲ ಎಷ್ಟೇ ಇರಲಿ ಬಹುಮತದಂತೆ ಅವರು ಪ್ರಾಂತ್ಯ ಪ್ರವೇಶ ವಿಚಾರವನ್ನು ನಿಶ್ಚಯ ಮಾಡಿಕೊಳ್ಳಲಿ.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಹಿಂದುಸ್ತಾನದ ರಾಯಭಾರಿಗಳಾಗಿ ರಶಿಯಕ್ಕೆ ತೆರಳಿದ್ದರಿಂದ ತೆರವಾದ ಪ್ರಾಂತಿಕ ಶಾಸನ ಸಭೆಯ ಸ್ಥಳಕ್ಕೆ ಕಾನಪುರ ಜಿಲ್ಲೆಯಿಂದ ಶ್ರೀಮತಿ ಸುಚೇತಾ ಕೃಪಲಾನಿಯವರು ಅವಿರೋಧವಾಗಿ ಆರಿಸಿಬಂದಿದ್ದಾರೆ.

ಸ್ವಾಗತಗೀತೆ

(೧೯೪೭ ನೆಯ ಡಿಸೆಂಬರ ೨೮)

ರಾಗ- ಕಾಂಬೋಧಿ ತಾಳ- ಝಂಪೆ

ಸ್ವಾಗತಂ 'ಕರ್ನಾಟಕ'ದ ಸಹೋದರರೇ! ॥ಪ.॥
ಸ್ವಾಗತಂ ನಿಖಿಲ 'ಭಾರತ' ಶುಭೋದಯರೇ !
॥ಅ. ಪ.॥

ಇಂದಿನ 'ಸ್ವತಂತ್ರ ಭಾರತ'ದಲ್ಲಿ ಮೊದಲಾಗಿ ।
ಸಂಧಿಸುವ 'ಸಾಹಿತ್ಯ ಪರಿಷತ್ತಿ'ಗಾಗಿ ॥
ಬಂದಿರೆ? 'ಪ್ರಜಾಧಿಪತ್ಯ'ದ 'ಮಹೀಶೂರ'ರೇ ।
ಕುಂದಣದ–ಚಂದನದ–ದೇಶಬಾಂಧವರೇ! ॥೧॥

ಸ್ವರ್ಣಭೂ'ಸ್ವಾತಂತ್ರ್ಯ'ದೊಡನೆ
ಸ್ವಜನಾಭ್ಯುದಯ ।
ವನ್ನು ಚಿಂತಿಸುವ 'ಸತ್ಯಾಗ್ರಹ'ದ ಪಡೆಯ ॥
ಕೆನ್ನೀರ 'ಹೈದರಾಬಾದಿ'ನ ಸುಯೋಧರೇ! ।
ಕನ್ನಡಿಗರೇ! ಸೆಣಸಿ ಬಂದಿರೇ? ಭಲರೇ ! ॥೨॥

'ಕರ್ನಾಟಕ ಪ್ರಾಂತ'ದೇಕೀಕರಣ ವಿಷಯ ।
ವನ್ನು ಸಾಧಿಸಿ 'ಮಹಾಕರ್ನಾಟಕ'ವನು ॥
ಮನ್ನಿಸಲಿಕಿರುವ 'ಮುಂಬಾಯಿ' ಸಂಸ್ಥಾನದಾ ।
ಕನ್ನಡದ ಮಲ್ಲರೇ! ಸುಕ್ಷೇಮವೇನು? ॥೩॥

ಪಡುಗಡಲ ದಡದೊಳಡಗಿರುವ ಕನ್ನಡನಾಡ ।
ಗಡಿಗೆಡರನಿಡುವವರ ತಡೆಯೆ-ದೃಢ ಬಲದ- ॥
ಕಡಲಪಡೆಗಂಜದಾ ಬೆಡಗಿನಾ ಕೊಡಗಿನಾ ।
ಕಡುಗಲಿಗಳೈತಂದಿರೇ? ಸುಖವೆ ಪಯಣ? ॥೪॥

ವಿಶ್ವಕರ್ನಾಟಕ'ದ 'ತಾತ'ನಧ್ಯಕ್ಷತೆಯ ।
ವಿಶ್ವಾಸದಲಿ 'ನಮ್ಮ' ನಾಡಿನೇಳಿಗೆಯ ॥
ವಿಶ್ವಭಾರವನಿಡಲು 'ಮದರಾಸಿ'ನೆಡೆಗಿಳಿದ ।
'ವಿಶ್ವಕನ್ನಡಿಗ'ರೇ! ಬಂದುದಾನಂದ ॥೫॥

ಮಧ್ವ, ಶಂಕರ 'ಮಠ'ಗಳಲ್ಲಿ 'ಕೊಡಲು'ವಾದ ।
ವೆದ್ದು 'ಸಂಗಮ'ವಾದ 'ಕಾವಿ'ನಾಲಯದ ॥
ಶುದ್ಧ ಕನ್ನಡದ 'ಕಾಸರಗೋಡು' ಸ್ವಾಗತಕೆ ।
ಸಿದ್ಧವಿದೆ ಕರ್ನಾಟಕದ ಮಹೋತ್ಸವಕೆ ॥೬॥

ಇಲ್ಲಿ 'ಭುವನೇಶ್ವರಿ'ಯ 'ಕನ್ನಡಾಂಬೆ'ಯ
ಹರಕೆ ।
ಸಲ್ಲಿಸಲು ನೆರೆದ ಕನ್ನಡ 'ಭಕ್ತ'ಜನಕೆ ॥
'ಮಲ್ಲಿಕಾರ್ಜುನ' ದೇವನಭಯವನು ಕರುಣಿನಲಿ ।
ಸಲ್ಲಲಿತ 'ವಿಜಯಲಕ್ಷ್ಮೀಶ' ನೊಲಿದಿರಲಿ ! ॥೭॥

ಪುಂಡೂರು ಲಕ್ಷ್ಮೀನಾರಾಯಣ
ಪುಣಿಂಚಿತ್ತಾಯ

ಪುಸ್ತಕ ವಿಮರ್ಶೆ

ಅರುಣ

(ಕೈಬರಹದ ತ್ರೈಮಾಸಿಕ. ಪುಟಗಳು ೯೫)

ಧಾರವಾಡ ಕರ್ನಾಟಕ ಹಾಯಸ್ಕೂಲಿನ ಮಾಳಮಡ್ಡಿ ಶಾಖೆಯ ಶಾಲೆಯ ೫ ನೆಯ ೬ ನೆಯ ವರ್ಗಗಳ ಹುಡುಗರು ಇದನ್ನು ಹೊರಡಿಸಿದ್ದಾರೆ. ಪತ್ರಿಕೆಯ ಪುಟಪುಟಕ್ಕೆ ಹುಡುಗರ ಉದ್ಯಮಶೀಲತೆಯು ಒಡೆದು ಕಾಣುವಂತಿದೆ. ಪತ್ರಿಕೆಯ ಓರಣಕ್ಕೆ ಅಲಂಕರಣದ ಒಪ್ಪ ಹಾಕಿದ್ದರಿಂದ ಅತ್ಯುತ್ತಮ ಮುದ್ರಿತ ಪತ್ರಿಕೆಗಳನ್ನು ಕೂಡ ನಾಚಿಸುವಂತಿದೆ. ವಿಧವಿಧ ವರ್ಣಗಳ ಹಿತವಾದ ಮಿಲನದಿಂದ ಕೂಡಿದ ಹದವರಿತ ಬಗೆ ಬಗೆಯ ಚಿತ್ರಣಕ್ಕೆ ಹೊಣೆಯಾದ ಅನಂತ ಪ್ಯಾಟಿ ಎಂಬ ಹುಡುಗ, ತಕ್ಕ ಪ್ರೋತ್ಸಾಹ ಸಿಕ್ಕರೆ, ಉತ್ತಮ ಶಿಲ್ಪಿಯಾಗದಿರಲಾರ. ಪ್ರಕಟಿಸಲ್ಪಟ್ಟ ಲೇಖನಗಳನ್ನೂ ಕವಿತೆಗಳನ್ನೂ ಇವು ಹುಡುಗರು ಬರೆದವು ಎಂಬ ಅರಿವಿನಿಂದ ಓದಿದರೆ ಹಾಡುಗಾಯಿಯ ರುಚಿ ಸಿಕ್ಕದಿರದು. ನಿರೂಪಣಾವಿಧಾನ ಶೈಲಿ ಪರವಿಲ್ಲ. ಆದರೂ ಕೈ ಇನ್ನೂ ಪಳಗಬೇಕು. ಇದನ್ನು ಪ್ರಕಟಿಸಿದ ಹುಡುಗರು ತಮ್ಮ ದಿನದ ಅಭ್ಯಾಸಕ್ಕೆ ವ್ಯಾಘಾತ ಬರದಂತೆ ನೋಡಿಕೊಳ್ಳುತ್ತಿದ್ದರೆ ಇಂತಹ ಪತ್ರಿಕೆಗಳು ಶಾಲೆಯಲ್ಲಿ ಹೊರಟಷ್ಟೂ ಒಳ್ಳೆಯದೇ.

Commerce (ವಿಶೇಷಾಂಕ)

ಪ್ರಕಾಶಕರು ಶ್ರೀ ಎಫ್. ಬೋರ್ಟನ್,
ಚರ್ಚಗೇಟ್ ರಸ್ತೆ, ಮುಂಬಯಿ.
ಪುಟ ೧೪೨, ಬೆಲೆ ರೂ. ೫

ಆಹಾರ ಸಮಸ್ಯೆ, ಜಮೀನುದಾರಿ, ಭಾರತ ರಾಜಕಾರಣ, ಆರ್ಥಿಕ ವಿಚಾರ, ಜಾಗತಿಕ ವ್ಯಾಪಾರ, ಚಿನ್ನ, ಅಣುಶಕ್ತಿಯ ಭವಿಷ್ಯ, ಉದ್ಯೋಗಗಳ ರಾಷ್ಟ್ರೀಕರಣ, ಮಲೇರಿಯ ನಿವಾರಣ, ಭಾರತದ ಚಹ ಉದ್ದಿಮೆಯ ಮುಂಗಾಣು, ಸಣಬು ಮುಂತಾದ ಹಲವಾರು ಉಪಯುಕ್ತವೂ ವಿಷಯ ವಿವರಣಾತ್ಮಕವೂ ಆದ ಲೇಖನಗಳಿಂದಲೂ ವರ್ಣಚಿತ್ರಗಳಿಂದಲೂ ಪತ್ರಿಕೆ ಕಂಗೊಳಿಸುತ್ತದೆ. ವ್ಯವಹಾರ ಕುಶಲರಿಗೆ ಅದ ಸ್ಯಕವಿರುವ ಜ್ಞಾನಕರಂಡವೆನಿಸುವ ಇದು ಸರ್ವಗ್ರಾಹ್ಯವಿದೆ.

ಜೀವನ ಮತ್ತು ವಿಜ್ಞಾನ

ಹಾಲು

[ವೆಂಕೋಬಾಚಾರ್ಯ ಉಪಾಧ್ಯಾಯ — ಎಂ. ಎಸ್. ಸಿ.]

ಹಾಲು ಒಂದು ಉತ್ತಮವಾದ ಆಹಾರವೆಂದು ಕರೆಯಲ್ಪಟ್ಟಿದೆ. ಏಕೆಂದರೆ, ಇದರಲ್ಲಿ ಶರೀರ ಪೋಷಣೆಗೆ ಬೇಕಾದ ಎಲ್ಲ ಆಹಾರಾಂಶಗಳೂ ಸರಿಯಾದ ಪ್ರಮಾಣದಲ್ಲಿರುತ್ತವೆ. ಎಂತಲೇ ಆಹಾರ ಶಾಸ್ತ್ರಜ್ಞರು ಹಾಲನ್ನು 'ಸಂಪೂರ್ಣ ಆಹಾರ ' ವೆಂದು ಕರೆದಿದ್ದಾರೆ.

ಹಾಲಿನಲ್ಲಿದ್ದ ಎಲ್ಲ ಧಾತುಗಳಲ್ಲಿ 'ಕ್ಯಾಲ್ಸಿಯಂ' ಬಹಳ ಮಹತ್ವದ್ದಾಗಿದೆ. ಇದು ಹಲ್ಲು ಮತ್ತು ಎಲುವುಗಳ ಬೆಳವಣಿಗೆಗೆ ತುಂಬ ಅವಶ್ಯಕ. ಹಾಲಿನಲ್ಲಿದ್ದಷ್ಟು 'ಕ್ಯಾಲ್ಸಿಯಂ' ಮತ್ತಾವ ಪದಾರ್ಥಗಳಲ್ಲಿಯೂ ಇಲ್ಲ. ಇದಲ್ಲದೆ ಇದು ಹಾಲನ್ನು ಕಾಯಿಸುವುದರಿಂದಾಗಲಿ, ಒಣಗಿಸುವುದರಿಂದಾಗಲಿ ಅಥವಾ ಮಜ್ಜಿಗೆಯಲ್ಲಿ ರೂಪಾಂತರಿಸುವುದರಿಂದಾಗಲೀ ನಷ್ಟವಾಗುವದಿಲ್ಲ. ಕಾರಣ, ಹಾಲು ಉಗಯೋಗಿಸದಲೆ ಶರೀರ ಪೋಷಣೆಗೆ ಬೇಕಾದ 'ಕ್ಯಾಲ್ಸಿಯಂ' ದೊರಕಿಸಿಕೊಳ್ಳುವುದು ಬಹಳ ಕಠಿಣ.

ರಕ್ತ ಹೆಪ್ಪುಗಟ್ಟುವುದಕ್ಕೂ ಹಾಗೂ ಎಲುವುಗಳ ಬೆಳವಣಿಗೆಗೂ 'ಕ್ಯಾಲ್ಸಿಯಂ' ಮತ್ತು 'ರಂಜಕ'ಗಳು ಬಹಳ ಅವಶ್ಯಕ. ಸುದೈವದಿಂದ ಇವೆರಡೂ ಹಾಲಿನಲ್ಲಿ ಸಾಕಷ್ಟು ಪ್ರಮಾಣದಲ್ಲಿವೆ. ಇದಲ್ಲದೆ ಹಾಲಿನಲ್ಲಿ ಕಬ್ಬಿಣ, ತಾಮ್ರ, ಮತ್ತು ಮೆಂಗನೀಜ್ ಧಾತುಗಳು ಕಡಿಮೆಯ ಪ್ರಮಾಣದಲ್ಲಿದ್ದು, ಶರೀರ ಪೋಷಣೆಗೆ ಉಪಯುಕ್ತವುಳ್ಳವಾಗಿವೆ.

ಶರೀರ ಪೋಷಣೆಗೆ ಬೇಕಾದ ಹಾಗೂ ಹಾಲಿನಲ್ಲಿರುವ ಇನ್ನೊಂದು ಮಹತ್ವದ ವಸ್ತುವೆಂದರೆ ರಿಬೋಫ್ಲ್ಯಾವಿನ್ (Riboflavin). ಇದೊಂದು 'ಬಿ' ಜೀವಸತ್ವ. ಶರೀರದಲ್ಲಿ ಇದು ಹೆಚ್ಚಿನ ಪ್ರಮಾಣದಲ್ಲಿದ್ದರೆ ಮನುಷ್ಯನು ಹೆಚ್ಚು ವರ್ಷಬಾಳುತ್ತಾನೆ. ಈ ಜೀವಸತ್ವವು ಬಹಳ ಸೂಕ್ಷ್ಮವಿದ್ದಕಾರಣ ಹಾಲನ್ನು ಹೆಚ್ಚು ವೇಳೆ ಬಿಸಿಲಿನಲ್ಲಿ ಇಡಕೂಡದು.

'ಬಿ' ಜೀವ ಸತ್ವವಲ್ಲದೆ ಹಾಲಿನಲ್ಲಿ 'ಎ' ಜೀವಸತ್ವವು (ಇದೊಂದು ಮೇದೋದ್ರವ್ಯವಾಗಿರುವುದರಿಂದ ಹಾಲಿನ ಕೆನೆಯಲ್ಲಿ ಹೆಚ್ಚಾಗಿ ಸಿಕ್ಕುತ್ತದೆ.) ಹೆಚ್ಚಿನ ಪ್ರಮಾಣದಲ್ಲಿಯೂ, ಸಸಾರಜನಕಾಂಶ, ಪಿಷ್ಟಶರ್ಕರೆ 'ಸಿ', 'ಡಿ' ಮತ್ತು 'ಈ' ಜೀವಸತ್ವಗಳು ಕಡಿಮೆಯ ಪ್ರಮಾಣದಲ್ಲಿಯೂ ಇರುತ್ತವೆ. ಹಾಲಿನಲ್ಲಿದ್ದ ಎಲ್ಲ ಆಹಾರಾಂಶಗಳು ಸುಲಭವಾಗಿ ಜೀರ್ಣವಾಗುವ ರೀತಿಯಲ್ಲಿವೆ. ಹಾಲನ್ನು ಕಾಯಿಸುವುದರಿಂದ ಅದರಲ್ಲಿಯ ಜೀವಸತ್ವಗಳು ನಾಶವಾಗುವದಿಲ್ಲ.

ಒಟ್ಟಿನಮೇಲೆ ದಿನಂಪ್ರತಿ ಒಂದು ಪಾವು ಹಾಲು ಸೇವಿಸಿದಲ್ಲಿ (ಇದು, ಒಂದು ದಿನಕ್ಕೆ) ಶರೀರ ಪೋಷಣೆಗೆ ಬೇಕಾಗುವ ಎಲ್ಲ ಆಹಾರಾಂಶಗಳನ್ನೂ ಪೂರೈಸುತ್ತದೆ.

ಪಾಕಿಸ್ತಾನದ ವಿದೇಶ ಮಂತ್ರಿ ಸರ ಮಹಮ್ಮದ ಜಾಫರುಲ್ಲಾಖಾನರು ಬ್ರಹ್ಮದೇಶದ ಸ್ವಾತಂತ್ರ್ಯ ಉತ್ಸವದಲ್ಲಿ ಭಾಗವಹಿಸಲು ೧೯೪೮ ಜನವರಿ ಮೊದಲವಾರದಲ್ಲಿ ರಂಗೂನಕ್ಕೆ ತೆರಳಬಹುದು

ಚಂದಾದಾರರಲ್ಲಿ ವಿನಂತಿ

—✲—

ಯಾವದೇ ಪತ್ರವ್ಯವಹಾರ ಮಾಡುವಾಗ್ಗೆ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ. ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ನಿರಾಕರಿಸಿ ಹಿಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆ ವೆಚ್ಚಸಹಿತ(ಚಂದ್ರಾಹಣ ಮುಂಗಡ)

೧ ವರ್ಷಕ್ಕೆ	೬—೪—೦
೬ ತಿಂಗಳಿಗೆ	೩—೪—೦
೩ ,,	೧-೧೨—೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೬ ಆಣೆ ಹೆಚ್ಚಿಗೆ ಬೀಳುವದು.

೧೯೪೭

ಭಾರತದ ಭಾವೀ ಇತಿಹಾಸಕಾರನೂ ಭಾವೀ ಪೀಳಿಗೆಗಳೂ ಇದೀಗ ಕಳೆದ ೧೯೪೭ ನೇ ಇಸವಿಯನ್ನು ಚರಿತ್ರಾರ್ಹ ವರ್ಷವೆಂದು ಚಿರಕಾಲವೂ ನೆನಪಿನಲ್ಲಿಡುವುದರಲ್ಲಿ ಸಂದೇಹವಿಲ್ಲ. ಇನ್ನೂರು ವರ್ಷಗಳ ಪಾರತಂತ್ರ್ಯದ ನೊಗವನ್ನು ಕಿತ್ತೊಗೆದು ಸ್ವಾತಂತ್ರ್ಯದ ಗೌರವಪೂರ್ಣ ಯುಗದಲ್ಲಿ ನಾವು ಕಾಲಿಟ್ಟ ವರ್ಷವದು. ಆದರೆ ಅದರ ಮಹತಿ ಇಷ್ಟರಲ್ಲೇ ಮುಗಿಯಲಿಲ್ಲ. ಪರಾಧೀನತೆಯ ಪಾಶವನ್ನು ಹರಿದು ಸ್ವತಂತ್ರವಾದ ರಾಜ್ಯಗಳು ಭೂಮಿಯಲ್ಲಿ ಹಲವಾರು ಇವೆ. ಆದರೆ ಹಗೆಯ ನೆತ್ತರು ಸುರಿಸದೆ ಸತ್ಯ ಅಹಿಂಸೆಗಳ ಸಾತ್ವಿಕ ಮಾರ್ಗದಿಂದ ಹೋರಾಡಿ ಆತ್ಮತೇಜವೊಂದರಿಂದಲೇ ನ್ಯಾಯ್ಯವನ್ನು ದೊರಕಿಸಿಕೊಂಡ ಹೆಮ್ಮೆ ಭಾರತದ್ದು—೧೯೪೭ ರದ್ದು. "ಧಿಗ್ಬಲಂ ಕ್ಷತ್ರಿಯ ಬಲಂ!" ಎಂದ ವಿಶ್ವಾಮಿತ್ರನ ಮಾತಿಗೆ ಜಗತ್ತಿನಲ್ಲವೂ ಇಂದು ಉದಾಹರಣರೂಪವಾಗಿರುವಾಗ ನವೋದಿತ ಸ್ವಾತಂತ್ರ್ಯದ ತನ್ನ ಸಾತ್ವಿಕ ಪ್ರಕಾಶವನ್ನು ಅಂತರ್‌ರಾಷ್ಟ್ರೀಯ ರಂಗದಲ್ಲಿಯೂ ಬೀರಿ, ಸಾತ್ವಿಕತೆಯೇ, ನ್ಯಾಯಬುದ್ಧಿಯೇ ಜಗತ್ತಿನ ರೋಗಗಳಿಗೆಲ್ಲ ಸಿದ್ಧೌಷಧವೆಂದು ನಮ್ಮ ನಾಡು ಸಾರಿದೆ. ಯುಕ್ತ ರಾಷ್ಟ್ರ ಸಭೆಯಲ್ಲಿ ನಮ್ಮ ಪ್ರತಿನಿಧಿಗಳು ಅನುಸರಿಸಿದ ನೀತಿಯಾದರೂ ಇದಕ್ಕೆ ಅನುಗುಣವಾಗಿಯೇ ಇದೆ. ಬ್ರಿಟಿಶ ಸಾಮ್ರಾಜ್ಯದ ತಳಪಾಯಕ್ಕೆ ಗೆದ್ದಲು ಹತ್ತಿ ಅದು ಕುಸಿಯಲಾದುದರಿಂದ ಅದು ಕೈ ತಪ್ಪಿದಕ್ಕೆ ಕೃಷ್ಣಾರ್ಪಣವೆಂದು ಡಾಂಭಿಕನ ಔದಾರ್ಯ ತೋರಿಸಿತಲ್ಲದೆ ಇದು ಅಹಿಂಸೆಯ ವಿಜಯವೂ ಅಲ್ಲ, ಬ್ರಿಟಿಶರ ನೈತಿಕತೆಯ ದ್ಯೋತಕವೂ ಅಲ್ಲ ಎನ್ನುವ ತರ್ಕವಾಚಸ್ಪತಿಗಳಿರಬಹುದು. ಆದರೆ ಬ್ರಿಟಿಶ ಸಾಮ್ರಾಜ್ಯಕ್ಕಿಂತಲೂ ದುರ್ಬಲ, ಶಿಥಿಲ ಸಾಮ್ರಾಜ್ಯಗಳು ಹಿಂದೀ ಚಳವಳಿಗಿಂತ ಎಷ್ಟೋ ಮಟ್ಟಿಗೆ ಶಸ್ತ್ರಶಕ್ತಿಯಲ್ಲಿ ಬಲಿಷ್ಠವಾಗಿರುವ ಸ್ವಾತಂತ್ರ್ಯ ಚಳವಳಿಗಳನ್ನು ಇನ್ನೂ ಹತ್ತಿಕ್ಕುತ್ತಿರುವಾಗ ಮೇಲಿನ ತರ್ಕದಲ್ಲಿ ಅಷ್ಟೇನೂ ಹುರುಳಿಲ್ಲವೆಂದು ಸಿದ್ಧವಾಗುವದು. ಈ ಸಂದರ್ಭದಲ್ಲಿ ಪ್ರತಿಗಾಮಿ ಚರ್ಚಿಲ್ ಪ್ರಭೃತಿಗಳು ತಂದೊಡ್ಡಿದ ಹಲವು ವಿಘ್ನಗಳನ್ನು ದಾಟಿ ಭಾರತದ ನ್ಯಾಯ್ಯವಾದ ಬೇಡಿಕೆಯನ್ನು ಮನ್ನಿಸಿದ ಮತ್ತು ಅದಕ್ಕೆ ಬೇಕಾದ ಕ್ರಮಗಳನ್ನು ತಕ್ಷಣ ಕೈಕೊಂಡ ಬ್ರಿಟಿಶ ಕೂಲಿಕಾರ ಸರಕಾರವೂ ಅದಕ್ಕೆ ಬೆಂಬಲವಿತ್ತ ಬ್ರಿಟಿಶ ಜನತೆಯೂ ಪ್ರಶಂಸಾರ್ಹರೆಂದು ಹೇಳದಿದ್ದರೆ ಕೃತಘ್ನತೆಯಾದೀತು.

ಆದರೆ ಇದು ಒಂದು ಮುಖದ—ಪ್ರಕಾಶಮಾನ ಮುಖದ—ವರ್ಣನೆಯಾಯಿತು. ಭಾರತದ ೪೦ ಕೋಟಿ ಜನತೆಗೆ ೧೯೪೭ ನೆ ವರ್ಷ ಲೋಕಾಲೋಕ ಪರ್ವತದಂತೆ ಸಪ್ರಕಾಶವಾಗಿದ್ದಂತೆ ಅಪ್ರಕಾಶವೂ ಆಗಿತ್ತು. ಸಾವಿರಾರು ವರ್ಷಗಳ ಸಂಗಡಿಕೆಯನ್ನು ಕಡೆಗಣಿಸಿ ಧರ್ಮಾಂಧತೆಯ ಬಲೆಯಲ್ಲಿ ಬಿದ್ದು ಹಿಂದೀ ಮುಸ್ಲಿಮರು ಉಳಿದ ಹಿಂದುಸ್ತಾನದ ಪಲ್ಲರ್ಪ ಹರಿದು ಬೇರಾದುದು ಮತ್ತು ಅದರ ಫಲವಾಗಿ ಪಂಚ ನದಿಗಳು ಕೆಂಪಡರುವಂಥ ನೆತ್ತರ ಕಾಲುವೆ ಹರಿದುದು ಪ್ರಪಂಚದ ಇತಿಹಾಸದಲ್ಲೆ ರುದ್ರ-ಕರುಣ ಘಟನೆಯಾಗಿತ್ತು. ಲಕ್ಷೋಪಲಕ್ಷ ಜನರು ಗುಳೆ ಹೋಗುವ-ಬರುವ ದೃಶ್ಯವೂ ಆಧುನಿಕ ಇತಿಹಾಸದಲ್ಲಿ ಅಪ್ರತಿಮವಾಗಿತ್ತು—ಕಲಂಕ ಪ್ರಾಯವಾಗಿತ್ತು. ಲಕ್ಷಾಂತರ ಕುಟುಂಬಗಳು ಇದರ ಕಹಿ ನೆನಪನ್ನು ರಕ್ತದಲ್ಲಿ ಸೇರಿಸಿಕೊಂಡು ತಲೆ ಮೂರು ಗಳ ತನಕ ವಿಷಗ್ರಸ್ತ ಬುದ್ಧಿಯನ್ನುಳಿಸಿಕೊಳ್ಳಬಹುದು. ಸಾಲದ್ದಕ್ಕೆ ಹಿಂದೀ ನರೇಂದ್ರರಿಗೆ ಬ್ರಿಟಿಶರು ಹೋಗುವಾಗ "ಸ್ವಾತಂತ್ರ್ಯ ಸಾರ್ವಭೌಮಾಧಿಕಾರ" ಗಳನ್ನು ಕೊಟ್ಟು ಹೋಗಿ ನಮ್ಮ ಕಾಲ ಕೆಳಗೆ ದೊಡ್ಡ "ಅವಧಿ ಬಾಂಬನ್ನು" ಇಟ್ಟು ಹೋದರು. ಆದರೆ ಪ್ರಜಾಭಿಪ್ರಾಯದ ಬಲದಿಂದಲೂ ನಾಯಕರ ಪ್ರಸಂಗಾವಧಾನದಿಂದಲೂ ಈ ಸಮಸ್ಯೆಯೊಂದು ಹೆಚ್ಚು ಕಡಿಮೆ ಸಮಾಧಾನಕರವಾಗಿ ಬಿಡಿಸಲ್ಪಟ್ಟಿದೆ. ಉಳಿದ ಅಂಶವೂ ಬೇಗನೆ ಬಿಡಿಸಲ್ಪಡಬಹುದು. ಪ್ರತಿಗಾಮಿ ರಾಜರ ಹಿಂದೆ ಶಕುನಿಗಳಂತಿದ್ದ ಅನೇಕ ದಿವಾಣರು ಪದಚ್ಯುತರಾದುದರಿಂದ ೧೯೪೭ ಪ್ರಜೆಗಳ ವಿಜಯದ ಕುರುಹಾಯಿತೆಂದು ಧಾರಾಳವಾಗಿ ಹೇಳಬಹುದು. "ಸಹ ನಾವವತು ಸಹ ನೌ ಭುನಕ್ತು" ಎಂಬ ಐಕ್ಯಪಾಠ ಬೇಡವಾದವರು ಬೇರೆಯಾಗಿ ಅನಾದಿಯಿಂದ ಒಂದಾಗಿದ್ದುದನ್ನು ಒಡೆದರೆಂಬುದೊಂದೇ ಎಲ್ಲಕ್ಕೂ ದೊಡ್ಡ ವಿಷಾದದ ಸಂಗತಿ.

ಕಾಸರಗೋಡಿನ ಕಾರ್ಯಕಲಾಪ

ಕಳೆದ ತಿಂಗಳ ಕೊನೆಯ ವಾರ ದಕ್ಷಿಣ ಕನ್ನಡದ—ಏಕೆ ಕರ್ನಾಟಕದ—ಅತಿ ದಕ್ಷಿಣ ಸೀಮೆಯಾದ ಕಾಸರಗೋಡಿನಲ್ಲಿ ಸೇರಿದ ಸಾಹಿತ್ಯ ಸಮ್ಮೇಲನ, ಅದರೊಂದಿಗಾದ ಏಕೀಕರಣ ಪರಿಷತ್ತು ಮೊದಲಾದವುಗಳ ವಿವರಗಳನ್ನು ಈ ... ಕೊಡಲಾಗಿದೆ. ಸಮ್ಮೇಲನಾಧ್ಯಕ್ಷರಾದ ಶ್ರೀ ತಿರುಮಲೆ ತಾತಾಚಾರ್ಯರು ನುರಿತ ಸಾಹಿತಿ, ರಾಜಕಾರಣಜ್ಞ, ಕರ್ನಾಟಕ ಪ್ರೇಮಿಗಳೆಂಬುದು ಎಲ್ಲರಿಗೂ ಗೊತ್ತಿದ್ದ ಮಾತು. ಅವರ ಸುದೀರ್ಘ ಅಧ್ಯಕ್ಷ ಭಾಷಣದಲ್ಲಿ ಭಾವೀ ಕರ್ನಾಟಕದ ಉಜ್ವಲ ಕಲ್ಪನೆಗಳು ಮೂರ್ತಿಮತ್ತಾಗಿ ಮೂಡಿದುದೇನೂ ಆಶ್ಚರ್ಯವಲ್ಲ. "ಆಗಬೇಕಾದ" ಕರ್ನಾಟಕದ ಆಕೀಲ ಚಿತ್ರವೇ ಅದೆಂದರೂ ತಪ್ಪಾಗದು. ಸಾಹಿತ್ಯರಂಗದಲ್ಲಿ ಹೊಸ-ಹಳೆಯ ಪಂಥಗಳ ಪುರಸ್ಕರ್ತರು ಸಮನ್ವಯದಿಂದ ನಡೆಯಬೇಕೆಂಬ ಅವರ ಸೂಚನೆ ಸಮಯೋಚಿತವಾಗಿದೆ. ಕರ್ನಾಟಕದಲ್ಲಿ ಕನ್ನಡವೇ ಬೋಧಭಾಷೆ—ರಾಜಭಾಷೆಯಾಗಬೇಕೆಂಬ ಅವರ ಒತ್ತಾಯವಾದರೂ ಎಷ್ಟು ಸಲ ಅಂದರೂ ಇನ್ನೂ ಅನ್ನಬೇಕಾದ ಮಾತೇ ಸರಿ. ವಿಚ್ಛಿನ್ನ ಕರ್ನಾಟಕದ ರಾಜಕೀಯ ಸಮಸ್ಯೆಗೆ ಅವರು ಹೇಳಿದ "ಸಬ್-ಫೇಡರೇಶನ್" ಅಥವಾ ಉಪ-ಸಂಯುಕ್ತ ರಾಜ್ಯದ ಪರಿಹಾರೋಪಾಯಕ್ಕೆ ಮಾತ್ರ ನಾವು ಅಡ್ಡ ಹೇಳದಿರಲಾರೆವು. ಹೆಚ್ಚು ಕಡಿಮೆ ಕರ್ನಾಟಕದ ಚಿಕ್ಕಪುಟ್ಟ ಸಂಸ್ಥಾನಿಕರೆಲ್ಲ ವಿಲೀನೀಕರಣದ ಪರಮ ಪಥ್ಯಕ್ಕೆ ಒಪ್ಪಿರುವಾಗ ಈ ಉಪಾಯ ಭೇದಭಾವವನ್ನು ಅಳಿಸುವ ಬದಲು ಶಾಶ್ವತವಾಗಿ ಮಾಡಬಹುದು. ಅದರಿಂದ ಮೈಸೂರನ್ನೊಳಗೊಂಡ ಅಖಿಲ ಕರ್ನಾಟಕವನ್ನು—ಉಪಾಯವಿಲ್ಲದಿದ್ದರೆ ಪ್ರಜಾತಂತ್ರಾತ್ಮಕ ರಾಜಸತ್ತೆಯ ಕೆಳಗಾದರೂ— ಒಂದೇ ಆಳಿಕೆಯಲ್ಲಿ ತರುವದೇ ಉಚಿತವೆಂದು ತೋರುತ್ತದೆ. ಇರಲಿ. ಶ್ರೀ ತಾತಾಚಾರ್ಯರಿಗೆ ತಮ್ಮ ಚಿನ್ನದ ಕನಸುಗಳನ್ನು ನನಸುಗಳಾಗಿ ಮಾಡಿತೋರಿಸಲು ಅವಶ್ಯಕ ಸಂಧಿಯನ್ನು ಪರಿಷತ್ಸದಸ್ಯರು ಒದಗಿಸಿಕೊಟ್ಟಿದ್ದಾರೆ. ಈ ವರೆಗೆ ಉತ್ಸವ ಮೂರ್ತಿಯಾಗಿ ಒಂದು ದಿನ ಮೆರೆದು ೩೬೪ ದಿನ ಅದನ್ನು ಮರೆತು ಇರುತ್ತಿದ್ದ ಸಮ್ಮೇಲನಾಧ್ಯಕ್ಷನಿಗೆ ಆ ವರ್ಷಕ್ಕೆ ಪೂರ್ಣಾಧಿಕಾರ ಕೊಡುವ ಮತ್ತು "ಗರ್ಭಗುಡಿಯ ಮೂರ್ತಿ"ಯಾಗಿದ್ದ ನಿಜವಾದ ಅಧಿಕಾರಿ ಉಪಾಧ್ಯಕ್ಷನ ಪದವಿಯನ್ನು ರದ್ದುಗೊಳಿಸುವ ಗೊತ್ತುವಳಿ ಸ್ವೀಕೃತವಾಗಿದೆ. ಈ ಹೊಸ ವ್ಯವಸ್ಥೆಯ ಔಚಿತ್ಯವನ್ನು ಶಂಕಿಸುವವರಿರಬಹುದು. ದೈನಂದಿನ ಆಡಳಿತೆ ಇದರಿಂದ ಕಠಿಣ ಹೋಗಬಹುದೆಂದು ಅನುಮಾನಿಸಲು ಕಾರಣವಿಲ್ಲದಿಲ್ಲ. ಆದರೆ ಸಮ್ಮೇಲನಾಧ್ಯಕ್ಷ ಕಟ್ಟಿದ ಕನಸುಗಳನ್ನು ನನಸಾಗಿ ಮಾಡುವ ಅವಕಾಶವನ್ನು ಅವನಿಗೊದಗಿಸುವ ದೃಷ್ಟಿಯಿಂದ ಇದು ಸ್ಪೃಹಣೀಯವಾಗಿತ್ತು. ಪರಿಷತ್ತು ಒಬ್ಬಿಬ್ಬರ ಕೈಗೊಂಬೆಯಾಗಿಯೆ ಉಳಿವ ಸಂಭವವೂ ಇದರಿಂದ ಕಡಿಮೆಯಾಗುತ್ತದೆ. ಶ್ರೀ ಶರ್ಮರಿಗೆ ಅಂಥ ಸಂಧಿ ಮೊಟ್ಟಮೊದಲು ದೊರಕಿದೆ. ತಮ್ಮ ಕ್ರಾಂತಿಕಾರಿ ವಿಚಾರಗಳನ್ನು ಬಳಕೆಗೆ ತಂದು ಅವರು ಈ ಬದಲಾವಣೆ ಬೇಕಾಗಿತ್ತೆಂಬುದನ್ನು ಸಿದ್ಧಗೊಳಿಸಲಿ. ಶುಭಾಸ್ತೇ ಪಂಥಾನಃ!

ಯುದ್ಧ ಪಥದಲ್ಲಿ—ಏಕೀಕರಣ ?

ಕಾಸರಗೋಡಿನಲ್ಲಿ ಸೇರಿದ ಏಕೀಕರಣ ಕ್ರಿಯಾ ಸಮಿತಿಯಲ್ಲಿ ಪ್ರಾಂತೀಕರಣದ ಹೋರಾಟಕ್ಕೆ ಪೂರ್ವಭಾವಿಯಾಗಿ ಕೇಂದ್ರ ಸರಕಾರದ ಘೋರಣದ ನಿಷೇಧಾರ್ಥ ಅ. ಭಾ. ಕಾಂಗ್ರೆಸ್ ಸಮಿತಿಯಲ್ಲಿಯೂ ಕೇಂದ್ರ, ಮದ್ರಾಸ್ ಮತ್ತು ಮುಂಬಯಿ ಪ್ರಾಂತಗಳ ಶಾಸನ ಸಭೆಗಳಲ್ಲಿಯೂ ಇರುವ ಕರ್ನಾಟಕದ ಸದಸ್ಯರು ರಾಜೀನಾಮೆ ಕೊಡಬೇಕೆಂಬಾಶಯದ ಗೊತ್ತುವಳಿ ಸ್ವೀಕೃತವಾಗಿರುವದು. ಕರ್ನಾಟಕ ಪ್ರಾಂತದ ನಿರ್ಮಾಣದಲ್ಲಿ ಆಗುತಿರುವ ವಿಲಂಬ ಮತ್ತು ಕೇಂದ್ರ ಸರಕಾರದ ವಿಚಿತ್ರ ನೀತಿ ಕನ್ನಡಿಗರನ್ನೆಷ್ಟು ನೋಯಿಸಿವೆಯೆಂಬುದಕ್ಕೆ ಇದು ಸಾಕ್ಷಿಯಾಗಿದೆ. ಅಲ್ಲಿಯೇ ನೆರೆದ ೧೧ ನೆ ಏಕೀಕರಣ ಪರಿಷತ್ತಾದರೂ ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತ ಕೊಡದಂಥ ರಾಜ್ಯಘಟನೆಯನ್ನು ಕನ್ನಡಿಗರು ಒಪ್ಪಲಾರರೆಂ... ಗೊತ್ತುವಳಿ ಮಾಡಿದೆ. ೩೭ ವರ್ಷಗಳ ಕಾಲ ... ಗೊತ್ತುವಳಿ ... ಕನ್ನಡಿಗರು ಕಟ್ಟಿಕೊಂಡಿದ್ದ ನ್ಯಾಯ್ಯವಾದ ... ಆಶೆಯನ್ನು ಮುಮ್ಮುಂತ್ರಿ ಜವಾಹರಲಾಲರು ... ಒಮ್ಮಿಂದೊಮ್ಮೆ ನೆಲಕ್ಕೆ ಅಪ್ಪಳಿಸಿದ್ದರಿಂದ ಕನ್ನಡಿಗರಲ್ಲಾದ ಅಸಂತೋಷದ ತೀವ್ರತೆ ಇನ್ನೂ ಉಗ್ರರೂಪದಲ್ಲಿ ಸಭೆಯಲ್ಲಿ ವ್ಯಕ್ತವಾಯಿತೆಂದೂ ಹೇಳಬಹುದು. ಪ್ರತ್ಯೇಕ ಪ್ರಾಂತ ರಚನೆ ಕನ್ನಡಿಗರಿಗೆ ಜೀವನ್ಮರಣ ಪ್ರಶ್ನೆಯಾಗಿದ್ದು ಅದರ ಬಗ್ಗೆ ... ತಮ್ಮ ಭಾವನೆಯನ್ನು ಸ್ಪಷ್ಟಗೊಳಿಸಲು ... ಶಾಸನ ಸಭಾ ಸದಸ್ಯರನ್ನು ಹಿಂತೆಗೆದುಕೊಳ್ಳುವ ಹಕ್ಕು ಅವರಿಗಿದ್ದೇ ಇದೆ. ಆದರೆ ಈ ಬಗ್ಗೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ಸು ಕೊನೆಯ ನಿರ್ಣಯ ಮಾಡಬೇಕಾಗಿದ್ದು ಅದು ಅನವಶ್ಯಕವಾಗಿ ರಾಗದ್ವೇಷಗಳಿಗೊಳಗಾಗದೆ ಶಾಂತಚಿತ್ತದಿಂದ ಕೊನೆಯ ಉಪಾಯವೆಂದು ಮಾತ್ರ ಈ ಕ್ರಮವನ್ನು ಕೈಕೊಳ್ಳುವದು ಹಿತ. ಈ ನಡುವೆ ಅನೇಕ ಹೊಸಗೇಡಿಗಳೂ ಅವಿವೇಕಿಗಳೂ "ಹೋರಾಟ" "ಕರನಿರಾಕರಣೆ" ಮೊದಲಾದ ದೊಡ್ಡ ದೊಡ್ಡ ಮಾತುಗಳಿಂದ ಜನರನ್ನು ಅಡ್ಡದಾರಿಗೆಳೆಯುತ್ತಿದ್ದಾರೆ. ಅವರಲ್ಲಿಯೂ ಆಶ್ಚರ್ಯದ ಮಾತೆಂದರೆ ಇಂಥವರಲ್ಲಿ ಕೆಲ "ಹೋರಾಟಗಾರ"ರು ಬ್ರಿಟಿಶರೊಡನೆ ರಾಷ್ಟ್ರ ಹೋರಾಡುತ್ತಿದ್ದಾಗ ಸುಖವಾಗಿ ಮನೆಯೊಳಗೆ ವಿಶ್ರಮಿಸುತ್ತಿದ್ದವರು. ಅವರಿಗೆ ಒಮ್ಮಿಂದೊಮ್ಮೆ ಈಗ ಹೋರಾಟದ ಆವೇಶ ಬಂದುಬಿಟ್ಟದ್ದರ ಅರ್ಥವನ್ನು ಜನರು ಗ್ರಹಿಸಿಕೊಳ್ಳಬೇಕು. ಈಗ ಅನವಶ್ಯಕವಾಗಿ ಅತಿರೇಕದ ಮಾರ್ಗವನ್ನು ಹಿಡಿಯುವದು ಅಪಾಯಕರವಾಗಿದೆಯೆಂದು ಎಚ್ಚರಿಸದಿರಲಾರೆವು. ಸ್ವತಂತ್ರ ಪ್ರಾಂತಾಕಾಂಕ್ಷಿಗಳಾದ ಇತರ ನೆರೆನಾಡಿನವರೊಡನೆ ನಾವು ಸಮೀಪದ ಸಖ್ಯಸಂಬಂಧವಿಟ್ಟುಕೊಳ್ಳದಿದ್ದರೆ ಭಾಷಾನ್ವಯ ಪ್ರಾಂತಕ್ಕೆ ವಿರೋಧಿಗಳಾದವರಿಗೆ-ಆಂಧ್ರರನ್ನೂ ಉಳಿದವರನ್ನೂ ಬೇರ್ಪಡಿಸಿದಂತೆ—ಇನ್ನೂ ಒಡಕು ಹುಟ್ಟಿಸುವ ಸಂಧಿ ಸಿಗಬಹುದು. ಕನ್ನಡಿಗರು ಇನ್ನೂ ಸಂಘಟಿತರಾಗಬೇಕಾಗಿದೆ. ತುಳು, ಕೊಂಕಣಿ, ಕೊಡವ ಭಾಷೆಗಳನ್ನಾಡುವ ಪ್ರದೇಶಗಳ ಜನರನ್ನು ಪರಿಣಾಮಕರವಾಗಿ ನಮ್ಮ ಕಡೆಗೆ ಎಳೆದುಕೊಳ್ಳುವ ಕೆಲಸ ಸಾಕಷ್ಟು ಆಗಿಲ್ಲ. ನಮ್ಮಷ್ಟೇ ಅಸಂತೋಷಗೊಳ್ಳಲು ಕಾರಣವುಳ್ಳ ಮರಾಟಿಗರು ಅನುಸರಿಸಿದ ಎಚ್ಚರಿಕೆಯ ನೀತಿಯನ್ನು ನೋಡಿ ನಾವೂ ಕಲಿಯಬೇಕು. ಹೊರತು "ಹೋರಾಟ ಹೋರಾಟ" ವೆಂದರೆ ಏನು ಬಂತು? ಈಗಿನ ಸ್ಥಿತಿಯಲ್ಲಿ ಉಗ್ರ ಕಾರ್ಯಗಳು ಯಾದವಿಯಲ್ಲಿಯೂ ಯಾದವಿ ಸರ್ವನಾಶದಲ್ಲೂ ಸಮಾಪ್ತವಾಗದೆ?

"ಲಖನೋ"ದ ಕೈಸನ್ನೆ

ಕಳೆದ ವಾರ ಮೌಲಾನಾ ಅಬುಲ ಕಲಮ ಅಝಾದರ ಅಧ್ಯಕ್ಷತೆಯಲ್ಲಿ ಲಖನೋದಲ್ಲಿ ನಡೆದ ಹಿಂದೀ ಒಕ್ಕೂಟ ಮುಸಲ್ಮಾನರ ಸಭೆ ಅನೇಕ ವಿಧದಿಂದ ಅಭೂತಪೂರ್ವವಾಗಿತ್ತು. ೫೦—೬೦ ಸಾವಿರ ಮುಸ್ಲಿಮರು ಸೇರಿದ ಈ ಸಭೆಯಲ್ಲಿ ಆದ ಗೊತ್ತುವಳಿಯೂ ಅಧ್ಯಕ್ಷ ಅಝಾದರು ಅಪ್ಪಣೆ ಕೊಡಿಸಿದಂತೆ ಚಿರಸ್ಮರಣೀಯವಾಗಿ ಉಳಿಯುದಿರದು. ಲಖನೋ ಪರಿಷತ್ತಿನ ಕೈಸನ್ನೆಯನ್ನು—ತಾವು ಅಭ್ಯುದಯ ಹೊಂದಬೇಕೆಂಬ ನಿಜವಾದ ಅಪೇಕ್ಷೆಯಿದ್ದರೆ-ಹಿಂದೀ ಮುಸ್ಲಿಮರು ಅನುಸರಿಸುವದು ಅವಶ್ಯವಾಗಿದೆ. ಜಾತೀಯ ರಾಜಕಾರಣವೇ ಹಿಂದುಸ್ತಾನಕ್ಕೊದಗಿದ ರಾಜಕೀಯ ಸಂಕಟಗಳ ಮೂಲವಾಗಿರುವದರಿಂದ ಎಲ್ಲ ಜಾತೀಯ ಸಂಸ್ಥೆಗಳನ್ನು ಮುಗಿದುಬಿಡಬೇಕೆಂದೂ ಅವರು ಹೇಳಿದರು. ಇಲ್ಲದೆಹೋದರೆ ವಿನಾಶ ಕಟ್ಟಿಟ್ಟದ್ದು. ಮುಸ್ಲಿಂ ಲೀಗನ್ನು ಅಸ್ತಿತ್ವದಲ್ಲಿ ಉಳಿಯುದಂತೆ ಮಾಡಿ ಮುಸ್ಲಿಮರು ರಾಷ್ಟ್ರೀಯ ರಾಜಕೀಯ ಪಕ್ಷಗಳಿಗೆ— ಅದರಲ್ಲಿಯೂ ಕಾಂಗ್ರೆಸ್ಸಿಗೆ ಸೇರಬೇಕೆಂಬ ಅವರ ಸೂಚನೆಯನ್ನು ಮಾನ್ಯ ಮಾಡಿ ಲಖ್ನೋ ಪರಿಷತ್ತು ಮುಸ್ಲಿಂಲೀಗನ್ನು (ಒಕ್ಕೂಟ ಹಿಂದುಸ್ತಾನದಲ್ಲಿ) ವಿಸರ್ಜಿಸಿ ಮುಸ್ಲಿಮರು ಕಾಂಗ್ರೆಸ್ಸನ್ನು ಸೇರಲೆಂದು ಗೊತ್ತುವಳಿ ಮಾಡಿತು. ಪರಿಷತ್ತಿನ ಸ್ವಾಗತಾಧ್ಯಕ್ಷ ಹಫೀಜ ಮಹಮುದ ಇಬ್ರಾಹಿಮರು ಮಹಾತ್ಮಾ ಗಾಂಧಿಯವರಲ್ಲಿಯೂ ಪಂಡಿತ ನೆಹರೂ ಅವರಲ್ಲಿಯೂ ವ್ಯಕ್ತಗೊಳಿಸಿದ ಪೂರ್ಣ ವಿಶ್ವಾಸ ಹಿಂದೀ ಮುಸ್ಲಿಮರ ಮನಸ್ಥಿತಿಯ ... ಎಲ್ಲ ಸಂಶಯಗಳನ್ನು ಹೊಡೆದೋಡಿಸಬೇಕು. ಪರಿಷತ್ತು ಕೇವಲ ಗೊತ್ತುವಳಿಯಿಂದ ಸಂತುಷ್ಟವಾಗದೆ ಅವನ್ನು ಆಚರಣೆಗೆ ತಂದು ಹಿಂದೂ ಮುಸ್ಲಿಮರಲ್ಲಿ ಸೌಹಾರ್ದವನ್ನುಂಟುಮಾಡುವಗೋಸ್ಕರ ಒಂದು ರಾಷ್ಟ್ರೀಯ ಸಮಿತಿಯನ್ನು ನೇಮಿಸುವ ಅಧಿಕಾರವನ್ನು ಡಾ. ಅಝಾದರಿಗೆ ಒಪ್ಪಿಸಿದುದು ಸ್ವಾಗತಾರ್ಹವಾಗಿದೆ. ಹಿಂದುಗಳೂ ಇತರ ಜಾತಿಗಳೂ ಅಝಾದರು ಕೈಕೊಂಡ ಈ ಪವಿತ್ರ ಕಾರ್ಯದಲ್ಲಿ ನೆರವಾಗಿ ರಾಷ್ಟ್ರೀಯ ಭೂತವನ್ನೊಯ್ಯ ... ತಿಸಲು ಬದ್ಧಕಂಕಣರಾಗುವದು ಅವಶ್ಯವಾಗಿದೆ. ಆದರೆ ಈ ಎಲ್ಲ ಸಾಮ್ರಾಜ್ಯ ನಿರ್ವಿಘ್ನವಾಗಿ ನಡೆ...

[illegible] ಸಂಶಯಾಸ್ಪದವಾಗಿದೆ. [illegible] ಮುಸ್ಲಿಮರ ಸಭ್ಯದ [illegible] ... [illegible] — [illegible] — ಮುಸ್ಲಿಂ [illegible] ... ಹಿಂದೀ ಮುಸ್ಲಿಮರನ್ನು [illegible] ... ಅವರಿಗೆ [illegible] ... ಮೂಲಕ ಹಿಂದೀ ರಾಷ್ಟ್ರದ [illegible] ... [illegible] — ಹಿಂದೀ ರಾಷ್ಟ್ರ [illegible] ... ಈಗ [illegible] ... ಪಾಕಿಸ್ತಾನದ [illegible] ... ಮುಂದಿನ ಪೀಳಿಗೆಗಳು [illegible].

ಭದ್ರತಾ ಮಂಡಳಕ್ಕೆ ಕಾಶ್ಮೀರ ಪ್ರಶ್ನೆ

ಅತಿ ಲಾಲನೆಯಿಂದ ಬೆಳೆದ ಮಕ್ಕಳಂತೆ [illegible] ಪಾಕಿಸ್ತಾನ ದೊಡನೆ ಯಾವುದೊಂದು ಪ್ರಶ್ನೆಯನ್ನು [illegible] ಬಗೆಹರಿಸುವದು ಸಾಧ್ಯವಿಲ್ಲವೆಂದು ಈಗೀಗ ಸ್ಪಷ್ಟವಾಗುತ್ತಿದೆ. ಕಾಶ್ಮೀರ ಪ್ರಶ್ನೆಯನ್ನು ಸಂಧಾನದಿಂದ ಬಿಡಿಸಲು ಮಾಡಿದ ಪ್ರಯತ್ನವೆಲ್ಲ ವಿಫಲವಾಗಿ ಹಿಂದುಸ್ತಾನ ಸರಕಾರ ಈಗ ಈ ವಿಷಯವನ್ನು ಯುಕ್ತರಾಷ್ಟ್ರ ಭದ್ರತಾ ಮಂಡಲದ ಮುಂದೆ ಒಯ್ಯಲು ನಿರ್ಧರಿಸಿದೆಯೆಂದು ತಿಳಿಯುತ್ತದೆ. [illegible] ಕಾಶ್ಮೀರದ ವಿಷಯದಲ್ಲಿ [illegible] ಕಾರಣಗಳು ಹಿಂದುಸ್ತಾನ ಸರಕಾರದ ಈ ನಿರ್ಣಯಕ್ಕೆ ಕಾರಣವಾದವು. ದಾಳಿಗಾರರಿಗೆ ಪಾಕಿಸ್ತಾನ ಸರಕಾರ ಸಹಾಯ ಮಾಡಿಲ್ಲವೆಂದು [illegible] ಹೇಳುತ್ತಾರೆ. ಆದರೆ ಪಾಕಿಸ್ತಾನದೊಳಗಿಂದ ಬರುವ ದಾಳಿಗಾರರ [illegible] ತೆಗೆದುಕೊಳ್ಳಲು ಹಿಂದೀ ಸೈನಿಕರಿಗೆ ತಮ್ಮ [illegible] ಯಲ್ಲಿ ಪ್ರವೇಶ ಕೊಡಲಿಕ್ಕೂ ಅವರು ಸಿದ್ಧರಿಲ್ಲ. ಆದರೆ ಶೇಖ ಅಬ್ದುಲ್ಲಾರ [illegible] ಗೆಂದು ಹಿಂದೀ ಸೈನಿಕರನ್ನು [illegible] ಹಿಂದೆ ಕರೆಸಿ ಮತಗಣನೆ [illegible] ಗಣನೆಗೆ ಹಿಂದುಸ್ತಾನ ಸರಕಾರ [illegible] ಸಿದ್ಧವಿತ್ತು. ಆದರೆ ದಾಳಿಗಾರರನ್ನು [illegible] ಶಾಂತಿ ಸ್ಥಾಪಿಸಿದಲ್ಲದೆ ಅದು ಸಾಧ್ಯವಿಲ್ಲ. [illegible] ಸ್ಥಾಪನೆಗೆ ನೆರವಾಗಲು ಪಾಕಿಸ್ತಾನಕ್ಕೆ ಮನಸ್ಸಿಲ್ಲ [illegible] ಮೇಲೆ ಭದ್ರತಾ ಮಂಡಲದ ಮುಂದೆ [illegible] ಪ್ರಶ್ನೆ ಹೋಗದೆ ಗತ್ಯಂತರವಿಲ್ಲ. ಈ ದಾಳಿಯಲ್ಲಿ ಪಾಕಿಸ್ತಾನದ ಅಂಗವಿದೆಯೆಂಬ ಬಗ್ಗೆ [illegible] ದಷ್ಟು ಪ್ರಮಾಣಗಳು ಹಿಂದೀ ಸರಕಾರದ [illegible] ಇದ್ದು ಅವನ್ನೆಲ್ಲ ಭದ್ರತಾ ಮಂಡಲದ ಮುಂದೆ ಇರಿಸಲಾಗುವದು. ಇದರಲ್ಲಿ ಪ್ರಬಲ ರಾಷ್ಟ್ರಗಳ ಅಂಗವಿಲ್ಲದಿರುವದರಿಂದ [illegible]

[illegible]

ಅಂತರಾಷ್ಟ್ರೀಯ

...ಮನ್ನರಿಗೆ ಸೋಲು ?

...ವ್ಯಾಲೇಸರು ಆಕಾಶವಾಣಿಯಲ್ಲಿ ಭಾಷಣ ...ತ್ರ ತಾವು ೩ ನೆಯ ಪಕ್ಷ ಸ್ಥಾಪಿಸಿ ಅಧ್ಯಕ್ಷ ...ಕೆಗೆ ನಿಲ್ಲುವುದಾಗಿ ಸಾರಿದ್ದರಿಂದ ರೂಜ ...ವೆಲ್ಟ ನಂತರ ಡೆಮೋಕ್ರ್ಯಾಟಿಕ್ ಪಕ್ಷಕ್ಕೆ ...ಆಘಾತ ಬಿದ್ದಂತಾಯಿತೆಂದು ವಾಶಿಂಗ್ಟ ...ಹೇಳಲಾಗುತ್ತಿದೆ.

...ಕ್ಕೆ ಟ್ರೂಮನ್ನರ ಖಾಸಗಿ ವೈದ್ಯರು ...ವೇಟಿಯಲ್ಲಿ ಸಹ್ಯಾ ವ್ಯಾಪಾರದಲ್ಲಿ ತೊಡ ...ಪತ್ರಿಕೆಯಲ್ಲಿ ಪ್ರಧಾನವಾಗಿ ಪ್ರಕಟವಾದ ... ವ್ಯಾಲೇಸರ ಭಾಷಣ ನಡೆದುದರಿಂದ ...ಜನರನ್ನು ಬಹುವಾಗಿ ಆಕರ್ಷಿಸಿತೆಂದು ...ತ್ತದೆ. ವ್ಯಾಲೇಸರು ಧ್ಯೇಯವಾದಿಗಳಾ ...ದ ವ್ಯವಹಾರ ಚತುರರಾಜಕಾರಣಿಗಳಾ ...ಂದು ಪ್ರಚಾರ ಸಾಗಿದ್ದರೂ ನಿನ್ನಿನ ...ರಿಂದ ಟ್ರೂಮನ್ನರಿಗೆ ಸೋಲುಂಟಾದರೂ ...ದೆಂದು ಶಂಕಿಸಲಾಗಿದೆ.

...ಯುದ್ಧ ಸೈನ್ಯ ಶಿಕ್ಷಣವನ್ನು ತೆಗಳಿದ್ದ ...ವ್ಯಾಲೇಸರು ತರುಣರಿಗೆ ಪ್ರಿಯರಾದರು. ...ವರ್ಣದ್ವೇಷವನ್ನು ಅವರು ಖಂಡಿಸಿದ್ದ ...ಕಿಯರಿಗೆ ನ್ಯೂಯಾರ್ಕಿನ ಮತದಾರರು ...ನೆರಾಗುವಂತಾಯಿತು.

...ರೋಪಿಗೆ ಸಹಾಯ ಮಾಡುವ ಮಾರ್ಶಲ ...ನೆಯನ್ನು ಟೀಕಿಸುವಾಗ ರಿಪಬ್ಲಿಕನ್ ...ರಾದ ರಾಬರ್ಟ ಟಾಪ್ಟರಂತೆಯೇ ವ್ಯಾಲೇ ...ಅದರಿಂದ ಬೆಲೆಗಳು ಮಿತಿಮೀರಿ ಅಮೇ ...ಜೀವನ ನಿರ್ವಾಹದ ವೆಚ್ಚ ಏರಿ ಜೀವನ ...ಇಳಿಯುವುದೆಂದು ಹೇಳಿ ಸರಕಾರೀ ನೌಕ ...ತವನ್ನು ಕಡೆಗೆ ಒಲಿಸಿಕೊಂಡರು.

...ಸಧ್ಯದ ಟ್ರೂಮನ್ ಧೋರಣವನ್ನು ...ರ್ಣವಾಗಿ ವಿರೋಧಿಸಿ ಯುದ್ಧಮುಖ ...ಕವನ್ನು ಶಾಂತಿಮುಖದ್ದನ್ನಾಗಿ ...ಡಿಸುವ ಧೋರಣವನ್ನು ಜನತೆಯ ...ಟ್ಟು ಸ್ವತಂತ್ರ ಮರಿಯಾಳಾಗಿ ನಿಲ್ಲಲಿ ...ದೆಸ್ರಿ ವ್ಯಾಲೇಸರು ಅನೇಕರ ಹೃದಯ ...ಹಿಡಿದಿದ್ದಾರೆ. ಟ್ರೂಮನ್ನರಿಗಿವರು ಸಮ ...ತಿಸ್ಪರ್ಧಿಗಳೆಂಬಲ್ಲಿ ಸಂಶಯವಿಲ್ಲ. ಆದುದ ...ಟ್ರೂಮನ್ನರ ಜಯವು ಅನಿಶ್ಚಿತವೆಂದು ...ನೆರೆ ತಪ್ಪಾಗದು. ರಾಜತಂತ್ರದ ಗತಿಯು ...ಕ್ಕೆ ಬದಲಾಗುವ ಸ್ವಭಾವದ್ದಾದುದರಿಂದ ...ಮವನ್ನು ನಿರ್ಧರಿಸಿ ಹೇಳಲು ಕೆಲಕಾಲ ...ಕಾದಿರಿ.

...—ಸಿಂಹಳ ಮಾತುಕತೆ

...ಳದ ಮುಖ್ಯ ಮಂತ್ರಿಯಾದ ಶ್ರೀ ಡಿ. ...ಸೇನಾನಾಯಕೆಯವರು ಹಿಂದುಸ್ತಾನ— ...ಳ ನಡುವಣ ಪ್ರಮುಖ ರಾಜಕೀಯ ...ಬಗ್ಗೆ ಮಾತುಕತೆ ನಡೆಸಲು ಮಹಾ ...ಜವಾಹರರ ಭೆಟ್ಟಿಗಾಗಿ ದಿಲ್ಲಿಗೆ ದಯ ...ದ್ದಾಗಿ ತಿಳಿಯುತ್ತದೆ.

...ರಾಜಕೀಯ ಪ್ರಶ್ನೆಗಳಲ್ಲಿ ೮ ಲಕ್ಷ ಹಿಂದೀ ...ಂಹಳದಲ್ಲಿ ನೆಲಸಿದ್ದು, ಅವರ ನಾಗರಿಕ ...ಬಾಧ್ಯತೆಗಳನ್ನು ನಿರ್ಣಯಿಸುವುದು ...ದುದು. ಸಿಂಹಳಕ್ಕೆ ಭಾರತೀಯರು ...ಗುವುದನ್ನು ನಿಲ್ಲಿಸುವ ಹಿಂದೀ ಧೋರ ...ರ್ಕಾರದ ಕಾಯಿದೆಯನ್ನೂ ಇನ್ನು ...ಮೂ ಭಾರತ ಸರಕಾರವು ಅಮಲಿನಲ್ಲಿಡ ...ದು ಹೇಳಲಾಗುತ್ತದೆ. ಅಗಲೆ ಸಿಂಹಳ ...ಸಿರುವ ಹಿಂದೀಯರಿಗೆ ತಾವೇ ಯಾವ ...ಸೇರಬೇಕೆಂಬುದನ್ನು ತಾವು ನಿರ್ಧರಿ ...ವಕಾಶಕೊಡಬೇಕೆಂದು ಜವಾಹರರು ...ಸೇನಾನಾಯಕೆಯವರನ್ನು ಕೇಳಬಹು ...ಬಹುದಾಗಿದೆ. ರಾಷ್ಟ್ರೀಯ ಆರ್ಥಿಕ ಪುನ ...ಯೋಜನೆಗಳನ್ನೊಳಗೊಂಡು ಎಲ್ಲ ...ಸಿಂಹಳದ ಪ್ರಜೆಗಳಾಗಿ ಉಳಿಯುವ ...ದೀಯರಿಗೆ ಸಂಪೂರ್ಣ ನಾಗರಿಕ ಹಕ್ಕು ...ಗಳನ್ನು ಕೊಡಬೇಕೆಂದು ಹಿಂದೀ ಮಹಾ ...ಕೇಳುವರೆಂದೂ ಊಹಿಸಿದೆ.

...ಸ್ತಾನ-ಸಿಂಹಳಗಳು ಬಹಳ ಕಾಲದಿಂದ ...ಸುವಂತಿವೆ. ಸಿಂಹಳವಲ್ಲಿಂದು ಕೃಷಿ ...ಮುಂತಾದವುಗಳ ಅಭಿವೃದ್ಧಿಯಾಗಿ ...ನಕ್ಕೆ ಹಿಂದೀ ಮಲಸೆಗಾರರೂ ಕೆಲಸಗಾ ...ಮುಮಟ್ಟಿಗೆ ಕಾರಣರು. ಅದರಲ್ಲೂ ...ಪ್ರಾಂತದಿಂದಲೂ ಮಲಬಾರಿನಿಂದಲೂ ...ಲಸಿದವರೇ ಹೆಚ್ಚು. ಈ ದೃಷ್ಟಿಯಿಂದ ...ಸ್ತಾನದ ಧೋರಣವು ನ್ಯಾಯಬದ್ಧವಾ ...ಸಿಂಹಳದ ಮುಖ್ಯ ಮಂತ್ರಿಗಳು ...ಊಹಿಸಲಾಗಿದೆ. ಸಿಂಹಳಕ್ಕೆ

ಯೆಹೂದಿಗಳ ಪ್ರತಾಪ

೬ ಅರಬ್ಬೀ ಪ್ರದೇಶಗಳನ್ನು ಚೆನ್ನಾಗಿ ಶಸ್ತ್ರ ಸಜ್ಜಿತರಾದ ಯೆಹೂದಿಗಳು ಅಕ್ರಮಿಸಿದರೆಂದು ಇದೀಗ ಜೆರೂಸಲೇಮಿನಿಂದ ಸುದ್ದಿ ಬಂದಿದೆ. ಒಬ್ಬ ಅರಬನನ್ನು ಕೊಂದು ೫ ಅರಬ ಗೃಹಗಳನ್ನು ನಾಶಗೊಳಿಸಿ ಅನೇಕರಿಗೆ ಅವರು ಗಾಯ ಮಾಡಿ ಹೋದರು. ಅಕ್ರಾಮಕರು ಮೆಶಿನ್ ಗನ್ ಮತ್ತು ಬಾಂಬುಗಳನ್ನು ಪ್ರಯೋಗಿಸಿದ್ದಲ್ಲದೆ ಸಮರ್ಥವಾಗಿ ಅರಬರ ಪ್ರತ್ಯಸ್ತ್ರಗಳನ್ನು ಖಂಡಿಸಿದರು. ರಾತ್ರಿಯ ವೇಳೆ ಸಲಾಮೆ, ಹೈಫಾ, ಹಾರ್ಟುವ್ ಮತ್ತು ನೋಜಾಗಳ ಮೇಲೂ ಯೆಹೂದಿಗಳು ದಾಳಿ ಮಾಡಿದುದಾಗಿ ತಿಳಿಯುತ್ತದೆ.

ಇದಾವುದರ ಪರಿಣಾಮ ? ಸಂಯುಕ್ತ ರಾಷ್ಟ್ರ ಸಂಘವು ಪಾಲಿಸ್ತಾನವನ್ನು ವಿಭಜಿಸಬೇಕೆಂದು ನಿರ್ಣಯಿಸಿದುದರ ಫಲವಿದಲ್ಲದೆ ಮತ್ತೇನು ? ಹಿಟ್ಲರನ ಪ್ರಕಾರ The best method of defence is,to be on the offensive–ಆತ್ಮರಕ್ಷಣೆಯ ಉತ್ತಮೋತ್ತಮ ಉಪಾಯವೆಂದರೆ ಮೊದಲೇ ಶತ್ರುಗಳ ಮೇಲೆ ಬೀಳುವುದು. ಇದೇ ಸೂತ್ರವನ್ನು ಇಂದು ಯುದ್ಧ ವಿಜೃಂಭಣೆಯ ಘೋಷಣೆ ಮಾಡುತ್ತಿರುವ ಅರಬರನ್ನು ಬಗ್ಗುಬಡಿಯಲು ಯೆಹೂದಿಗಳು ಅನುಸರಿಸಿದಂತಿದೆ. ವಿಭಜನೆಯಲ್ಲಿ ಅರಬರಿಗೇ ಹೆಚ್ಚು ಅನ್ಯಾಯವಾಗಿದೆಯೆಂಬುದು ಅಗಲೆ ವಿದಿತವಾಗಿದೆ. ಅವರ ಅರ್ಭಟ ಈ ಕಾರಣದಿಂದ ಕೆಲಮಟ್ಟಿಗೆ ನ್ಯಾಯವೆನ್ನಬಹುದು. ಆದರೆ ಹಿಂದೆ ವಿವರಿಸಿದಂತೆ ಮಾತಿನಷ್ಟು ಅವರಿಗೆ ಕೃತಿಸಾಮರ್ಥ್ಯ, ಸಂಖ್ಯಾಬಲದಷ್ಟು, ಧನ ಮತ್ತು ಶಸ್ತ್ರಾಸ್ತ್ರಬಲ ಇಲ್ಲದುದರಿಂದ ಸಧ್ಯ ಯೆಹೂದಿಗಳ Stunt ಅದ್ಭುತ ಸ್ವರೂಪದ ದಾಳಿಯಿಂದ ದಿಗಿಲುಗೊಳ್ಳುವಂತಾಗಿವೆ. ನಿರ್ಣಯಕೊಡುವ ಜವಾಬುದಾರಿ ಹೊತ್ತ ಸಂ. ರಾ. ಸಂಘವು ಅದನ್ನು ಶಾಂತವಾಗಿ ಜಾರಿ ಮಾಡುವ ಹೊಣೆಯನ್ನೂ ಹೊರಬೇಕಾಗಿದೆ. ಹಾಗೆ ಅದು ಮಾಡಬಹುದೇ ?

ತುರ್ಕಿಯು ಮುಸ್ಲಿಂ ರಾಷ್ಟ್ರವಾದರೂ ಅಲ್ಲಿಂದ ಅರಬರ ನೆರವಿಗೆ ಸೈನ್ಯ ಹೋಗುವದೆಂಬ ಸುದ್ದಿಯನ್ನು ಅಲ್ಲಿಯ ವಿದೇಶ ಶಾಖೆ ಅಲ್ಲಗಳೆದಿರುತ್ತದೆ. ಅದಕ್ಕೆ ತುರ್ಕಿಯ ಕಾಯಿದೆಯೇ ಹಾಗಿದೆ ಎಂದು ಅದು ಸಾರಿದೆ. ಆ ಕಾಯಿದೆಯ ಪ್ರಕಾರ ತುರ್ಕಿಯ ಪ್ರಜೆಗಳು ಅನ್ಯ ಸರಕಾರಗಳ ಕೈಕೆಳಗೆ ಮಿಲಿಟರಿ ಕೆಲಸಕ್ಕೆ ಸೇರಬಾರದೆಂದಿದೆ. ಇದರ ಅನ್ವಯ ಪಾಲಿಸ್ತಾನದ ಕಲಹದಲ್ಲಿ ತಾನು ಕೈಹಾಕದೆ ತಟಸ್ಥವಾಗಿರುವುದಾಗಿ ತುರ್ಕಿಯು ಘೋಷಿಸಿದೆ. ರಶಿಯದ ನೆರೆಯಲ್ಲಿರುವ ತುರ್ಕಿಯ ಈ ಧೋರಣವು ಸ್ವಹಿತಕ್ಕೆ ಅನುಕೂಲವಾಗಿಯೇ ಇದೆ ಎನ್ನದಿರಲಾಗದು. ರಶಿಯ ಅಮೇರಿಕಗಳೆರಡೂ ವಿಭಜನೆಗೆ ಸಮ್ಮತಿಯಿತ್ತ ರಾಷ್ಟ್ರಗಳಾಗಿರುವಾಗ ಅವುಗಳ ಧೋರಣ ಈ ಸಂದರ್ಭದಲ್ಲಿ ಏನೆಂಬುದನ್ನು ನಿರೀಕ್ಷಿಸಿ ನೋಡಬೇಕಾಗಿದೆ.

ಗ್ರೀಸಿನ ಉಗ್ರೋಪಾಯ

"ಸ್ವತಂತ್ರ 'ಸರಕಾರ"ದ ಕೂಟ ಯೋಧರ ಸೈನ್ಯಗಳನ್ನು ಗ್ರೀಸಿನ ಸರಕಾರವು ಯಶಸ್ವಿಯಾಗಿ ಹಿಮ್ಮೆಟ್ಟಿಸಿದೆಯೆಂದು ತಿಳಿದು ಬಂದಿದೆ. ರಶಿಯದ ನೆರೆಯಲ್ಲಿರುವ ಗ್ರೀಸಿನಲ್ಲಿ ಕಮ್ಯುನಿಸ್ಟರ ಹಾವಳಿಯಿರುವುದು ಸಹಜವಾಗಿದೆ. ಆದುದರಿಂದಲೇ ಅಮೇರಿಕವು ಅವರನ್ನು ಸದೆಬಡಿಯಲು ಅವಶ್ಯವಿರುವ ಧನ ಶಸ್ತ್ರಾಸ್ತ್ರಗಳನ್ನು ಗ್ರೀಸು ಸರ್ಕಾರಕ್ಕೆ ಪೂರೈಸುತ್ತ ಬಂದಿದೆ.

ಗ್ರೀಸು ಸರಕಾರವು ದಾಳಿಗಾರರಿಂದ ಆಕ್ರಾಂತವಾದ ಪ್ರದೇಶದ ಸರಕಾರದ ವಿರುದ್ಧ ೧೯೩೧ರ ಬಹಿಷ್ಕಾರದ ಕಾಯಿದೆಯನ್ನು ಪುನಃ ಪ್ರಯೋಗಿಸಿತು. ಇದರಿಂದ ಸರಕಾರೀ ನೌಕರರಲ್ಲಿ ಕಮ್ಯುನಿಸ್ಟರಿದ್ದರೆ ಅವರಿಗೆ ಉಚ್ಚಾಟನೆಯಾಗುವುದಲ್ಲದೆ ನಾಡಿನ ಎಲ್ಲ ಕಮ್ಯುನಿಸ್ಟ ಸಂಘ ಸಂಸ್ಥೆಗಳೂ ಇಲ್ಲದಂತಾಗಬೇಕಾಗುವುದು.

ಸ್ಪಷ್ಟ ಧೋರಣವಿಲ್ಲದ ಸೋಶಾಲಿಸ್ಟ ಪಕ್ಷೀಯರು ಕಮ್ಯುನಿಸ್ಟರೊಡನೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳಬಾರದೆಂದು ಸರಕಾರ ಘೋಷಿಸಿದೆ.

ಗ್ರೀಕ ಕೂಟಬಲಕ್ಕೆ ಜೋಸ್ಪರಸ್ಸಿನ ಮುಖಾಂತರ ಹಡಗುಗಳಲ್ಲಿ ಮದ್ದು ಗುಂಡುಗಳನ್ನು ಕಳುಹಲಾಗುತ್ತಿದೆಯೆಂದು ತುರ್ಕಿಯ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಹೇಳುವುದೊಂದು ಮಾಡುವುದು ಮತ್ತೊಂದು ಎಂಬ ರೀತಿಯಿಂದ ಅಮೇರಿಕ ಮತ್ತು ರಶಿಯ

ಮದರಾಸು ಮದ್ಯಪಾನ ನಿರೋಧ ಕಾನೂನು

ಈ ಸಂಬಂಧವಾಗಿ ಆಯುರ್ವೇದಾಭಿಮಾನಿಗಳಲ್ಲಿ ಒಂದು ವಿನಂತಿ

ಶ್ರೀ ಜನಾರ್ದನ ನಾಯಕ, ಮ್ಯಾನೇಜಿಂಗ್ ಡೈರೆಕ್ಟರ್, ಭುವನೇಂದ್ರ ಪ್ರಾಡಕ್ಟ್ಸ್ ಕಟಪಾಡಿ ದ. ಕ., ಇವರಿಂದ

ಪ್ರೊಹಿಬಿಶನ್ ಆಕ್ಟಿನ ೧೮ ನೇಯ ಕಲಮಿನ ಅನ್ವಯ ಅಸವಾರಿಷ್ಟ ಮತ್ತು ಮಾದಕ ಪದಾರ್ಥಗಳು ಸೇರಿದ ಇತರ ಔಷಧಿಗಳ ತಯಾರಿಕೆಗೆ ಅಗತ್ಯವಿರುವ ಲ್ಯಾಯಸನ್ಸಗಳನ್ನು ಜಿಲ್ಲಾ ಕಲೆಕ್ಟರರಿಂದ ಪಡೆದುಕೊಂಡೇ ಕೈಕೊಳ್ಳಬೇಕಾಗಿರುತ್ತದೆ. ಈ ವಿಷಯದಲ್ಲಿ ಮಾನ್ಯ ಸರಕಾರವು ಯೋಗ್ಯ ಪ್ರಚಾರ ಕಾರ್ಯವನ್ನು ಮಾಡದ ಸಂಬಂಧ, ಜನಸಾಮಾನ್ಯರಿಗೂ, ಆಯುರ್ವೇದ ವೈದ್ಯ ವೃತ್ತಿಯವರಿಗೂ ತುಂಬ ತೊಂದರೆದಾಯಕವಾಗಿ ಕಂಡು ಬಂದಿರುತ್ತದೆ. ಹಲವು ಕಡೆಗಳಲ್ಲಿ ಸಭೆಗಳು ಜರುಗಿ ಸರಕಾರದವರು ಆಯುರ್ವೇದ ಔಷಧಿಗಳ ವಿಷಯವಾಗಿ ಈ ರೀತಿಯ ಧೋರಣೆ ವಹಿಸಿದ್ದನ್ನು ಖಂಡಿಸಿ ನಿರ್ಣಯಗಳನ್ನು ಮಾಡಿ, ಮಾನ್ಯ ಸರಕಾರದ ಗಮನಕ್ಕೆ ತಂದಿರುವ ಸಂಗತಿಗಳು ಅಲ್ಲದೆ ಅಲ್ಲಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಆಯುರ್ವೇದ ಔಷಧಿಗಳನ್ನು ಮಾರುವವರ ಕೂಡ ಆಸವಾರಿಷ್ಟಗಳನ್ನು ಅಮಾನತು ಪಡಿಸಿದ ದೂರುಗಳು, ಇವರಿಗೆ ಈ ಹೊಸ ಆಕ್ಟಿನ ವಿಷಯವಾಗಿ ಏನೊಂದೂ ತಿಳಿಸದೆ ಲಾಯಸನ್ಸ ಪಡೆಯದೆ ಮಾರಬಾರದಾಗಿ ಮಾತ್ರ ತಿಳಿಸಿರುತ್ತಾರಾಗಿ ಕೂಡ ದೂರುಗಳು ಬಂದಿರುತ್ತವೆ. ಅದಕಾರಣ ಈ ಆಕ್ಟಿನ ಪ್ರಕಾರ ಆಸವಾರಿಷ್ಟಗಳನ್ನು ಮಾಡಲು ಇಲ್ಲವೆ ಮಾರಲು ನಿರ್ದಿಷ್ಟಗೊಳಿಸಿದ ವಿಷಯ ಅವರಿಗೆ ಮನದಟ್ಟಾಗುವಂತೆ ತಿಳಿಸುವದು ಅಗತ್ಯವಾಗಿರುತ್ತದೆ. ಈ ವಿಷಯವಾಗಿ ನಾನು ಕೆಲವು ಮಾತುಗಳನ್ನು ತಿಳಿಸಲು ಅಪೇಕ್ಷಿಸುತ್ತೇನೆ.

ಅಸವಾರಿಷ್ಟಗಳ ತಯಾರಿಕೆ: ಅವುಗಳಲ್ಲಿ "Alchohol" ಎಂಬ ಮದ್ಯಸಾರವು ಉತ್ಪನ್ನವಾಗುತ್ತದೆ. ಅವುಗಳ ಸದುಪಯೋಗವನ್ನು ಮಾಡುವವರಿಗೆ ಏನೊಂದೂ ತೊಂದರೆಗಳಾಗದ ರೀತಿಯಲ್ಲಿ ಅಗತ್ಯವಿರುವ ಅನುಕೂಲತೆಗಳನ್ನು, ಔಷಧದ ರೂಪವಾಗಿ ಉಪಯೋಗಿಸಲು ಅಡ್ಡಿಯಾಗದಂತೆ, ಮಾನ್ಯ ಸರಕಾರದವರು ಈ ಆಕ್ಟಿನಲ್ಲಿ ಸೇರಿಸಿರುತ್ತಾರೆ. ಅಸವಾರಿಷ್ಟಗಳ ದುರುಪಯೋಗವಾಗದಂತೆ ಈ ಪ್ರಕಾರ ಕ್ರಮಗಳನ್ನು ಜಾರಿಗೆ ತಂದಿರುವದು ನ್ಯಾಯವಾಗಿರುತ್ತದೆ. ಅಸವಾರಿಷ್ಟಗಳನ್ನು ನ್ಯಾಯವಾದ ರೀತಿಯಲ್ಲಿ ತಯಾರಿಸುವದಕ್ಕೆ ಮತ್ತು ಮಾರುವದಕ್ಕೆ ಜಿಲ್ಲಾ ಕಲೆಕ್ಟರ ದೊರೆಗಳಿಂದ ಅಗತ್ಯವಿರುವ ಲ್ಯಾಸನ್ಸ್ ಪಡೆಯಲು ಯಾವ ತೊಂದರೆಗಳೂ ಇರುವದಿಲ್ಲ. ಪ್ರತಿಯೊಬ್ಬ ವೈದ್ಯಕೀಯ ವೃತ್ತಿಯವರು ತನ್ನ ಹೆಸರು, ವಿಳಾಸ, ಗ್ರಾಮ, ತಾಲೂಕು, ಮತ್ತು ವೈದ್ಯಕೀಯವೃತ್ತಿಯನ್ನು ಎಷ್ಟು ಸಮಯದಿಂದ ಮಾಡಿಕೊಂಡಿರುತ್ತಾನೆ ಎಂಬುದಾಗಿ ವಿವರಗಳನ್ನೊಳಗೊಂಡ ಅರ್ಜಿಯನ್ನು ಸಂಬಂಧಪಟ್ಟ ಪ್ರೊಹಿಬಿಶನ್ ಇನ್ಸಪೆಕ್ಟರರ ಮುಖಾಂತರ, ಅವರ ಶಿಫಾರಸು ಸಮೇತ ಜಿಲ್ಲಾ (೧) ಫಾರ್ಮಸಿ ಲ್ಯಾಸನ್ಸ್. (Pharmacy Licence) (೨) ವೈದ್ಯಕೀಯ ವೃತ್ತಿಯ ಲಾಸೆನ್ಸ್ (Ayurvedic Practitioner's Licence) ಗಳನ್ನು ಪಡೆದುಕೊಳ್ಳಬೇಕು.

೧ ಫಾರ್ಮಸಿ ಲ್ಯಾಸೆನ್ಸ್ ಪಡಕೊಂಡವರು ಯಾವ ಅಸವಾರಿಷ್ಟಗಳನ್ನು ತಯಾರಿಸುವುದಕ್ಕೂ ಅಡ್ಡಿಯಿಲ್ಲ. ಅವುಗಳಪೈಕಿ ದ್ರಾಕ್ಷಾಸವ, ದ್ರಾಕ್ಷಾರಿಷ್ಟ, ಮೃದ್ವೀಕಾಸವ, ಪಿಪ್ಪಲ್ಯಾಸವ, ನಾರಿಕೇಳಾಸವ, ಮತ್ತು ಖರ್ಜೂರಾರಿಷ್ಟ ಈ ಆರು ಬಗೆಯ ಅಸವಾರಿಷ್ಟಗಳನ್ನು ಬಿಟ್ಟು ಬಾಕಿ ಉಳಿದ ಅಸವಾರಿಷ್ಟಗಳನ್ನು ಮಾರಾಟ ಮಾಡಲು ನಿರ್ಬಂಧ ಇರುವುದಿಲ್ಲ. ಈ ಆರು ಬಗೆಯ ಅಸವಾರಿಷ್ಟಗಳನ್ನು ವೈದ್ಯಕೀಯ ವೃತ್ತಿಯ ಲ್ಯಾಸನ್ಸ್‌ದಾರರಿಂದ ಕೊಡಲ್ಪಡಬಹುದಾದ ಚೀಟಿ (Prescription) ಗಳ ಪ್ರಕಾರ ಒಂದು ಬಾಟ್ಲಿಗೆ ಮೀರದಂತೆ ಮಾರಬಹುದು. ಆ ಲ್ಯಾಸನ್ಸಿಗೆ ವರ್ಷಾವಧಿ ರೂ ೧೦/= ನ್ನು ಸರಕಾರದ ಖಜಾನೆಗೆ ಪಾವತಿ ಮಾಡಿ ಪ್ರತಿ ವರ್ಷ ಅದನ್ನು ಊರ್ಜಿತಗೊಳಿಸ (Renewal) ಬೇಕಾಗಿರುತ್ತದೆ. ಮೇಲ್ಗಡೆ ವಿವರಿಸಿದ ಆರು ಅಸವಾರಿಷ್ಟಗಳನ್ನು ಮಾತ್ರ ಕ್ರಮ ಪ್ರಕಾರದ ಲೆಖ್ಖ ಪತ್ರಗಳನ್ನಿಟ್ಟು ವಹಿವಾಟು ನಡಸ ಬೇಕಾಗುತ್ತದೆ.

೨ ವೈದ್ಯಕೀಯ ಲ್ಯಾಸನ್ಸ್‌ದಾರನು ಮೇಲ್ಗಡೆ ವಿವರಿಸಿದ ೬ ಅಸವಾರಿಷ್ಟಗಳನ್ನು ಬಿಟ್ಟು ಉಳಿದ ಅಸವಾರಿಷ್ಟಗಳನ್ನು ತಯಾರಿಸಲು ಅರ್ಹನಾಗಿರುತ್ತಾನೆ ಮತ್ತು ಸದರಿ ೬ ಅಸವಾರಿಷ್ಟಗಳನ್ನು ಫಾರ್ಮಸಿ ಲ್ಯಾಸನ್ಸ್‌ದಾರರಿಂದ ಪಡಕೊಳ್ಳಬಹುದು. ಈ ಪ್ರಕಾರ ಪಡಕೊಳ್ಳುವ ಅಸವಾರಿಷ್ಟಗಳ ಬಗ್ಗೆ ಕ್ರಮ ಪ್ರಕಾರವಾದ ಲೆಕ್ಕ ಪತ್ರಗಳನ್ನಿಟ್ಟು ನ್ಯಾಯವಾದ ಚೀಟಿ (Prescription) ಮೇರೆಗೆ ಮಾರಬೇಕಾಗುತ್ತದೆ, ಉಳಿದ ಅಸವಾರಿಷ್ಟಗಳನ್ನು ಮಾರಲು ಯಾವ ನಿರ್ಬಂಧವೂ ಇರುವದಿಲ್ಲ.

ಮೇಲ್ಗಡೆ ವಿವರಿಸಿದ ಕ್ರಮದಲ್ಲಿ ಅಸವಾರಿಷ್ಟಗಳ ತಯಾರಿಕೆಗಾಗಲಿ ನ್ಯಾಯವಾದ ರೀತಿಯಲ್ಲಿ ಸದುಪಯೋಗ ಮಾಡುವರಿಗೆ ಮಾರಲಿಕ್ಕಾಗಲೀ ಉಪಯೋಗಿಸಲಿಕ್ಕಾಗಲಿ ನಿರ್ಬಂಧಗಳಿಲ್ಲ. ಈ ಯೋಗ್ಯ ಕ್ರಮಗಳನ್ನು ಮಾನ್ಯ ಸರಕಾರದವರು ಜಾರಿಗೆ ತಂದ ವಿಷಯದಲ್ಲಿ ಆಯುರ್ವೇದಾಭಿಮಾನಿಗಳೆಲ್ಲರೂ ಸಹಕರಿಸಬೇಕಾಗಿ ನನ್ನ ವಿನಂತಿ. ಅಲ್ಲದೆ ವೈದ್ಯಕೀಯ ವೃತ್ತಿಯವರಿಗೆ ಅಗತ್ಯವಿರುವ ಲ್ಯಾಸನ್ಸ್‌ಗಳನ್ನು ಏನೊಂದೂ ತೊಂದರೆಯಿಲ್ಲದೆ ಸಿಗುವಂತೆ ಸಮ್ಮಂಧಪಟ್ಟ ಅಧಿಕಾರಿಗಳೂ ಕೂಡ ಸಹಕಾರವನ್ನು ನೀಡುವಂತೆ ನನ್ನ ವಿನಂತಿ.

ಕೊಳ್ಳುತ್ತಿರುವುದರಿಂದ ಅನೇಕ ಹಿಂದುಳಿದ ದೇಶಗಳು ಅಂತಃಕಲಹದಲ್ಲಿ ಆಸಕ್ತವಾಗಿ ಆತ್ಮನಾಶದ ಹಾದಿ ಹಿಡಿದಿವೆ. ಅಂತಹ ನಾಡುಗಳಲ್ಲಿ ಗ್ರೀಸ್ ಮತ್ತು ಚೀನಗಳು ಬಹು ಮುಖ್ಯವಾದುವು. ರಶಿಯವು ಗುಪ್ತವಾಗಿ ಕಮ್ಯುನಿಷ್ಟರಿಗೆ ಸಹಾಯವೊದಗಿಸುತ್ತಿದೆಯೆಂಬ ಆರೋಪವಿದ್ದರೆ ಅಮೇರಿಕವು ಪ್ರಕಟವಾಗಿ ಯಥೇಚ್ಛ ಸಹಾಯವನ್ನು ಬೇಕಾದಲ್ಲಿಗೆ ಕಮ್ಯುನಿಸ್ಟ ವಿರೋಧಿಗಳಿಗೆ ಕಳುಹುತ್ತಿದೆ. ಹೇಳುವವರಿಲ್ಲದವರ ಮಗಳು ಸೂ... ಬಸವಿಯಾದಳು !

ಆಂಗ್ಲೋ-ಅಮೇರಿಕನ್ ಒಪ್ಪಂದ ?

ನೌಕಾ ನಿರ್ಮಾಣ ಪ್ರಮಾಣದಲ್ಲಿ ಅಮೇರಿಕ ಇಂಗ್ಲಂಡುಗಳಲ್ಲಿ ಒಂದು ಒಪ್ಪಂದವಾಗಬಹುದೆಂದು ವಾಷಿಂಗ್‌ಟನ್ನಿನಲ್ಲಿ ಸುದ್ದಿಯಿದೆ. ಯುರೋಪಿನ ಪುನರುದ್ಧಾರ ಯೋಜನೆಯೊಳಗೆ ಇದು ಬರುವುದು. ಈ ಕಾರ್ಯದಲ್ಲಿ ಇತಿಹಾಸ ಕಾಲದಿಂದ ನೌಕಾ ನಿರ್ಮಾಣ ಚತುರರಾದ ಆಂಗ್ಲರು ಬಹಳ ಉತ್ಸಾಹ ವಹಿಸಿ ಕೆಲಸ ಮಾಡಲಿರುವರೆಂದು ತಿಳಿಯುತ್ತದೆ.

ಎದುರಿಗೆ ನೋಡಿದರೆ, ಬ್ರಿಟನ್ ಮತ್ತು ಇನ್ನಿತರ ಐರೋಪ್ಯ ರಾಷ್ಟ್ರಗಳು ನೌಕಾನಿರ್ಮಾಣವನ್ನು ಕಡಿಮೆ ಮಾಡಬೇಕೆಂಬ ಧೋರಣವನ್ನು ಅಮೇರಿಕದ ಸಂಯುಕ್ತ ಸಂಸ್ಥಾನವು ವಹಿಸಿದೆ. ಅದರ ಹೇಳಿಕೆಯಂತೆ ಯುದ್ಧ ಕಾಲದಲ್ಲಿ ಬಳಸಿ ಈಗ ಅದರ ತೀರ ಪ್ರದೇಶದಲ್ಲಿ ನಿಲ್ಲಿಸಲಾಗಿರುವ ಯುದ್ಧದ ಮತ್ತು ಇತರ ಸಾಮಾನ್ಯ ಹಡಗುಗಳನ್ನು ಐರೋಪ್ಯ ರಾಷ್ಟ್ರಗಳು ಕೊಳ್ಳಬೇಕು ಇಲ್ಲವೆ ಕೊಳ್ಳುವುದಾಗಿ ಮಾತು ಕೊಡಬೇಕು. ತನ್ನ ನೌಕಾ ನಿರ್ಮಾಣ ಕೇಂದ್ರಗಳನ್ನು ತೈಲ ಸಂಚಯ ಪಾತ್ರ (Oil Tankers) ಗಳ ನಿರ್ಮಾಣಕ್ಕಾಗಿ ಬಳಸಲು ಬ್ರಿಟನ್ನು ಒಪ್ಪಲಿರುವುದೆಂದು ನಂಬಲಾಗಿದೆ. ಅಗಲೆ ಪ್ರಾರಂಭಿಸಿದ ಹಡಗುಗಳ ನಿರ್ಮಾಣವನ್ನು ಮುಗಿಸಿದ ನಂತರವೆಂಬುದೊಂದೇ ಅದಕ್ಕಿರುವ ಕರಾರು.

ಜಗತ್ತಿನಲ್ಲಿ ಯುದ್ಧ ಕಾಲದಲ್ಲಿ ಕಟ್ಟಲಾದ ಹಡಗುಗಳಲ್ಲಿ ಸುಮಾರು ಅರ್ಧದಷ್ಟನ್ನು ಬ್ರಿಟಿಶ ನೌಕಾ ಕೇಂದ್ರಗಳಲ್ಲೇ ಕಟ್ಟಲಾಗಿದೆ. ಕಟ್ಟಿಕೊಡಬೇಕೆಂದು ಬ್ರಿಟಿಶರಿಗೆ ಇತರರು ಬರೆದುಕೊಂಡ ಮತ್ತು ಬರೆದುಕೊಳ್ಳಬಹುದಾದ ಹಡಗುಗಳ ಬೆಲೆ ೬ ಕೋಟಿ ಪೌಂಡುಗಳಷ್ಟಾಗಬಹುದು.

ಇಂಗ್ಲಂಡು 'ಕಡಲ ರಾಣಿ' ಯೆನಿಸಿಕೊಂಡ ತನ್ನ ಬಿರುದನ್ನು ರಕ್ಷಿಸಿಕೊಳ್ಳಲು ಇಂದಾದರೂ ಶಕ್ತವಿದೆ. ಆದರಿಂದ, ಪುನರುದ್ಧಾರ ಯೋಜನೆಗಳಿಂದ ತನ್ನ ಆರ್ಥಿಕೋನ್ನತಿಯನ್ನು ಸಾಧಿಸಲು ಟೊಂಕ ಕಟ್ಟಿ ನಿಂತಿರುವಾಗ ಅದು ತನ್ನ ಈ ಸುಪ್ರಸಿದ್ಧ ಉದ್ಯೋಗವನ್ನು ಎಂದಾದರೂ ಬಿಟ್ಟು

ತಿದ್ದುಪಡಿ

೨೨-೧೨-೪೭ ರ ಕರ್ಮವೀರದ ಸಂಚಿಕೆಯ ೧೩ ನೆಯ ಪುಟದ ಕೊನೆಯ ಕಾಲಂದ ಕೆಳಗಡೆಗೆ ಶೃಂಗೇರಿ ಜಗದ್ಗುರು ಸಂಸ್ಥಾನದ ಬಗ್ಗೆ ಒಂದು ಸಮಾಚಾರವಿದೆ. ಅದರಲ್ಲಿ ೨೫೦ ರೂ. ಗಳ ವೆಚ್ಚದ ಯೋಜನೆ ಎಂಬುದಾಗಿ ತಪ್ಪು ಬಿದ್ದಿದೆ. ಅದನ್ನು ೨೫ ಲಕ್ಷ ರೂಪಾಯಿಗಳ ವೆಚ್ಚದ ಯೋಜನೆ ಎಂಬುದಾಗಿ ತಿದ್ದಿಕೊಂಡು ಓದಬೇಕಾಗಿ ಬೇಡುತ್ತೇನೆ.

ಸಂಪಾದಕ

ಕರ್ಮವೀರ
ಹರಿಜನ ಪುರವಣಿ

ಸೀಖ ಗೆಳೆಯರಿಗೆ

ಈ ದೇಶದಲ್ಲಿ ಇಸ್ಲಾಮದ ಪ್ರವೇಶವಾಗಿ ಏಳು ಶತಮಾನಗಳು ಕಳೆದಿದ್ದವು. ಅವರ ಪ್ರಸಾರದ ಪ್ರಥಮ ಪರ್ಯಾಯ ಮುಗಿದುಹೋಗಿತ್ತು. ಅದು ಮೊದಲಿನ ಪರಿಶುದ್ಧತೆ ಸರಳತೆಗಳಲ್ಲಿ ಅಧಿಕಾಂಶವನ್ನು ಕಳೆದುಕೊಂಡಿತ್ತು. ಜಗತ್ತಿನ ಬೇರೆ ಎಲ್ಲ ಧರ್ಮಗಳು ಹೇಗೋ ಹಾಗೆಯೆ ಅದೂ ಧರ್ಮಾಂಧತೆ, ಅಂಧಶ್ರದ್ಧೆಗಳ ಆಗರವಾಗಿ ಬಿಟ್ಟಿತು. ಅದೇ ಪ್ರಕಾರ ಹಿಂದೂ ಧರ್ಮವೂ ಮೂಢ ಜಾತಿಭೇದ, ಅಸ್ಪೃಶ್ಯತೆ, ನಾನಾ ತರದ ನಂಬಿಕೆಗಳಿಂದಲೂ ದುಷ್ಟ ಆಚಾರಗಳಿಂದಲೂ ತಿಕ್ಕಿರಿದು ಹೋಗಿತ್ತು. ಹಿಂದುಗಳೂ ಮುಸ್ಲಿಮರೂ ಪರಸ್ಪರರಲ್ಲಿ ತಂತಮ್ಮ ಶುಷ್ಕ ವಿಧಿವಿಧಾನ, ಸಿದ್ಧಾಂತ ರಾದ್ಧಾಂತಗಳ ಮೇಲೆಯೆ ವಾದ ವಿವಾದಗಳನ್ನು ಬೆಳೆಸುತ್ತಿದ್ದರಲ್ಲದೆ ತಂತಮ್ಮ ಧರ್ಮದ ನಿಜವಾದ ತಿರುಳನ್ನು ಕಣ್ತೆತ್ತಿ ನೋಡುತ್ತಿರಲಿಲ್ಲ. ಕಬೀರನು ಈ ಕೆಳಗಿನ ಪಂಕ್ತಿಗಳಲ್ಲಿ ಆಗಿನ ಧಾರ್ಮಿಕ ಪರಿಸ್ಥಿತಿಯನ್ನು ಮಾರ್ಮಿಕವಾಗಿ ಬಣ್ಣಿಸಿದ್ದಾನೆ.

ಹಿಂದುಗಳೆಂಬರು "ರಾಮನೆ ಪ್ರಿಯನು!"
ಮುಸ್ಲಿಮರೆಂಬರು "ರಹಮಾನ್ ಶರಣು!"
ಶಬ್ದದ ಯುದ್ಧದಿ ಮರೆಯುವರವರು ಎರಡರ
ತಿರುಳೂ ಒಂದೆಂಬುದನು.

ಇಂಥ ವ್ಯರ್ಥ ವಿಧಿವಿಧಾನಗಳ ಮತ್ತು ಅಂಧ ಶ್ರದ್ಧೆಗಳ ಕಳೆಯನ್ನು ಕಿತ್ತು ಎರಡೂ ಧರ್ಮಗಳ ಮೂಲಭೂತ ಐಕ್ಯವನ್ನು ಎತ್ತಿ ತೋರಿಸಿ ಎರಡನ್ನೂ ಒಂದಕ್ಕೊಂದು ಹತ್ತಿರ ತರಲೋಸುಗ ಈ ದೇಶದಲ್ಲಿ ಅನೇಕ ಮಹಾತ್ಮರು ಅವತರಿಸಿದರು. ಈ ಮಹಾತ್ಮರಲ್ಲಿ ಗುರು ನಾನಕರು ಅತ್ಯಂತ ಆದರಣೀಯರಲ್ಲೊಬ್ಬರು. ಮಾನವ ಧರ್ಮವನ್ನು ಅರ್ಥಾತ್ ಪ್ರೇಮ ಧರ್ಮವನ್ನು ಪ್ರಚುರಗೊಳಿಸಿದವರಲ್ಲಿ ಗುರು ನಾನಕರು ಅತ್ಯುಚ್ಚ ಶ್ರೇಣಿಗೆ ಸೇರಿದವರೆಂದು ಅನೇಕರು ಭಾವಿಸುತ್ತಿರುವದು ಉಚಿತವೇ ಆಗಿದೆ.

ಗುರು ನಾನಕರು ಮಕ್ಕಾ ರಾಮೇಶ್ವರಗಳೆರಡಕ್ಕೂ ತೀರ್ಥಯಾತ್ರೆ ಮಾಡಿದರು. ಅವರ ಇಡಿ ಜೀವನವೇ ಹಿಂದೂ ಮುಸ್ಲಿಮ ಇವೆರಡೂ ಪದ್ಧತಿಗಳಿಂದ ಬೇರಾಗಿತ್ತು; ಇಲ್ಲವೆ ಅವೆರಡರ ಸವಿಸ್ತೃತವಾಗಿತ್ತೆಂದು ಹೇಳಲು ಅಡ್ಡಿಯಿಲ್ಲ. ಸೀಖರ ಪುಣ್ಯಗ್ರಂಥವಾದ "ಗ್ರಂಥಸಾಹೀಬ"ದಲ್ಲಿ ಗುರು ನಾನಕರು ಉಪದೇಶಿಸಿದ ಹಾಗೂ ಆಚರಿಸಿದ ಧರ್ಮದ ನಿಜವಾದ ಚಿತ್ರವನ್ನು ಕಾಣಬಹುದು. ಅವರ ಧರ್ಮವೆಂದರೆ ಐಕ್ಯದ ಧರ್ಮ, ಪ್ರೇಮದ ಧರ್ಮ; ಹಿಂದೂ ಧರ್ಮ, ಇಸ್ಲಾಂ ಇವೆರಡರ ಪರಿಪೂರ್ಣ ನಾದವರಕನಾಗಿತ್ತು. ಅವರ ಕಾಲದಲ್ಲಿ ಅನೇಕ ಶತಕಗಳವರೆಗೂ ಗಡಿನಾಡಿನಲ್ಲಿಯೂ ಅದಕ್ಕಿಂತ ಆಚೆಗೆ ಕೂಡ—"ನಾನಕನೆಂದರೆ ಒಬ್ಬ ಪೈಗಂಬರನೆ (ದೇವದೂತ)" ಎಂಬ ನಾಣ್ಣುಡಿ ಮುಸ್ಲಿಮರಲ್ಲಿ ಪ್ರಚಾರದಲ್ಲಿತ್ತು. ಅಂದಿನ ಹಿಂದೂ ಧರ್ಮವನ್ನು ಗಂಗೆಗೂ ಇಸ್ಲಾಮನ್ನು ಯಮುನೆಗೂ ಹೋಲಿಸಬಹುದಾದರೆ ಗುರು ನಾನಕರ ಧರ್ಮ ಪ್ರಯಾಗದಲ್ಲಾದ ಆವೆರಡು, ಪುಣ್ಯನದಿಗಳ ಸಂಗಮದಂತಿತ್ತೆಂದು ಹೇಳಬಹುದು. ಮಾನವ—ಮಾನವರಲ್ಲಿ ಸಮಾನತೆಯನ್ನು ಪ್ರತಿಪಾದಿಸುತ್ತ ಅವರು ಹೇಳುವದಿದು:

ಮೊದಲು ಪರಮಾತ್ಮನು ಪ್ರಕಾಶವನ್ನು ಸೃಜಿಸಿದನು.
ಬಳಿಕ ಪರಮಾತ್ಮನ ಯೋಗದಿಂದ ಎಲ್ಲ ಜೀವಿಗಳೂ ಉದ್ಭವಿಸಿದವು.
ಜಗತ್ತೆಲ್ಲವೂ ಆತನ ಔದಾರ್ಯದಿಂದ ಜನಿಸಿತು.
ಅದರಿಂದ ಒಬ್ಬನು ಶ್ರೇಷ್ಠ ಇನ್ನೊಬ್ಬ ಕನಿಷ್ಠನೆಂದು ಹೇಗೆ ಹೇಳಬೇಕು?

ತಮ್ಮ ಕಾಲದ ಹಿಂದುಗಳಿಗೂ ಮುಸ್ಲಿಮರಿಗೂ ಇದ್ದ ವೈಷಮ್ಯಗಳನ್ನು ಅವರು ಕರುಣ ವಾಕ್ಯಗಳಲ್ಲಿ ಬಣ್ಣಿಸಿದ್ದಾರೆ. ಆ ವೈಷಮ್ಯಗಳ ಕಾರಣದಿಂದಲೇ ಅವರು ತಮ್ಮನ್ನು ಹಿಂದುವೆಂದಾಗಲಿ ಮುಸ್ಲಿಮನೆಂದಾಗಲಿ ಹೇಳಿಕೊಳ್ಳಲು ಅವರು ಸರ್ವಥಾ ಒಪ್ಪಲಿಲ್ಲ. ಅವರು ಹೇಳುತ್ತಾರೆ:

ಹಿಂದುಗಳೂ ದಾರಿ ಕಂಡಿಲ್ಲ
ಮುಸ...ಕಂಡಿಲ್ಲ
...ದಾರಿ...

ನಿಜ ಶ್ರದ್ಧೆಯುಳ್ಳವನೆ
ಉಭಯರಿಗೂ ತೋರುವರು ದಾರಿಯೊಂದು ನಡೆಯೆಂದು
ನಾವು ಹಿಂದುಗಳಲ್ಲ, ನಾವು ಮುಸ್ಲಿಮರಲ್ಲ;
ಅವರಿರ್ವರಿದೆಯಲ್ಲಿ ಕಾಣಿಯುತಿಹ ಪಾಪ ಪುರುಷ.

"ಗ್ರಂಥ ಸಾಹಿಬ"ದ ಭಾಷೆಯೂ ಮೊದಲಿಂದ ಕೊನೆ ವರೆಗೆ ಮಿಶ್ರ ಭಾಷೆ. ಪುಸ್ತಕದ ಹೆಸರಲ್ಲೆ ಗ್ರಂಥವೆಂಬುದು ಸಂಸ್ಕೃತ ಶಬ್ದವಾದರೆ ಸಾಹಿಬ ಎಂಬುದು ಅರಬ್ಬಿ ಶಬ್ದ. ಈ ದೃಷ್ಟಿಯಿಂದ ನೋಡಿದರೆ ಗ್ರಂಥ ಸಾಹಿಬದ ಭಾಷೆ ನಿಜವಾದ ಹಿಂದುಸ್ತಾನಿ. ಗ್ರಂಥ ಸಾಹಿಬದಲ್ಲಿ ಉಲ್ಲೇಖಿಸಲ್ಪಟ್ಟ ಪರಮಾತ್ಮನ ನಾಮಾವಲಿಯಲ್ಲಿ "ಅಲ್ಲಾ" ನಾಮ ಮತ್ತೆ ಮತ್ತೆ ಕಾಣಸಿಗುತ್ತದೆ. ಪರ್ಶಿಯನ್ ಮತ್ತು ಅರಬ್ಬಿ ಭಾಷೆಗಳ ಪರಮಾತ್ಮ ವಾಚಕಗಳನೇಕವನ್ನು ಅದರಲ್ಲಿ ನೋಡಬಹುದು. ಸೀಖ ಗುರುಗಳ ಕೃತಿಗಳಲ್ಲದೆ ಬೇರೆ ಸಾಧು ಸಂತರನೇಕರ ಜನರ ಕೃತಿಗಳು ಅದರಲ್ಲಿವೆ. ಅವರಲ್ಲಿ ಕನಿಷ್ಠ ನಾಲ್ವರಾದರೂ ಮುಸ್ಲಿಮರಿರುವರು. ಅಮೃತಸರದ ಸುವರ್ಣ ಮಂದಿರದ ಅಡಿಗಲ್ಲನ್ನಿಕ್ಕಲು ಗುರು ಅರ್ಜುನ ದೇವನು ಮಿಯಾಮೀರನೆಂಬ ಮುಸ್ಲಿಂ ಫಕೀರನನ್ನು ಕರಿಸಿದನು. ಈ ಉದಾತ್ತ ಸಂಪ್ರದಾಯವನ್ನು ಸೀಖ ಪಂಥ ಕೊನೆವರೆಗೂ ಉಳಿಸಿಕೊಂಡಿತು. ಹತ್ತನೆಯ ಗುರುವಾದ ಗುರುಗೋವಿಂದ ಸಿಂಗನ ಕೃತಿಗಳನ್ನೊಳಗೊಂಡ ದರ್ಶನ ಗ್ರಂಥವನ್ನು ಅಭ್ಯಸಿಸಿದರೆ ಈ ವಿಷಯದಲ್ಲಿ ಗುರುಗೋವಿಂದ ಸಿಂಗನ ಅಭಿಪ್ರಾಯಕ್ಕೂ ಪೂರ್ವ ಗುರುಗಳ ವಿಚಾರಕ್ಕೂ ಏನೂ ಭೇದವಿದ್ದಿಲ್ಲವೆಂದು ಸ್ಪಷ್ಟವಾಗುತ್ತದೆ. ಹತ್ತನೆ ಗುರು ಒಂದೆಡೆಯಲ್ಲಿ ಹೀಗೆ ಹೇಳಿದ್ದಾನೆ:

ಒಬ್ಬ ಸೇಬ ತಾ ಮುಂಡಿತನೆಂದಿನ್ನೊಬ್ಬ
ತಾನು ಸಂನ್ಯಾಸಿಯೆಂಬ ಮತ್ತೊಬ್ಬ
ಯೋಗಿಯೆಂಬ;
ಒಬ್ಬ ಬ್ರಹ್ಮಚಾರಿ ತಾನೆಂದುಕೊಂ
ಡರಿನ್ನೊಬ್ಬ ನುಡಿವ ತಾ ಯತಿಯೆಂದು;
ಒಬ್ಬ ಹಿಂದುವೆಂದೆಂಬ ತಾನು, ಇನ್ನೊಬ್ಬ
ನೆಂಬ ತಾನಿಹೆ ಮುಸ್ಲಿಮನ್
ಒಬ್ಬ ರಫಜಿ ಪಂಥಾನುಯಾಯಿ,
ಇನ್ನೊಬ್ಬ ನಿಮಾಮ್ ಶಫಿ
ಪಂಥದವನು;
ಅರಿದು ನೋಡಿದರೂ—ಎಲ್ಲರವರು ಒಂದೇ
ಮನುಜ ಕುಲದ ಸಂತಾನ.
ಒಬ್ಬ ಕರ್ತನಿಗೆ ಹಲವು ಹೆಸರಿಟ್ಟು
ಕರೆಯುತಿಹರು ಜನರು.
ಕ್ರಿಸ್ತನಂತೆ ಮೋಸ್ ಕರಿಮನಂತೆ
ಮೋಹ ವಚಿಕನಂತೆ ಮೋಹ ರಹಿಮನಂತೆ!
ಅತನೊಬ್ಬನೇ ನಿಜವು—ನಾಮಭೇದ ನೋಡಿ
ಮೋಸ ಹೋಗದಿರು!
ಮನುಜರೆಲ್ಲ ಏಕದೇವನಾಳುಗಳು—
ಆವನೆ ಎಲ್ಲರಿಗು ದಾರಿ ತೋರುವವ.
ಆವನ ಮೂರ್ತಿಯ ಪ್ರತಿಮೂರ್ತಿಗಳೆಲ್ಲರು,
ಎಲ್ಲ ಕಣ್ಗಳಲಿ ಹೊಳೆವುದವನ ಬೆಳಕೇ.
ದೇಗುಲವು ಮಸೀದೆಯು ಒಂದೆ:
ಹಿಂದುಗಳ ಪೂಜೆಗು ಮುಸ್ಲಿಮರ ನಮಾಜಿಗು
ಇರುವುದೊಂದೆ ಅರ್ಥ.
ಮನುಜಕುಲವೊಂದೆ—ಭೇದ ಭಾವ
ಬರಿ ಮಾಯೆ.
ದೇವ-ದೇವತಾ, ಭೂತ-ಗಂಧರ್ವ,
ಹಿಂದು-ಮುಸ್ಲಿಂ ಎನಿಪೆಲ್ಲ ಭೇದಗಳು
ಕಾಲ ದೇಶಗಳ ಭೇದ ಜನ್ಯ.
ಎಲ್ಲರಿಗಿರುವದು ಒಂದೆ ಬಗೆಯ ಕಣ್,
ಕಿವಿ, ಮೈ, ಒಂದೆ ವಾಗಿಂದ್ರಿಯ;
ಎಲ್ಲರ ಸೃಷ್ಟಿಯೊಳವೇ ಭೂತಗಳು
—ಪೃಥ್ವಿ ವಾಯು ತೇಜಸ್ಸು ನೀರು.
ಒಬ್ಬ ಕರ್ತನೇ ಎನಿತು ಹೆಸರು—
ಜಲ್ಲ ನೋ ಅಭೇದನೊ.
ಪುರಾಣ ಕುರಾನ ಎನಿತರು ಕನೇಕರೊಂದೆ
ತತ್ವ ಅಧಾರ.
ಎಲ್ಲರ ಸೃಷ್ಟಿ ಒಂದೇ ಸರಿ, ಒಂದೇ ಕಾರಣಕ್ಕೆ.

ಇಷ್ಟೆಲ್ಲ ಇದ್ದರೂ ಇಂದು ಅದೇ ಗ್ರಂಥ ಸಾಹಿಬದ, ಸೀಖ ಗುರುಗಳ ಅನುಯಾಯಿಗಳಲ್ಲನೇಕರು ಅಲ್ಲಾ ನಾಮೋಚ್ಚಾರಕ್ಕೂ ಕುರಾಣ ಪಠನೆಗೂ ಆಕ್ಷೇಪವೆತ್ತುತಿದ್ದಾರೆ.

ಬೇರೆ ಯಾರಾದರೂ ಮಾಡಿದ ದುಷ್ಕೃತ್ಯವನ್ನು ನೋಡಿ ಸೀಖ ಗುರುಗಳು ತಮ್ಮ ಧರ್ಮದ ಸರ್ವಾಂಗೀಣ ಗುಣವನ್ನು ಬದಲಿಸಲಿಲ್ಲ. ಹಾಗೆ ಮಾಡುವದು ಅವರಿಗೆ ಸಾಧ್ಯವೇ ಇದ್ದಿಲ್ಲ. ಹಾಗೆ ಮಾಡಿದ್ದರೆ ಸೀಖ ಧರ್ಮ 'ಹೀಗೆ ಉಳಿಯುತ್ತಲೂ ಇದ್ದಿಲ್ಲ. ಗ್ರಂಥ ಸಾಹಿಬವನ್ನು ಬದಲಿಸುವದು ಸಾಧ್ಯವಿದ್ದಿಲ್ಲ. ಜಗತ್ತಿನ ಪವಿತ್ರ ಗ್ರಂಥಗಳಲ್ಲಿ ಉಚ್ಚಸ್ಥಾನವನ್ನು ಪಡೆದು ಮನುಷ್ಯನಿಗೆ ಸರ್ವದಾ ದಾರಿ ತೋರುವ ಸತ್ಯ ಸನಾತನ ಪ್ರಕಾಶವನ್ನು ಬೀರುವ ಗ್ರಂಥ ಸಾಹಿಬವನ್ನು ಬದಲಿಸುವದು ಅಶಕ್ಯವಾಗಿತ್ತು.

ಹೆಚ್ಚು ಕಡಿಮೆ ಎಲ್ಲ ಸೀಖ ಗುರುಗಳೂ ಪರ್ಶಿಯನ್ ಭಾಷೆಯಲ್ಲಿ ಪಾರಂಗತರಾಗಿದ್ದರು. ಅವರು ಆ ಭಾಷೆಯಲ್ಲಿ ಅನೇಕ ಸುಂದರ ಕವಿತೆಗಳನ್ನು ಬರೆದಿದ್ದಾರೆ. ಸ್ವತಃ ಗ್ರಂಥ ಸಾಹಿಬವೇ ಅಂದಿನ ಕಾಲದಲ್ಲಿ ಈ ದೇಶದಲ್ಲಿ ಪ್ರಚುರವಾಗಿದ್ದ ವಿವಿಧ ಭಾಷೆಗಳ ಕೃತಿಗಳ ರತ್ನಭಾಂಡಾರವಾಗಿದೆ. ಪ್ರೇಮ, ಐಕ್ಯ, ಸಾಮರಸ್ಯಗಳ ಅವಿಚಲ, ನಿರ್ವಿಕಾರ ಪಾರಾವಾರವೇ ಅದು. ಹೀಗಿದ್ದಾಗ್ಯೂ ಅನೇಕ ಸೀಖ ಗೆಳೆಯರಿಂದು ಉರ್ದು ಭಾಷೆ, ಪರ್ಶಿಯನ್ ಲಿಪಿಯೆಂದರೆ ಮೂಗು ಮುರಿಯುತ್ತಾರೆ.

"ಬಂಗ್ಲಾ ಸಾಹಿಬ" ಎಂಬ ದಿಲ್ಲಿಯ ಸೀಖ ಗುರುದ್ವಾರದ ಮಹಾದ್ವಾರದಲ್ಲಿ ಕೊರೆಯಲ್ಪಟ್ಟ "ಕಾಯಂ ಕಿಯಾ" ಎಂಬ ಉರ್ದು ಶಬ್ದಗಳನ್ನು "ಪ್ರವೇಶ ಕಿಯಾ" ಎಂದು ಹಿಂದೀಗೆ ಬದಲಿಸಿ ಬರೆದದ್ದನ್ನು ಕಂಡು ನನಗೆ ಸಂಕಟ ಆಶ್ಚರ್ಯಗಳೆರಡೂ ಒಮ್ಮೆಲೇ ಆದವು. ಉರ್ದು ಅಥವಾ ಇಂಗ್ಲೀಷ ಶಬ್ದಗಳನ್ನೋದದೆ ಬರಿ ಹಿಂದೀ ಅನುವಾದವನ್ನಷ್ಟೆ ನೋಡುವವನು ಸುಲಭವಾಗಿ ಅದರ ಅರ್ಥವನ್ನು ತಪ್ಪು ತಿಳಿದುಕೊಳ್ಳಬಹುದು. "ಕಾಯಮ ಕಿಯಾ" "ಅದನು ಕಿಯಾ" ಅಥವಾ "ತಯರ" ಎಂಬೀ ಶಬ್ದಗಳು ಎಲ್ಲರಿಗೂ ತಿಳಿಯುವಂತಿವೆ. "ಪ್ರವೇಶ ಕಿಯಾ" ಎಂಬ ಶಬ್ದಗಳು ತಪ್ಪು ಅಭಿಪ್ರಾಯವನ್ನುಂಟು ಮಾಡುವ ಸಂಭವವುಂಟು. ಉರ್ದು ಭಾಷೆ ಉರ್ದು ಲಿಪಿ ಅಥವಾ ಯಾವದೇ ಭಾಷೆಯಲ್ಲಿ ಪ್ರಚಲಿತವಾಗಿರುವ ಸರ್ವಗ್ರಾಹ್ಯವಾದ ಸಾಮಾನ್ಯ ಶಬ್ದಗಳ ಬಹಿಷ್ಕಾರವೇ ಮೊದಲಾದ ಅನುಚಿತ ಪೂರ್ವಗ್ರಹಗಳು ಗ್ರಂಥ ಸಾಹೇಬಕ್ಕೂ ಸೀಖ ಸಂಪ್ರದಾಯಕ್ಕೂ ಉದಾತ್ತ ಸೀಖ ಪಂಥದ ತಿರುಳಿಗೂ ಒಪ್ಪದ ಸಂಗತಿಗಳೇ ಸರಿ.

ಬರಿ ಪೂಜಾವಿಧಿ ಮೊದಲಾದ ಬಾಹ್ಯಾಚಾರಗಳಿಗಿಂತಲೂ ನ್ಯಾಯ, ಸಜ್ಜನಿಕೆ, ಕ್ಷಮೆ, ದಯೆ, ಔದಾರ್ಯ ಮೊದಲಾದ ಸತ್‌ಶೀಲಗಳನ್ನೇ ಸೀಖ ಧರ್ಮ ಒತ್ತಿ ಹೇಳಿದೆ. ಅದರೆ ಇಂದು ಸೀಖ ಧರ್ಮದ ಅನುಯಾಯಿಗಳು ನಮ್ಮನ್ನು ಜಗತ್ತಿನ ಧಿಕ್ಕಾರಕ್ಕೆ ಗುರಿ ಮಾಡಿದ ಅತ್ಯಂತ ಕರಾಳ ದುಷ್ಕರ್ಮಗಳನ್ನು ಮಾಡಿ ತೋರಿಸುವಲ್ಲಿ ಹಿಂದು ಇಲ್ಲವೆ ಮುಸ್ಲಿಮರಿಗಿಂತ ಹಿಂದುಳಿದಿಲ್ಲವೆಂದು ನಾವು ವಿಷಾದದಿಂದಲೂ ನಾಚಿಕೆಯಿಂದಲೂ ಒಪ್ಪಿಕೊಳ್ಳಬೇಕಾಗಿದೆ. ಹಿಡಿತವಿರುವ ಕೇಲುಗಾಡಿಗಳಿಂದ ನಿಸ್ಸಹಾಯ ಜನರನ್ನು ಹೊರಗೊಗೆಯುವದು ಈ ತಿಂಗಳ ಆರಂಭದವರೆಗೂ ಅವಿರತವಾಗಿ ನಡೆಯುತ್ತ ಬಂದಿದೆ. ಈ ಹೀನ ಕೃತ್ಯದಲ್ಲಿ ಸೀಖರ ಕೈ ಇಲ್ಲದಿಲ್ಲ. ಮುಷ್ಯರಾಜ ಮತ್ತು ಅವರ ಬೆನ್ನುಹತ್ತಿ ಬರುವ ಕೆಟ್ಟ ಅಂಗಗಳಿಂದಲೂ ಸೀಖರು ಅಲಿಪ್ತರಾಗಿ ಉಳಿದಿಲ್ಲ. ಇದನ್ನೆಲ್ಲ ನಾವು ಬಹಳ ಸಂಕೋಚದಿಂದಲೂ ಸಂಕಟದಿಂದಲೂ ಬರೆಯುತ್ತಿದ್ದೇವೆ. ಈ ದುರಾಚಾರಗಳ ವಿರುದ್ಧ ಸೀಖ ನಾಯಕರು ದನಿ ಎತ್ತಬೇಕೆಂದು ನಾವು ವಿನಯ ಪೂರ್ವಕವಾಗಿ ಅರಿಕೆ ಮಾಡುತ್ತೇವೆ. ಇಪ್ಪತ್ತು ವಿರೋಧಿಯ ಮೇಲೆ ಆಯುಧವೆತ್ತದೆ ಉಳಿಸಿಕೊಳ್ಳುವ ಮುಂದು ಬೇರೆಯು. ಹಿಂಸಾಕೃತಿಗಳಲ್ಲಿಯೂ ಶೌರ್ಯ ಪ್ರದರ್ಶನ ಸಾಧ್ಯವುಂಟು. ಅದರೆ ಹೆಂಗಸರನ್ನು, ಮಕ್ಕಳನ್ನು, ಮುದುಕರನ್ನು, ನಿಸ್ಸಹಾಯಕರನ್ನಾಗಲಿ ಯಾವದೇ ಪ್ರತಿಭಟನೆಯನ್ನು ತೋರಿಸಲು ಅಸಮರ್ಥರಾದವರನ್ನು ಕೊಲ್ಲುವುದು ಅಲ್ಪತನವೆನಿಸುತ್ತದೆ...

ಜಡವಿಗ್ರಹ ಚೈತನ್ಯ ...
...ಯಿತು

[illegible]

ತಮ್ಮ ದೇಗುಲದಲ್ಲಿ ವಿಗ್ರಹವು ಪ್ರತಿಷ್ಠಿಸಲು ಜನರು ನಿರ್ಧರಿಸಿದಾಗ ಸಂದರ್ಭವು ...
...
ಬೆಳಗಾಗುವುದರೊಳಗೆ ಸಿದ್ಧಮಾಡಿದ್ದ...
ತೆಳೆ ಮಾಡಿದ್ದರಿಂದ ಅಷ್ಟು ಬೇಗ ...
ಸಾಧ್ಯವಾಯಿತು. ಈ ಜೋಕವು ...
ಮೊದಲ ನೂರೆಳೆ ಕೂಡ ಅವನ್ನ...

[ಇನ್ನೂ ಮುಂದಕ್ಕೆ]

...ನ್ಯಾಗಲಿ ವಧಿಸುವದೆಂದರೆ ...
ಬೇರಲ್ಲ. ಪಾತಕಗಳೂ ದೌರ್ಜನ್ಯವೂ ...
ರಾಷ್ಟ್ರವನ್ನು ಉದ್ಧರಿಸಲಾರವು.

"ನೆರೆಮನೆಯೊಳಗೊಬ್ಬ ...
...
[illegible]

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

ಬಿರ್ಲಾಭವನ, ಹೊಸದಿಲ್ಲಿ, ೧೯—೧೨—೪೭

ಗುರಗಾಂವಿನ ಒಂದು ಹಳ್ಳಿಯ ಸಂದರ್ಶನ

ತಮ್ಮ ಪ್ರಾರ್ಥನೋತ್ತರ ಭಾಷಣದಲ್ಲಿ ಸಭಿಕರಿಗೆ ಗಾಂಧಿಯವರು ನಿರಾಶ್ರಿತರಾದ ಮಿಯೋ ಜನರನ್ನು ತಾವು ನೋಡಲು ಹೋದುದಾಗಿ ಹೇಳಿದರು. ಅನೇಕರು ಅಲ್ವಾರ ಮತ್ತು ಭರತಪುರ ಸಂಸ್ಥಾನಗಳಿಂದ ಹೊರದೂಡಲ್ಪಟ್ಟಿದ್ದಾರೆ. ಕೆಲವರು ಪಾಕಿಸ್ತಾನಕ್ಕೆ ಹೋಗಿದ್ದಾರೆ; ಉಳಿದವರು ತಾವು ಹೋಗಬೇಕೋ ಬೇಡವೋ ಎಂಬ ಸಂಶಯದಲ್ಲಿ ತೊಳಲಾಡುತ್ತಿದ್ದಾರೆ. ತಮ್ಮ ಜೊತೆಗೆ ಬಂದ ಡಾ. ಗೋಪೀಚಂದ ಭಾರ್ಗವರು ಅವರಲ್ಲಿ ಯಾರಿಗೆ ಇರಲು ಇಷ್ಟವಿದೆಯೋ ಅವರಿಗೆ ಅಲ್ಲಿರಲು ಹಕ್ಕಿದೆಯೆಂದು ಆಶ್ವಾಸನವಿತ್ತರೆಂದು ಗಾಂಧಿಯವರೆಂದರು. ಅವರ ವಿತ್ತ ಜೀವಿತಗಳನ್ನು ಸರಕಾರ ರಕ್ಷಿಸುವುದಾಗಿ ಗೋಪೀಚಂದರು ವಚನವಿತ್ತರು. ಜನವಿನಿಮಯ ಇನ್ನೆಂದೂ ಹಿತವಾಗದೆಂದರು ಗಾಂಧಿಯವರು. ಲಕ್ಷೋಪಲಕ್ಷ ಹೆಂಗಸರು, ಗಂಡಸರು ಮಕ್ಕಳನ್ನು ಕಿತ್ತೊಡಿಸುವುದೆಂದರೊಂದು ಭೂತಲೀಲೆಯೇ ಸರಿ. ಈ ದುಃಖ ಸಂದರ್ಭದಲ್ಲಿ ಯಾರು ಮೊದಲು ಹಿಂಸೆಗಾರಂಭಿಸಿದರು, ಯಾರು ಹೆಚ್ಚು ಹಿಂಸೆಮಾಡಿದರು ಎಂಬುದನ್ನು ವಿಚಾರಿಸುವುದು ಕೆಲಸಗೇಡಿತನವೇ ಸರಿ. ಹಾಗೆ ತರ್ಕಿಸುವುದು ಶಾಂತಿಗೊಯ್ವ ಹಾದಿಯಲ್ಲ. ಸ್ವಬುದ್ಧಿಯಿಂದ ಪಾಕಿಸ್ತಾನಕ್ಕೆ ಹೋಗ ಬಯಸುವವರಿಗೆ ಹೋಗಲಾವ ಅಡ್ಡಿಯೂ ಇಲ್ಲ. ಯಾರೂ ಅವರನ್ನು ತಡೆಯರು; ಯಾರೂ ಅವರನ್ನು ಒಕ್ಕೂಟದಿಂದ ಹೊರದೂಡಲೂ ಸಮರ್ಥರಾಗಲಾರರು. ಮಿಯೋಗಳು ಯೋಧಕುಲದವರು. ಕೆಲವರೆಂದರು— ಅವರು ಅಪರಾಧಿಗಳ ಕುಲದವರಂತಿದ್ದಾರೆ— ಎಂದು. ಈ ಅಪವಾದ ನಿಜವೇ ಆಗಿದ್ದರೂ ಸಂಸ್ಥಾನ ಅವರನ್ನು ಬಹಿಷ್ಕರಿಸಲಾರದು. ಸರಿಯಾದ ಮಾರ್ಗವೆಂದರೆ— ಯೋಗ್ಯ ನಾಗರಿಕರಾಗುವಂತೆ ಅವರನ್ನು ಸುಧಾರಿಸಿ, ಸದ್ಬೋಧ ಕೊಡುವುದು.

ಬೆಲೆಗಳು ಮತ್ತು ವಿನಿಯಂತ್ರಣ

ಒಬ್ಬ ಗೆಳೆಯ ಹೇಳಿದ — ತಾನಿದ್ದಲ್ಲಿ ವಿನಿಯಂತ್ರಣದಿಂದ ಸಕ್ಕರೆಯ ಬೆಲೆ ಏರಿದೆ ಎಂದು. ಇತರೆಡೆಗಳಲ್ಲಿ ಬೆಲೆ ಇಳಿದಿದೆ ಎಂದು ವರದಿ ಬಂದಿರುವುದಾಗಿ ಗಾಂಧಿಯವರೆಂದರು. ಸ್ಥಳೀಯ ಏರಿಕೆಗೆ ಸ್ಥಳೀಯವಾದ ಕಾರಣವಿದ್ದೀತು ಇರಬೇಕು.

ಪೆಟ್ರೋಲಿನ ನಿಯಂತ್ರಣ

ಮುಕ್ತ ವಿತರಣದ ಹಾದಿಯಲ್ಲಿ ಹೋರಾಟದ ಒಂದರೆ ಅರ್ಧ ಬಂದಿತು. ಡಾ. ಮಥಾಯಿಯವರಿಗೆ ಅವರವೇ ಆದ ತೊಂದರೆಗಳಿದ್ದವು. ಕಲ್ಲಿದ್ದಲು ಮತ್ತು ಡಬ್ಬಿಗಳ ಅಭಾವ ಆಗ ಬಹಳವಾಗಿತ್ತು. ಆದಷ್ಟು ಬೇಗ ಅವುಗಳನ್ನು ಸುಧಾರಿಸಲು ಮಂತ್ರಿಗಳು ಪ್ರಯತ್ನಪಡುತ್ತಿದ್ದಾರೆ. ಕಲ್ಲಿದ್ದಲಿಲ್ಲದಾಗ ಭಾರತವು ವ್ಯಾಪಾರ ನಡೆಸುತ್ತಿತ್ತು. ಈಗ ಅದಿರುವಾಗ ವಾಹನಗಳ ನ್ಯೂನತೆಯಿಂದಾದ ತೊಂದರೆಯನ್ನು ತಂದಿತು. ರೈಲ್ವೆಗಳಿಗೆಯ ಬದಲು ಇದ್ದರೆ ಅದರ ಮೇಲೆ ಯಾವ ಉತ್ತರ ನಾಶನ? ಮೋಟಾರು ಸಾರಿಗೆ ಬಡಲೆ ನೆನಪಾಗುತ್ತ. ಆದರೆ ಪೆಟ್ರೋಲಿಲ್ಲ. ಸ್ವರ್ಗೆ ಆ ಸಾರಿಗೆ ನಡೆಯಲಾರದು. ಇದರಿಂದ ಪೆಟ್ರೋಲಿನ ಮೇಲಿನ ನಿಯಂತ್ರಣವನ್ನು ನಿಮ್ಮಾಹಕಬೇಕೆಂಬುದು ಮುಂದೆ ಬರುತ್ತದೆ. ಬೇಕ ಹಾಗೆ ಮಾಡಲು ಕಷ್ಟವಾಗುವದೆಂಬುದನ್ನು ತಾವು ತಿಳಿಯಲಾರದಾಗಿರುವುದಾಗಿ ಒಂಧಿಸುವರೆಂದರು. ಅರ್ಧ ಅರ್ಧ ಕೆಲಸವನ್ನು ಯಾರೂ ಮಾಡಲಾರರು. ನಿಯಂತ್ರಣವು ಹೋಗಬೇಕಾಗಿದ್ದರೆ ಅದು ಕಡೆಯ ಪಕ್ಷ ಪೆಟ್ರೋಲಿನ ಮೇಲಿಂದಾದರೂ ಹೋಗಬೇಕು. ಪೆಟ್ರೋಲು ಎಲ್ಲರಿಗೂ ಬೇಕಾದ ವಸ್ತುವಲ್ಲ. ತಮಗೆ ಬೇಕಾದಷ್ಟನ್ನು ಸರಕಾರವು ಇಟ್ಟುಕೊಳ್ಳಬಹುದು. ಅವರು ಎಂದು ಬೇಕಾದರೆಂದು ಸದ ಸಂತೆಯಲ್ಲಿ ಕೊಳ್ಳಹೇಳಿಯ ಮಾಜೀನ ಪೆಟ್ರೋಲನ್ನು ಕೊಳ್ಳಬಹುದು. ಮೋಟಾರು ಸಾರಿಗೆ ಸುಲಭಸಾಧ್ಯವಾದರೆ, ಉಪ್ಪಿನ ಬೆಲೆಯಲ್ಲಿ ಏರಿಕೆಯಿಲ್ಲದಾಗುವುದು. ಉಪ್ಪಿನ ಉತ್ಪಾದನೆ ಸಾಧಾರಣ ಸಾಕಷ್ಟಿದೆ, ಆದರೆ ಸಾರಿಗೆಯ ತೊಂದರೆ ಅಡ್ಡ ಬಂತು ಎಂದು ಗಾಂಧಿಯವರು ತಮ್ಮ ಕೇಳಿದುದಾಗಿ ಹೇಳಿದರು.

ಮಲದ ಗೊಬ್ಬರ

ಉತ್ಪಾದನೆಯ ನ್ಯೂನತೆಯಿಂದಲೇ ಆಹಾರದ ... ಹಾಕುವುದು ಉತ್ಪಾದನೆ ಹೆಚ್ಚಿಸುವ ಒಂದು ಸಮರ್ಥ ಮಾರ್ಗ. ಕೃತಕ ಗೊಬ್ಬರಗಳು ನೆಲಕ್ಕೆ ಹಾನಿಕರವೆಂದು ಗಾಂಧಿಯವರು ತಾವು ಕೇಳಿದ್ದೇವೆಂದರು.

ಗಾಂಧಿಯವರು ಪ್ರಾಣಿಪ್ರಿಯಳೂ ಒಕ್ಕಲಿಗಿತ್ತಿಯಾಗಿ ಯೋಧವಳೂ ಆದ ಮೀರಾ ಬೆಹನಳು (ಹಸುವೆಂದರವಳಿಗೆ ಪ್ರಾಣ) ದಿಲ್ಲಿಯ ಮಲಸಾರ ಪರಿಷತ್ತನ್ನು ಸಂಘಟಿಸಲು ಕಾರಣಳು. ಡಾ. ರಾಜೇಂದ್ರ ಪ್ರಸಾದರು, ಸರದಾರ ದಾತಾರ ಸಿಂಗ ಮತ್ತು ಇತರರು ಅದರಲ್ಲಿ ಭಾಗವಹಿಸಲು ಅಲ್ಲಿಗೆ ನಡೆದಿದ್ದರು. ೩ ದಿನಗಳ ಸಭೆಯ ನಂತರ ಅವರು ಒಂದು ಗೊತ್ತುವಳಿಯ ಮಾಲಿಕೆಯನ್ನು ಪಾಸು ಮಾಡಿದರು. ಸೆಗಣಿ, ಮಲ ಮತ್ತು ಹೊಲಸುಗಳಿಂದ ಗೊಬ್ಬರವನ್ನು ತಯಾರು ಮಾಡುವ ವಿಧಗಳನ್ನು ಅವುಗಳಲ್ಲಿ ವಿವರಿಸಲಾಗಿದೆ. ಅದರಿಂದ ಲಕ್ಷಗಟ್ಟಲೆ ರೂಪಾಯಿಗಳು ಉಳಿಯುವವುವಲ್ಲದೆ ದುರ್ಬಲಹೊಂದದೆ ನೆಲದ ಫಲವತ್ತೆ ಹೆಚ್ಚುತ್ತದೆ. ಉತ್ಪಾದನೆ ಹೆಚ್ಚಿಸುವುದೇ ಪರಿಷತ್ತಿನಲ್ಲಿ ಭಾಗಿಗಳಾದವರ ಮುಖ್ಯೋದ್ದೇಶವಾಗಿತ್ತು. ಇಂದು ಶ್ರೀಮತಿ ಮೀರಾ ಬೆಹನಳು ಋಷಿಕೇಶಕ್ಕೆ ಪಯಣ ಬೆಳಸಿದಳು; ಅವಳು ದನಕರುಗಳ ಪರಿಸ್ಥಿತಿಯ ಸುಧಾರಣೆ ಮತ್ತು ಮಲದ ಗೊಬ್ಬರವನ್ನು ಹಿಂದುಸ್ತಾನದಲ್ಲಿ ಎಲ್ಲೆಡೆಯೂ ತಯಾರಿಸುವಂತೆ ಮಾಡುವುದು ಈ ಕೆಲಸವನ್ನು ಮುಂಬರಿಸುವಳು. ಅದೊಂದು ಕಷ್ಟದ ಕೆಲಸ; ಅದರ ಸಾಫಲ್ಯವು ಜನರ ಸಹಕಾರದ ಮೇಲೆ ಅವಲಂಬಿಸಿದೆ.

ಬಿರ್ಲಾ ಭವನ, ಹೊಸದಿಲ್ಲಿ ೨೦—೧೨—೪೭,

ಹೇಡಿತನ ಬೇಡ

ಸಂಣವಾಗಿಯೇ ಆಗಲಿ ದಿಲ್ಲಿಯಲ್ಲಿ ಮತ್ತೆ ದೊಂಬಿಯಾದುದಕ್ಕೆ ನನಗೆ ತುಂಬ ನೋವೆನ್ನಿಸುತ್ತದೆ. ದಿಲ್ಲಿಯ ಹಿಂದುಗಳಾಗಲೀ ಶೀಖರಾಗಲೀ ಅಥವಾ ಪಾಕಿಸ್ತಾನದಿಂದ ಬಂದ ದುಃಖಿಗಳಾಗಲೀ ದಿಲ್ಲಿಯಲ್ಲಿ ಮುಸಲ್ಮಾನರನ್ನು ಇರಗೊಡಬಾರದೆಂದೇ ನಿರ್ಧರಿಸಿದ್ದರೆ ಹಾಗೆಂದು ಅವರು ದಿಟ್ಟತನದಿಂದ ಮುಕ್ತಕಂಠರಾಗಿ ಹೇಳಬಿಡಬೇಕು. ಇದರಂತೆ ಸರಕಾರವೂ ಪೀಡಿತ ಮುಸಲ್ಮಾನರನ್ನು ರಕ್ಷಿಸುವದಿಲ್ಲವೆಂದು ಸಾರಬೇಕು. ಹೀಗೆ ಮಾಡುವದೆಂದರೆ ಸರಕಾರ ದಿವಾಳಿಗೆ ಬಂದಂತೆಯೇ. ಈ ಜಾತಿ ದ್ವೇಷದ ಪಿಡುಗು ಪಸರಿಸಿದ್ದೇ ಆದಲ್ಲಿ ಅದು ಹಿಂದುಗಳ ಮತ್ತು ಶೀಖರ ಕುಲವನ್ನೇ ತೊಡೆದು ನಿರ್ನಾಮ ಮಾಡಿಬಿಡುವದು. ಇದರಂತೆ ಪಾಕಿಸ್ತಾನದಲ್ಲಿ ಹಿಂದುಗಳೂ ಶೀಖರೂ ಸುಖವಾಗಿ ಮರ್ಯಾದೆಯಿಂದ ಬಾಳುವದು ದುಸ್ತರವಾದರೆ ಹಿಂದುಸ್ತಾನದಲ್ಲಿ ಮುಸಲ್ಮಾನ ಧರ್ಮವನ್ನು ಅಳಿದು ಬಿಟ್ಟಂತೆಯೇ. ಈ ಹೇಡಿತನವೇಕೆ ? ಅದನ್ನು ಬಿಸುಟು ಬಿಡಿರಿ. ಯಾರನ್ನಾಗಲೀ ಪರ್ಯಾಯವಾಗಿ ಹೊರ ನೂಕುವ ಹವಣಿಕೆಯು ಹೇಡಿತನವೆಂದೇ ನಾನು ತಿಳಿಯುತ್ತೇನೆ. ಮುಸಲ್ಮಾನರು ಕೆಡುಕರಾಗಿದ್ದರೆ ಶೀಖರೂ ಹಿಂದುಗಳೂ ಒಳ್ಳೆಯವರಾಗಿ ಉದಾರಿಗಳಾದರೆ ಕೆಡುಕರು ಖಂಡಿತ ಒಳ್ಳೆಯರಾಗುವರು. ಇದೇ ನೀವು ಭಜನೆಯಲ್ಲಿ ಕೇಳಿರಬೇಕು. ಮೀರಾಬಾಯಿ ಹೇಳಿದಳು, ದೇವಭಕ್ತನನ್ನು ಕಾಣುತ್ತಲೇ ತನಗೆ ಸುಖವೆನಿಸಿತೆಂದು. ಅದೇ ಸಂಸಾರಿಗಳನ್ನು ಕಂಡಾಗ ಆಕೆಗೆ ತುಂಬ ದುಃಖವಾಯಿತಂತೆ. ದೇವಕನರನ್ನು ಕಂಡಾಗ ಆಕೆಗೆ ದೈವಿಕ ಅನುಭವವಾಯ್ತು. ಕೆಡುಕರ ಕೂಡ ವ್ಯವಹರಿಸುವದೆಂದರೆ ಅವರನ್ನು ತಿದ್ದುವದು. ಅವರನ್ನು ಹೊರದೂಡುವದಲ್ಲ ಅಥವಾ ಕೊಲ್ಲುವದಲ್ಲ.

ಗ್ರಾಮೋದ್ಯೋಗಗಳು

ಗಾಂಧೀಜಿ ಅವೋಲಿ ಹರಿಜನ ಕೇರಿಯಲ್ಲಿ ಸೇರಿದ ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಸಭೆಗಳ ಮಾತೆತ್ತಿ ಹೀಗೆ ಹೇಳಿದರು.

“ತಾ ೬ ಮತ್ತು ೧೪ರ ನಡುವಿನ ವಾರದಲ್ಲಿ ಹರಿಜನ ಕೇರಿಯಲ್ಲಿ ಸೇರಿದ ಅ. ಭಾ. ಗ್ರಾ. ಸಂಘದ ಸಭೆಗಳಿಗೆ ನಾನು ಹೋಗಿದ್ದೆ. ಸಭೆಗಳ ಬಗ್ಗೆ ಈಗಾಗಲೇ ಹೇಳಿದ್ದೇನೆ. ಆದರೆ ಅ. ಭಾ. ಗ್ರಾ. ಸಂಘದ ಸಭೆಗಳ ಬಗ್ಗೆ ನನಗೆ ಹೇಳುವವಾಗಿಲ್ಲ. ಭಾರತದ ಗ್ರಾಮ ಪದ್ಧತಿಯಲ್ಲಿ ನೂಲುವ ರಾಟಿಯು ಸೂರ್ಯ ಸಮಾನವೆಂದು ನಾನಾಗಲೇ ಹೇಳಿದ್ದುಂಟು. ಕೆಲವೊಂದು ಪಟ್ಟಣಗಳಿಗೆ ಈ ಮಾತು ಅನ್ವಯಿಸಲಿಕ್ಕಿಲ್ಲ. ಉಳಿದ ನಾನಾವಿಧ ಗ್ರಾಮೋದ್ಯೋಗಗಳು ಚರಖಾ ಸೂರ್ಯನ ಸುತ್ತ ತಿರುಗುವ ಗ್ರಹಗಳಂತಿವೆ. ಸೂರ್ಯನಿಲ್ಲದಿದ್ದರೆ ಗ್ರಹಗಳಿಗೆಲ್ಲಿಯ ಅಸ್ತಿತ್ವ? ತದ್ವಿಪರೀತವಾಗಿ ಸ್ಥಿತಿಯೂ ಅಷ್ಟೇ ನಿಜವೆಂದು ನನಗೆ ತೋರುತ್ತದೆ. ಆದರೆ ಅವನ್ನು ಪ್ರಸಾರ ಸಹಿತ ...ನ್ನಾಗಿ ನಾನು ಸಿದ್ಧ ಮಾಡಿ ತೋರಿಸಲಾರೆ. ಆದರೆ ಹಳ್ಳಿಗಳ ಬಗ್ಗೆ ಮಾತ್ರ ನಾನು ಅತ್ಯಂತ ಆತ್ಮವಿಶ್ವಾಸದಿಂದ ಹಾಗೆ ಹೇಳಬಲ್ಲೆ. ದಿಲ್ಲಿಯ ಸುತ್ತ ಅನೇಕ ಹಳ್ಳಿಗಳಿವೆ. ಅವುಗಳೆಲ್ಲ ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹನ ಕೊಟ್ಟರೆ ಆ ಹಳ್ಳಿಗಳೂ ದಿಲ್ಲಿ ಪಟ್ಟಣವೂ ಪರಸ್ಪರ ಊರ್ಜಿತಕ್ಕೆ ಕಾರಣವಾಗುವವು. ಹಾಗಾದಾಗ ಈ ಜನಗಳಿಗೆ ಜಾತೀಯ ದೊಂಬಿಯ ಬಗ್ಗೆ ಆಲೋಚಿಸಲು ಅನುವೇ ಸಿಕ್ಕುವದಿಲ್ಲ. ದಿಲ್ಲಿಯಲ್ಲಿಯೂ ಸುತ್ತಲಿನ ಭಾಗದಲ್ಲಿಯೂ ಅನೇಕರು ಮುಸಲ್ಮಾನ ಕುಶಲ ಶಿಲ್ಪಿಗಳಿರುವರಾಗಿ ಕೇಳಿದ್ದೇನೆ. ಇವರೆಲ್ಲ ತಮ್ಮ ತಮ್ಮ ಊರು ತೊರೆದು ಹೋದುದರಿಂದ ದಿಲ್ಲಿ ಪಟ್ಟಣದ ಜೀವನಕ್ಕೆ ಕುಂದುಂಟಾಗಿದೆ. ಪಾಣಿಪತ್ತದಲ್ಲಿ ಅನೇಕ ಮುಸಲ್ಮಾನರು ಉಣ್ಣೆಯ ಹೊದಿಕೆಗಳನ್ನು ರಚಿಸುತ್ತಿದ್ದರು. ಅವರು ಹೊರಟು ಹೋಗಿದ್ದರಿಂದ ಕೆಲಸ ನಿಲ್ಲದಿದ್ದರೂ ಈ ಕೆಲಸಕ್ಕೆ ದೊಡ್ಡ ತಡೆಯಾಗಿ ಹೋಗಿದೆ. ಹಿಂದುಗಳು ಮತ್ತು ಮುಸಲ್ಮಾನರು ಬೇರೆ ಬೇರೆ ಉದ್ಯೋಗಗಳಲ್ಲಿದ್ದುದುಂಟು. ಜಾತೀಯ ಗಲಭೆಯಿಂದಾದ ಅಸ್ತವ್ಯಸ್ತದಿಂದ ಹಿಂದುಸ್ತಾನ ಪಾಕಿಸ್ತಾನಗಳೆರಡೂ ಕಷ್ಟನಷ್ಟಗಳಿಗೆ ಗುರಿಯಾಗಿವೆ.

ಧನಿಕರೂ ಶ್ರಮಜೀವಿಗಳೂ

ಹಿಂದಿನ ದಿನ ಸಂಜೆ ನಾನು ಮಲದ ಗೊಬ್ಬರದ ಬಗ್ಗೆ ಮಾತನಾಡಿದ್ದೆ. ಪಶುಗಳ ಮತ್ತು ಮನುಷ್ಯರ ಮಲವು ಕಸದೊಡನೆ ಬೆರೆತೆಂದರೆ ಅಮೌಲ್ಯವಾದ ಸುವರ್ಣಸಮ ಗೊಬ್ಬರವಾಗುವದು. ಈ ಗೊಬ್ಬರ ಪಡೆದ ಭೂಮಿಗೆ ಫಲದಾನ ಶಕ್ತಿಯು ಅದೆಷ್ಟೋ ಹೆಚ್ಚುವದು. ಈ ಬಗೆಯ ಗೊಬ್ಬರ ಸಿದ್ಧಗೊಳಿಸುವದೂ ಒಂದು ಪ್ರಕಾರದ ಗ್ರಾಮೋದ್ಯೋಗವೇ. ಇನ್ನುಳಿದ ಗ್ರಾಮೋದ್ಯೋಗಗಳಂತೆ ಇದಾದರೂ, ಹಿಂದುಸ್ತಾನದ ಕೋಟ್ಯನುಕೋಟಿ ಜನರ ಸಹಕಾರವಿಲ್ಲದೆ ಸಾಕಷ್ಟು ಲಾಭ ತೋರಿಸಲಾರದು. ಎಲ್ಲರ ಸಹಕಾರದಿಂದ ಮಾತ್ರ ಉದ್ಯೋಗಗಳು ಪುನರುಜ್ಜೀವಿತವಾಗಿ ಹಿಂದುಸ್ತಾನದ ಏಳಿಗೆಯಾಗುವದು. ಧನಿಕರು ಮತ್ತು ಶ್ರಮಜೀವಿಗಳಲ್ಲಿ ಇರುವದಿದೇ ಮುಖ್ಯ ಭೇದ. ಧನಿಕರು ಕೆಲ ಶ್ರಮಿಕರನ್ನು ಮಾತ್ರ ದುಡಿಸಿ ತಮ್ಮ ಧನವನ್ನು ವರ್ಧಿಸಿಕೊಳ್ಳಲೆಳಸುತ್ತಾರೆ. ಅದೇ ಅಸಂಖ್ಯಾತ ಶ್ರಮಿಕರ ದುಡಿಮೆಯನ್ನು ಜಾಣತನದಿಂದ ಉಪಯೋಗಿಸಿಕೊಂಡಿದ್ದರೆ ತಾನಾಗಿ ಅಪರಿಮಿತ ಧನ ವರ್ಧನವಾಗಿ ಅಸಂಖ್ಯಾತ ಜನರ ಹಿತ ಸಾಧಿಸುವದೇ ನಾಶ್ಚರ್ಯ? ಇದೇ ನಿಜವಾದ ಪ್ರಜಾರಾಜ್ಯದ ಪಂಚಾಯತ ರಾಜ್ಯದ ರಹಸ್ಯ. ಹಿಂದುಸ್ತಾನವು ಈ ಬಗೆಯ ರಚನಾತ್ಮಕ ಕಾರ್ಯದಲ್ಲಿ ತನ್ನ ಶಕ್ತಿಸರ್ವಸ್ವವನ್ನು ತೊಡಗಿಸದಿದ್ದರೆ, ಭಾರತ ಮಾತೆಯ ಪುತ್ರರು ಸದಾ ಅಶೋಭನವಾದ ವಿಕಾರವಾದ ಜಾತೀಯ ಗಲಭೆಯಲ್ಲಿಯೇ ತೊಡಗಿದ್ದಾದರೆ, ಅವರ ಅವಸ್ಥೆಯು ಹಳೆಯ ಕಾಲದ ಯಾದವರಂತೆ ಆಗಿ ಅವರಂತೆ ಇವರೂ ಕುಡಿದು ಸ್ತ್ರೀಲಂಪಟರಾಗಿ, ಜೂಜುಗಾರಿಕೆಗೆ ಮನಸೋತು ಒಬ್ಬರನ್ನೊಬ್ಬರು ಕೊಂದು ವಿನಷ್ಟರಾಗಿ ನಾಮಶೇಷರಾಗಿ ಹೋಗುವದು ಖಂಡಿತ.

ಬಿರ್ಲಾಭವನ, ಹೊಸದಿಲ್ಲಿ, ೨೨-೧೨-೪೭

ಭ್ರಷ್ಟಗೊಳಿಸಲಾಗದು

ಇಲ್ಲಿಂದ ೮ ಮೈಲು ದೂರದಲ್ಲಿ ಇಲ್ಲ, ಅಲ್ಲಿ ಕುತುಬುದ್ದೀನ ಬಕ್ತಿಯಾರ ಕಾಕಿಜಿಷ್ಟಿ ಸಾಹೇಬನ ಸ್ತಂಭವಿದೆ. ಅದು ಅಜ್ಮೀರದಲ್ಲಿರುವ ಸ್ತಂಭವನ್ನು ಬಿಟ್ಟರೆ ಅತ್ಯಂತ ಪವಿತ್ರವೆನಿಸಿದ್ದು. ಒಂದೇ ಸಮನಾದ ಭಕ್ತಿಯಿಂದ ಅವರೆಡನ್ನು ಮುಸ್ಲಿಮರು ಮಾತ್ರವಲ್ಲದೆ ಹಿಂದುಗಳೂ ಇತರ ಮುಸ್ಲಿಮೇತರರೂ ಸಂದರ್ಶಿಸುತ್ತಾರೆ. ಕಳೆದ ಸೆಪ್ಟೆಂಬರದ ಮೊದಲ ಭಾಗದಲ್ಲಿ ಆ ಪವಿತ್ರ ಸ್ಥಳವನ್ನು ಹಿಂದು ಕ್ರೋಧವು ಸಂದರ್ಶಿಸಿತು. ನಾಲ್ಕು ಶತಮಾನಗಳಿಂದ ತಮ್ಮದೆಂದು ತಿಳಿದುಕೊಂಡಿದ್ದ ತಮ್ಮ ಮನೆಗಳನ್ನು ಮುಸ್ಲಿಮರು ಬಿಟ್ಟು ಹೋಗಬೇಕಾಯಿತು. ಎಷ್ಟೋ ಭಕ್ತರೆನಿಸಿದ್ದರೂ ಅವರು ಇನ್ನೂ ಆ ಪವಿತ್ರ ಸ್ತಂಭವನ್ನು ಬಿಟ್ಟು ದೂರದಲ್ಲಿ ಇದ್ದಾರೆ. ಆ ಸ್ಥಳ ಹಿಂದು ಜೆಕೋ ಎನ್ನುತ್ತಿದೆ. ಅದೊಂದು ದುರಂತ ಸಂಗತಿಯೆಂಬುದನ್ನು ಹೇಳುವುದು ಅನವಶ್ಯಕ. ಈ ಅವಮಾನವನ್ನು ಅಳಿಸಿ ಈ ಸ್ಥಳವನ್ನು ಮೊದಲಿನಂತೆ ಮಾಡುವುದು ಅದಕ್ಕೆ ಸಂಬಧಿಸಿದ ಅಧಿಕಾರಿಗಳು, ಹಿಂದುಗಳು ಮತ್ತು ಶೀಖರಿಗೆ ಸೇರಿದ್ದು. ನಾನು ಹೇಳಿದ್ದು ದಿಲ್ಲಿಯಲ್ಲಿ ಮತ್ತು ಒಕ್ಕೂಟದ ಇತರ ಸ್ಥಲಗಳಲ್ಲಿಯ ಮುಸ್ಲಿಂ ಪುಣ್ಯಸ್ಥಳಗಳಿಗೂ ಅನ್ವಯಿಸುತ್ತದೆ. ಸಣ್ಣದಿರಲಿ, ದೊಡ್ಡದಿರಲಿ- ಪೂಜಾಸ್ಥಲಗಳನ್ನು ಭ್ರಷ್ಟಗೊಳಿಸುವುದನ್ನು ತಾವು ಸಹಿಸುವುದಿಲ್ಲವೆಂದು ಎರಡೂ ಅಧಿರಾಜ್ಯಗಳು ತಮ್ಮ ಬಹುಸಂಖ್ಯಾತರಿಗೆ ತಮ್ಮ ದೃಢ ನಿಶ್ಚಯಂತ ಸ್ಪಷ್ಟಪಡಿಸುವುದನ್ನು ಆಗಲೇ ಮಾಡಬೇಕಾಗಿತ್ತು. ತಡಮಾಡದೆ ಅವುಗಳಿಗೆ ಕೊಟ್ಟ ನಷ್ಟವನ್ನೆಲ್ಲ ತುಂಬಿಕೊಡಬೇಕು.

ಒಕ್ಕೂಟದ ಮುಸ್ಲಿಮರ ಕರ್ತವ್ಯ

“ಇತ್ತೀಚೆಗೆ ಕರಾಚಿಯಲ್ಲಿ ಸೇರಿದ ಮುಸ್ಲಿಂ ಲೀಗು ಅಂಗೀಕರಿಸಿದ ನಿರ್ಣಯವನ್ನನುಲಕ್ಷಿಸಿ, ಮೌಲಾನಾ ಆಜಾದರ ಹೇಳಿಕೆಯಂತೆ ಲಖನೋದಲ್ಲಿ ಕೂಡಲಿರುವ ಸಭೆಯನ್ನು ಗಮನದಲ್ಲಿಟ್ಟುಕೊಂಡು, ಕೆಲವು ಮುಸ್ಲಿಂ ಗೆಳೆಯರು ತಾವು ಮುಸ್ಲಿಂ ಲೀಗಿನ ಸದಸ್ಯರಿದ್ದರೆ ಲಖನೋದ ಸಭೆಗೆ ಹೋಗಬೇಕೆ? ಮದ್ರಾಸಿನಲ್ಲಿ ನಡೆವ ಲೀಗ ಸದಸ್ಯರ ಸಭೆಗೂ ಹೋಗಬೇಕೆ? ಹೇಗೇಆಗಲಿ, ಒಕ್ಕೂಟದಲ್ಲಿಯ ಮುಸ್ಲಿಂ ಲೀಗ ಸದಸ್ಯರ ಧೋರಣವೇನಿರಬೇಕು— ಎಂದು ನನ್ನನ್ನು ಕೇಳಿದ್ದಾರೆ. ಅವರನ್ನು ವಿಶೇಷವಾಗಿ ಇಲ್ಲವೆ ಸಾರ್ವಜನಿಕವಾಗಿ ನಿಮಂತ್ರಿಸಿದಲ್ಲಿ ಲಖನೋದ ಸಭೆಗೂ ಮದರಾಸಿನ ಸಭೆಗೂ ಹೋಗತಕ್ಕದ್ದೆಂಬಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಪ್ರತಿಯೊಂದು ಸಭೆಯಲ್ಲೂ ಅವರು ತಮ್ಮ ಅಭಿಪ್ರಾಯಗಳನ್ನು ಧೈರ್ಯೋರ್ಜಿತವದಿಂದ ಪ್ರಕಾಶಪಡಿಸಬೇಕು. ಭಾರತದಲ್ಲಿಯ ಮುಸ್ಲಿಂ ಅಲ್ಪಸಂಖ್ಯಾಕರು ಪಾಕಿಸ್ತಾನದ ಬಹುಸಂಖ್ಯಾಕರ ರಕ್ಷಣೆಯಿಲ್ಲದೆ ಇರುವುದೇನು ನಷ್ಟದ ಸಂಗತಿಯಲ್ಲ. ಯಾವಾಗ? ಅವರು ಕಳೆದ ೩೦ ವರ್ಷಗಳಿಂದ ಅಹಿಂಸಾತತ್ವವನ್ನು ಅನುಸರಿಸುತ್ತಿದ್ದವರಿದ್ದಾಗ- ಎಷ್ಟೇ ಸಣ್ಣದಿರಲಿ; ಒಂದು ಅಲ್ಪಸಂಖ್ಯಾಕ ಪಂಗಡವು ತನ್ನ ಮಾನ ಮತ್ತು ಮಾನವನಿಗೆ ಪ್ರಿಯವೂ ಪವಿತ್ರವೂ ಎನಿಸಿದ ಇತರ ವಸ್ತುಗಳನ್ನು ಳಿಸಿಕೊಳ್ಳಲು ಭಯಪಡಲು ಕಾರಣವಿಲ್ಲವೆಂಬುದನ್ನು ತಿಳಿಯಲು ಅವರಿಗೆ ಅಹಿಂಸೆಯಲ್ಲಿ ಶ್ರದ್ಧೆಯಿರಬೇಕೆಂಬ ನಿಯಮವಿಲ್ಲ. ಅಲ್ಪಸಂಖ್ಯಾಕ ಪಂಗಡದವನೊಬ್ಬನು ತನ್ನನ್ನೂ ತನ್ನ ಸೃಷ್ಟಿಕರ್ತನನ್ನೂ ತನ್ನಂತೆಯೇ ಆತನು ತನ್ನನ್ನು (ಮಾನವನನ್ನು) ನಿರ್ಮಿಸಿದ್ದಾನೆಂಬಷ್ಟು ತಿಳಿದುಕೊಂಡರೆ ತಾನಲ್ಲದೆ ಅವನ ಸ್ವಾಭಿಮಾನವನ್ನು ಜಗತ್ತಿನ ಯಾವ ಶಕ್ತಿಯೂ ಕಸಿದುಕೊಂಡು ಹೋಗಲಾರದು. ಟ್ರಾನ್ಸವಾಲಿನ ಬಲಿಷ್ಠ ಸರಕಾರದೊಡನೆ ನಾನು ಹೋರುತ್ತಿದ್ದಾಗ, ಜೋಹಾನ್ಸ ಬರ್ಗಿನ ಒಬ್ಬ ಪ್ರಿಯ ಆಂಗ್ಲ ಗೆಳೆಯನು ತಾನು ಯಾವಾಗಲೂ ಅಲ್ಪಸಂಖ್ಯಾಕರ ಕಡೆಗೇ ಇರುವವನು ಎಂದು ನನ್ನ ಹತ್ತಿರ ಹೇಳಿದನು. ಏಕೆಂದು ಕೇಳಿದರೆ, ಅವರು ಎಂದೂ ತಪ್ಪುವುದಿಲ್ಲ, ಒಂದು ವೇಳೆ ತಪ್ಪುಮಾಡಿದರೆ ಅದರಿಂದ ಅವರನ್ನು ಅತಿಸುಲಭವಾಗಿ ದೂರವಿಡಬಹುದು; ಆದರೆ ಬಹುಸಂಖ್ಯಾಕರ ಬಗೆ ಹಾಗಲ್ಲ. ಏಕೆಂದರೆ, ಅವರಿಗೆ ಅಧಿಕಾರ ಮದವಿರುತ್ತದೆ ಎಂದು ಉತ್ತರಿಸಿದ. ಆ ಗೆಳೆಯನು ಒಂದು ಮಹಾಸತ್ಯವನ್ನು ಹೇಳಿದ್ದಾನೆ. ಬಹುಸಂಖ್ಯಾಕರೆಂದರೆ ಒಂದು ಜನದ ಗುಂಪಿಗೆ ವಿಶೇಷತಃ ವಿನಾಶಕ ಆಯುಧಗಳನ್ನಿಟ್ಟುಕೊಂಡು ಸಮರ್ಥರಾಗಿರುವ ತಕ್ಕು ಸಿಕ್ಕಿದಾಗ. ಇದನ್ನು ನಾವು ನಮ್ಮ ಕಟು ಅನುಭವದಿಂದ ತಿಳಿದಿದ್ದೇವೆ. ಒಂದು ಹಿಡಿಯಲ್ಲಡಗುವಷ್ಟು ಆಂಗ್ಲರು ಬಹುಸಂಖ್ಯಾಕರೆನಿಸಿ ಕೋಟಿಗಟ್ಟಲೆ ಭಾರತೀಯರನ್ನು ತಮ್ಮ ಪಾದಾಕ್ರಾಂತರನ್ನಾಗಿ ಮಾಡಿಟ್ಟುಕೊಂಡರು. ಹೇಗೆ ? ಆಯುಧದ ಬಲದಿಂದ. ಆ ಆಯುಧಗಳು ಭಾರತೀಯರಿಗಿದ್ದಿಲ್ಲ; ಇದ್ದಿದ್ದರೂ ಅವುಗಳ ಬಳಕೆಯನ್ನವರು ಅರಿತಿದ್ದಿಲ್ಲ. ಆಂಗ್ಲರ ಅಧಿಕಾರ ನಮ್ಮ ದೇಶದಲ್ಲಿದ್ದಾಗ ಹಿಂದುಗಳಾಗಲಿ, ಮುಸಲ್ಮಾನರಾಗಲಿ ಈ ಪಾಠವನ್ನು ಕಲಿಯಲಿಲ್ಲವೆಂಬುದು ಅತ್ಯಂತ ಖೇದಕರವಾದುದು. ಒಕ್ಕೂಟದ ಮುಸಲ್ಮಾನರಿಂದು ಹಿಂದಿನಂತೆ ದಮನಕ್ಕೊಳ್ಳಪಡದೆ ಮುಕ್ತರಾಗಿ ಬಾಳುತ್ತಿದ್ದಾರೆ. ಆದರೆ ಪಶ್ಚಿಮ ಮತ್ತು ಪೂರ್ವದಲ್ಲಿ ಮುಸ್ಲಿಮರಿಗೆ ಬಹುಸಂಖ್ಯಾಕತ್ವವಿದೆಯೆಂದು ಸುಳ್ಳೆ ಜಂಭ ಕೊಚ್ಚುತ್ತಿದ್ದಾರೆ. ಅವರು ಅಲ್ಪಸಂಖ್ಯಾಕರಾಗಿರುವುದರ ಗುಣವನ್ನು ತಿಳಿದರೆ ತಮ್ಮ ಜೀವಿತಗಳ ಮೂಲಕ ಅವರಿಗೆ ಇಸ್ಲಾಮಿನಲ್ಲಿರುವ ಅತ್ಯುತ್ತಮ ತತ್ವಗಳನ್ನು ಪ್ರಕಾಶ ಪಡಿಸಬಹುದೆಂಬದನ್ನು ಅರಗಿಸಿಕೊಳ್ಳುತ್ತಾರೆ. ಪ್ರವಾದಿಯು ಮಕ್ಕಾದಲ್ಲಿ ಮಂತ್ರಿಯಾಗಿದ್ದಾಗ ಇಸ್ಲಾಂ ತನ್ನಲ್ಲಿಯ ಅತ್ಯಂತ ಮಹತ್ವದ ತತ್ವಸಾರವನ್ನು ಜಗತ್ತಿಗೆ ನೀಡಿತೆಂಬುದನ್ನು ಅವರುಬಲ್ಲರೆ? ಕಾನ್‌ಸ್ಟಂಟಿನೋಪಲಿನ ಬಂದ ನಂತರ ಕ್ರೈಸ್ತಧರ್ಮದ ಅವನತಿ ಆರಂಭವಾಯಿತು. ಆದರೆ ಇಲ್ಲಿ ಈ ವಾದವನ್ನು ನಾನು ಮುಂದೊಯ್ಯಬಾರದು. ಅವರಲ್ಲಿಯೂ ಅಂತರ್ಗತ ಶ್ರದ್ಧೆಯು ಮೇಲೆಯೇ ನನ್ನ ಬುದ್ಧಿವಾದ ನಿಂತಿದೆ. ಆದುದರಿಂದ ನನ್ನ ಮುಸ್ಲಿಂ ಗೆಳೆಯರು ಈ ವಿಶ್ವಾಸದಲ್ಲಿ ಭಾಗಿಗಳಾಗದಿದ್ದಲ್ಲಿ ಅವರು ಈ ಬುದ್ಧಿವಾದವನ್ನು ಬಹುಶಃ ತ್ಯಜಿಸುವದೇ ಉತ್ತಮವೆನಿಸಬಹುದು.

(ಇನ್ನೂ ಇದೆ)

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

(೮ನೆಯ ಪುಟ್ಟದಿಂದ ಮುಂಬರಿದುದು)

ಕಾಂಗ್ರೆಸ್ಸಿನವರಾಗಿರಿ

ನನ್ನ ಮತದಂತೆ, ಕಾಂಗ್ರೆಸ್ಸಿಗೆ ಸೇರಲು ಸಿದ್ಧರಾಗಬೇಕು; ಆದರೆ ಸಂಪೂರ್ಣ ಸಮಾನಸ್ಕಂಧತೆಯಿಂದ ತೆರೆದೆದೆಯ ಸ್ವಾಗತ ಸಿಕ್ಕುವವರೆಗೆ ಅವರು ಪ್ರವೇಶಕ್ಕಾಗಿ ಅರ್ಜಿ ಹಾಕುವುದನ್ನು ತಡೆಹಿಡಿಯಬೇಕು. ತತ್ವದಲ್ಲಾದರೂ ಕಾಂಗ್ರೆಸ್ಸಿಗೆ ಅಲ್ಪಸಂಖ್ಯಾಕ ಬಹುಸಂಖ್ಯಾಕ ಜಾತಿಗಳೆಂಬುದಿಲ್ಲ. ಅದಕ್ಕೆ ಧರ್ಮವಿಲ್ಲ ಇರುವುದೆಂದರೆ, ಮಾನವಧರ್ಮವೊಂದೇ. ಕಾಂಗ್ರೆಸ್ಸಿಗೆ ಪ್ರತಿಯೊಬ್ಬ ಗಂಡಸು ಇಲ್ಲವೆ ಹೆಂಗಸು ಉಳಿದ ಯಾವ ಗಂಡಸು ಇಲ್ಲವೆ ಹೆಂಗಸಿಗೂ ಕಡಿಮೆಯಾಗಿ ಕಾಣಲಿಕ್ಕಿಲ್ಲ. ಅದು ಶುದ್ಧ ಧರ್ಮೇತರ ರಾಜಕೀಯ, ರಾಷ್ಟ್ರೀಯ ಸಂಘಟಕ. ಅದರಲ್ಲಿ ಹಿಂದು, ಮುಸ್ಲಿಂ, ಕ್ರೈಸ್ತ, ಪಾರಸಿ ಯೆಹೂದಿ ಎಲ್ಲರೂ ಸಮಾನರು. ಏಕೆಂದರೆ, ಕಾಂಗ್ರೆಸ್ಸು ಅನೇಕ ವೇಳೆ ತನ್ನ ತತ್ವದಂತೆ ನಡೆದು ಕೊಳ್ಳುವಲ್ಲಿ ಸಮರ್ಥವಾಗಿಲ್ಲ! ಆದರಿಂದ ಅನೇಕ ಮುಸ್ಲಿಮರಿಗೆ ಅದೊಂದು ಸುವರ್ಣ ಹಿಂದುಗಳ ಘಟಕವೆಂದು ತೋರುವಂತಾಯಿತು.

ಹೇಗೇ ಆಗಲಿ, ಬಿಗುವಿರುವವರೆಗೆ ಮುಸ್ಲಿಮರು ಗಂಭೀರವಾಗಿ ದೂರಿರುವುದು ಉತ್ತಮ. ಅವರ ಸೇವೆ ಕಾಂಗ್ರೆಸ್ಸಿಗೆ ಬೇಕಾದಾಗ ಅವರು ಕಾಂಗ್ರೆಸ್ಸಿನಲ್ಲಿ ಪ್ರವಿಷ್ಟರಾಗುವರು. ಈ ನಡುವೆ ನನ್ನಂತೆಯೇ ಅವರು ಕಾಂಗ್ರೆಸ್ಸಿನವರಾಗಬೇಕು. ೪ ಆಣೆಯ ಸದಸ್ಯನೂ ಅಲ್ಲದೆ ನನಗೆ ವರ್ಜಿಸ್ಸಿರಲು ಕಾರಣವೆಂದರೆ, ೧೯೧೫ ರಲ್ಲಿ ದ. ಆಫ್ರಿಕದಿಂದ ಬಂದಾಗಿನಿಂದ ನಾನು ಪ್ರಾಮಾಣಿಕವಾಗಿ ಅದಕ್ಕೆ ಸೇವೆ ಸಲ್ಲಿಸಿರುವುದೇ ಆಗಿದೆ. ಈಗಿನಿಂದಲೆ ಪ್ರತಿಯೊಬ್ಬ ಮುಸ್ಲಿಮನೂ ಹಾಗೆ ಮಾಡಬಲ್ಲನು; ಆಗ ನನ್ನ ಸೇವೆಯಷ್ಟು ತನ್ನ ಸೇವೆಗೂ ಬೆಲೆಯಿದೆಯೆಂಬುದನ್ನು ಅವನು ಅರಿತು ಕೊಳ್ಳುವನು. ಇಂದು ಪ್ರತಿಯೊಬ್ಬ ಮುಸ್ಲಿಮನೂ ಲೀಗಿನವನೆಂದು ತಿಳಿದುಕೊಳ್ಳಲಾಗಿದೆ; ಆದುದರಿಂದ ಅವನು ಕಾಂಗ್ರೆಸ್ಸಿನ ಶತ್ರುವೆಂದು ಅರ್ಥ. ಲೀಗಿನ ಉಪದೇಶ, ದುರದೃಷ್ಟವಶಾತ್ ಅಂಥದ್ದಾಗಿದೆ. ಈಗ ಶತ್ರುತ್ವಕ್ಕೆ ಎಳ್ಳಷ್ಟೂ ಕಾರಣವಿಲ್ಲ. ಜಾತೀಯ ವಿಷದಿಂದ ಮುಕ್ತಿಹೊಂದಲು ೪ ತಿಂಗಳು ಬಹಳ ಕಡಿಮೆ. ಈ ನಾಡಿನ ದುರ್ಭಾಗ್ಯವಶದಿಂದ ಹಿಂದು ಮತ್ತು ಶೀಖರು ವಿಷವನ್ನು ಅಮೃತವೆಂದು ತಿಳಿದು ಭಾರತದ ಮುಸ್ಲಿಮರ ಶತ್ರುಗಳಾಗಿ, ನಿರ್ಲಜ್ಜತೆಯಿಂದ ಪ್ರತೀಕಾರವೆಸಗಿ ಪಾಕಿಸ್ತಾನದ ಮುಸ್ಲಿಮರಿಗೂ ಹಗೆಗಳೆನಿಸಿಬಿಟ್ಟರು. ಆದುದರಿಂದ ಈ ವಿಷಮಯ ವಾತಾವರಣವನ್ನು ಮೀರಿ ನಿಲ್ಲಬೇಕೆಂದು ನಾನು ಮುಸ್ಲಿಂ ಅಲ್ಪಸಂಖ್ಯಾಕರಿಗೆ ಆಗ್ರಹ ಪೂರ್ವಕ ಬಿನ್ನವಿಸಿಕೊಳ್ಳುತ್ತೇನೆ. ಮಾನಸಿಕವಾದ ಹಿಡಿತಾಯವಿಲ್ಲದೆ ತಾವು ಒಕ್ಕೂಟದ ಸಂಪೂರ್ಣ ನಾಗರಿಕರೆಂದು ತಮ್ಮ ಆದರ್ಶ ನಡತೆಯಿಂದ ತೋರಿ, ಹುಚ್ಚು ಪೂರ್ವಗ್ರಹಗಳನ್ನು ಬಿಟ್ಟು ಬದುಕಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ. ಅದೊಂದೇ ಮಾನ್ಯ ಮಾರ್ಗ. ಹಿಂದು ಮಹಾಸಭೆ, ಶೀಖಸಭೆ ಇಲ್ಲವೆ ಪಾರಸಿ ಸಭೆ ಹೇಗೋ ಹಾಗೇ, ಈ ಕಾರಣದಿಂದ, ಲೀಗೊಂದು ರಾಜಕೀಯ ಸಂಘವಾಗಿ ಉಳಿಯಲಾರದು. ಧಾರ್ಮಿಕ ಅಂತಃ ಸುಧಾರಣೆಗಳನ್ನು, ತಮ್ಮ ಧರ್ಮಗಳಲ್ಲಿಯ ಅತ್ಯುತ್ತಮಾಂಶಗಳನ್ನು ಸಂಶೋಧಿಸಲು, ಅತ್ಯುತ್ತಮಾಂಶಗಳನ್ನು ಅರಗಿಸಿಕೊಳ್ಳಲು ಅವು ಧಾರ್ಮಿಕ ಸಂಸ್ಥೆಗಳಾಗಿ ಕೆಲಸ ಮಾಡಬಹುದು. ಆಗ ಅವರು ವಾತಾವರಣದ ವಿಷವನ್ನು ತೊಳೆದು ತೆಗೆದು ಶುದ್ಧಪಡಿಸುವರಲ್ಲದೆ ಸತ್ಕಾರ್ಯದಲ್ಲಿ ಒಬ್ಬರನ್ನೊಬ್ಬರು ಸ್ಪರ್ಧಿಸುತ್ತಾರೆ. ಅವರು ಪರಸ್ಪರ ಗೆಳೆಯರಾಗಿ ತನ್ಮೂಲಕ ಸರಕಾರಕ್ಕೆ ನೆರವಾಗುವರು. ಅವರು ಅದರಲ್ಲಿರಲಿ, ಇಲ್ಲದಿರಲಿ— ಅವರ ರಾಜಕೀಯ ಮಹತ್ವಾಕಾಂಕ್ಷೆಗಳು ಕಾಂಗ್ರೆಸ್ಸಿನ ಮೂಲಕವೇ ಸಾಧಿಸಲು ಸಾಧ್ಯ. ತನ್ನಲ್ಲಿದ್ದವರಷ್ಟು ಜನರನ್ನೇ ದೃಷ್ಟಿಯಲ್ಲಿಟ್ಟುಕೊಂಡರೆ ಕಾಂಗ್ರೆಸ್ಸೊಂದು ರಾಜತಂತ್ರದಲ್ಲಿ ಕೈಹಾಕಿದ ಸ್ವಾರ್ಥ ಸಾಧಕರ ಖಾಸಗಿ ಸಭೆಯೆನಿಸೀತು. ಈಗಲಾದರೂ ಅಂಥವರು ಅದರಲ್ಲಿ ಬಹು ಸ್ವಲ್ಪ ಜನರಿದ್ದಾರೆ. ಇಲ್ಲಿಯವರೆಗೆ ಅದಕ್ಕೆ ಅಪ್ರತಿಹತ ಸ್ಥಾನವಿತ್ತು. ಈಗ ಇದೆ. ಏಕೆಂದರೆ, ನಿರಪವಾದವಾಗಿ ಅದು ಇಡಿಯ ಹಿಂದುಸ್ಥಾನವನ್ನು ಪ್ರತಿನಿಧಿಸಲು ಪ್ರಯತ್ನಿಸುತ್ತದೆ. ಈ ಶುಭ್ರ ತುದಿಯವರೆಗೂ ಅದು ಸೇವೆ ಮಾಡುವ ಗುರಿಯುಳ್ಳದ್ದಾಗಿದೆ."

ಬಿರ್ಲಾ ಭವನ, ಹೊಸದಿಲ್ಲಿ ತಾ ೨೬-೧೨-೪೭

ಪ್ರಾರ್ಥನಾವಸರ

"ಚಳಿ ಹೆಚ್ಚುತ್ತಿರುವುದರಿಂದ ೫|| ಯ ಬದಲು ೫ ಗಂಟೆಗೆ ಪ್ರಾರ್ಥನೆಯನ್ನು ಪ್ರಾರಂಭಿಸಬಯಸಿದೆಂದು ಗೆಳೆಯನೊಬ್ಬನ ಟೀಟಬಂದಿದೆ. ಡಿಸೆಂಬರ ೨೧ರಿಂದ ದಿನವು ಕ್ರಮವಾಗಿ ಉದ್ದವಾಗುತ್ತದೆ, ಆದರೂ ಅವನ ಬಯಕೆಯನ್ನು ನಾನು ಮನ್ನಿಸುತ್ತೇನೆ. ಸುಂಚಿತವಾಗಿ ಪ್ರಾರ್ಥನೆ ನಡೆಯಬೇಕೆಂಬವರಿಲ್ಲದೂ ಕೈಯೆತ್ತಿರಿ. (ಕೈಯೆತ್ತಿದರು) ಬಹುಜನರು ಆ ಬಗ್ಗೆ ಕೈಯೆತ್ತಿದ್ದೀರಿ, ವಿರೋಧಕರೇ ವಿರಳ. ಆದುದರಿಂದ ಈ ಮುಂದಿನ ಪ್ರಾರ್ಥನಾವೇಳೆಯನ್ನು ಅರ್ಧಗಂಟೆ ಹಿಂದಕ್ಕೆ ಸರಿಸಲಾಗುತ್ತದೆ."

ಭಾವಲ್ಪುರದಲ್ಲಿ ಮುಸ್ಲಿಮೇತರರು

"ನೊನ್ನೆ ಭಾವಲ್ಪುರದ ಕೆಲವರು ಪ್ರಾರ್ಥನಾಸ್ಥಲಕ್ಕೆ ಪಾಟಬರೆದುಕೊಂಡು ಬಂದಿದ್ದರು. ಅದರಲ್ಲಿ "ಭಾವಲ್ಪುರದ ೨೦ ಸಾವಿರ ಹಿಂದು ಶೀಖರನ್ನು ಉಳಿಸಿರಿ" ಎಂದಿತ್ತು. ಆಗ ಸುಮ್ಮನಿದ್ದೆ. ಈಗ ಅದರ ನೆನಪಾಯಿತು. ಆಗ ಅದರ ಸಂಬಂಧವಾಗಿ ಇಬ್ಬರು ಗೆಳೆಯರು ನನ್ನನ್ನು ಸಂದರ್ಶಿಸಿದ್ದರು. ಭಾವಲ್ಪುರದ ಹಿಂದು ಶೀಖರ ನಿರ್ಗಮನಕ್ಕೆ ವ್ಯವಸ್ಥೆ ಮಾಡುವವರೆಗೆ ಗವರ್ನರರ ಜನರಲ್ಲರ ಮನೆಯೆದುರು ಉಪವಾಸ ಹೂಡುವ ಆಲೋಚನೆ ಮಾಡಿರುವದಾಗಿ ಅವರೆಂದರು. ಅದರಿಂದ ಯಾರಿಗೂ ಏನೂ ಉಪಯೋಗವಾಗದು, ಇಂದು ತನ್ನ ಮಂತ್ರಿಮಂಡಲದಿಂದ ಲಬ್ಧವಾದದ್ದಲ್ಲದೆ ಬೇರೆಯ ಯಾವ ಅಧಿಕಾರವೂ ಗವರ್ನರ ಜನರಲ್ಲನಿಗೆ ಇಲ್ಲವಾಗಿದೆ. ಬ್ರಿಟಿಶ ಸಾಮ್ರಾಜ್ಯದ ಬೆಂಬಲ ಅವನಿಗಿನ್ನು ಸಿಗದಾಗಿದೆ. ಇಲ್ಲವೆ ವೀರನಾದ ಅವನು ತನ್ನ ಪರಾಕ್ರಮವನ್ನು ಬಳಸಲಾರನು. ಸದ್ಯ: ಅವನು ಅದನ್ನು ಶೀತಸಂಚಯ ಸಂಪುಟದಲ್ಲಿ (Cold Storage) ಇಟ್ಟಿದ್ದಾನೆ. ಭಾವಲ್ಪುರದಿಂದ ಹಿಂದು ಶೀಖರನ್ನು ತರಲು ವ್ಯವಸ್ಥೆ ಮಾಡಬೇಕೆಂಬುದಕ್ಕೆ ನಾನು ಒಪ್ಪುತ್ತೇನೆ. ಪಾಕಿಸ್ತಾನದ ಹೊರಗೆ ಬೇಕಾದಲ್ಲಿ ಹೋಗಲು ಅನುಕೂಲ ಕಲ್ಪಿಸಿಕೊಡುವುದು ನವಾಬಸಾಹೇಬನ ಕರ್ತವ್ಯವಾಗಿದೆ. ನನಗೆ ತಿಳಿದಮಟ್ಟಿಗೆ ಭಾವಲ್ಪುರವು ಮುಖ್ಯವಾಗಿ ಶೀಖರಿಂದ ಕಟ್ಟಲ್ಪಟ್ಟಿದೆ. ಆದರೂ ಅವರೂ ಹಿಂದುಗಳೂ ಭಯಂಕರವಾಗಿ ನರಳಬೇಕಾಗಿದೆ. ಈ ವಿಷಯದಲ್ಲಿ ನವಾಬಸಾಹೇಬನು ತನಗಿದರಲ್ಲಿ ಹೊಣೆಯಿಲ್ಲವೆಂದು ತಣ್ಣಗೆ ಕುಳಿತಿರಲು ಶಕ್ಯವಿಲ್ಲ. ಆದದ್ದು ಆಗಿ ಹೋಯಿತು. ನಿರ್ಗಮನಕ್ಕೆ ತಕ್ಕ ವ್ಯವಸ್ಥೆ ಮಾಡುವವರೆಗೆ ಹಿಂದು ಶೀಖರ ತಲೆಯಲ್ಲಿಯ ಒಂದು ಕೂದಲನ್ನೂ ಮುಟ್ಟುವುದಿಲ್ಲವೆಂದು ಸಾರಬೇಕಾಗಿ ನಾನು ನವಾಬ ಸಾಹೇಬರಿಗೆ ಬಿನ್ನವಿಸಿಕೊಳ್ಳುತ್ತೇನೆ. ನಡುಗಾಲದಲ್ಲಿ ಅವರನ್ನು ಚೆನ್ನಾಗಿ ನೋಡಿಕೊಂಡಿರಬೇಕು."

ಪಾಕಿಸ್ತಾನದಲ್ಲಿ ನಿರಾಶ್ರಿತರು

ದಿನದ "ಸ್ಟೇಟ್ಸ್‌ಮನ್" ಪತ್ರಿಕೆಯಲ್ಲಿ ಹೀಗಿದೆ:

"೩ ದಿನಗಳ ಹಿರಿಗೆ ಒಂದು ಶೀತಮಾರುತದ ಹೊಡತಕ್ಕೆ ಸಿಕ್ಕಿದ್ದ ಬಳಿಕ ೩೪ ಮತ್ತು ೩೬ ರ ಪ್ರಥಮಾವಧಿಕ ಉಷ್ಣಾಂಶದಿಂದ ಲಾಹೋರು ಶನಿವಾರ ಬೆಳಿಗೆ ಮೊದಲ ಮಳೆಯನ್ನು ಕಂಡಿತು. ಆದಿತ್ಯವಾರ ಮತ್ತು ಇಂದು ಮಳೆ ಬಿದ್ದಿತು. ಮೇಲಿಮು ಸುಕಿದ ಆಗಸವಲ್ಲದೆ ಬೇರೆಯ ಮಾಡು ಹಾಸುಗಳಿಲ್ಲದ, ಅರ್ಧನಗ್ನ ಅರ್ಧ ಪುಷ್ಟರಾದ ಸಾವಿರಾರು ನಿರಾಶ್ರಿತರಿಗೆ ಅದರಿಂದ ಬಹಳ ಕಷ್ಟನಷ್ಟ ಉಂಟಾಯಿತು. ಮೂಲಿನಲ್ಲಿ ತಿರುಗಾಡಿದಾಗ ರಾತ್ರಿಯ ಮೌನದಲ್ಲಿ ಈ ದುರ್ಭಾಗ್ಯರ ದುಃಖ ಸೂಚಕ ಧ್ವನಿಯು ನನಗೆ ಕೇಳಬಂದಿತು. ..

೦ ೦ ೦ ೦

"ಕೆಲದಿನಗಳ ಹಿಂದಿನ ವರೆಗೆ ವಾಂತಿಭೇದಿ ರೋಗವು ಹರಡಿತ್ತು. ಸೆಪ್ಟಂಬರ ಆರಂಭದ ಇಂದಿನವರೆಗೆ ನಗರದಲ್ಲಿ ೨೫೦೦ ಜನರಿಗೆ ಆ ರೋಗ ತಗಲಿದೆ. ಅವರಲ್ಲಿ ನಾಲ್ಕನೆಯ ಪಾಂದಂಶ ಜನರು ಅದರಿಂದ ಮಡಿದರು. ಈಗ ಒಂದು ವಿಧದ ಅತ್ಯಂತ ವಿಷಮಯ ಮ್ಯಲಿಯು ಪ್ರಾರಂಭವಾಗಿ ಸಾಧಾರಣ ಪ್ರತಿದಿನ ೨೦ ಜನರನ್ನು ಬಲಿತೆಗೆದುಕೊಳ್ಳುತ್ತಿದೆ. ಕಳೆದ ೩ ದಿನಗಳಲ್ಲಿ ೧೨೫ ಸಾವುಗಳ ವರದಿ ಆರೋಗ್ಯ ಶಾಖೆಗೆ ತಲುಪಿದೆ.

೦ ೦ ೦

"ಸಾಂಕ್ರಾಮಿಕರೋಗಗಳ ಉಪಯ ಬಹುಶಃ ಆಶ್ಚರ್ಯಕರವಲ್ಲ—ಅವರೆಲ್ಲೂ ಅಲ್ಲಿ ಅತ್ಯಂತ ಅನಾರೋಗ್ಯ ಕರ ಪರಿಸ್ಥಿತಿಯಿರುವಾಗ.

"ಮುನ್ಸಿಪಾಲಿಟಿ ಮತ್ತು ಇತರ ಸ್ಥಳಗಳಿಂದ ಭಂಗಿಗಳನ್ನು ಕರೆತರಲಾಗಿದೆ. ಆದರೆ ಆರೋಗ್ಯಾಧಿಕಾರಿ ನಿರ್ಗಮಿಸಿದ್ದದೆ ಒಪ್ಪಿಕೊಂಡಂತೆ ಅವರಿಂದ ಪರವಾವಧಿ ಕೆಲಸ ತೆಗೆದುಕೊಳ್ಳಲು ಅವನ ಅಧಿಕಾರಿಗಳಿಗೆ ಸಾಧ್ಯವಾಗಿಲ್ಲ. ನಗರದ ಸಾಂಬ [illegible]

ವ್ಯವಹಾರಸ್ಥರಿಗೆ ಗಾಂಧೀಜಿ ಹೇಳಿದ್ದು

ಸಾರ್ವಜನಿಕ ಅಭಿಪ್ರಾಯ ಬಲ

ತಾ ೩೦ರ ದೈನಿಕದಲ್ಲಿ ಗಾಂಧೀಜಿ ಪಾರ್ಲಿಮೆಂಟ ಲಾಯಬ್ರರಿಯಲ್ಲಿ ಕೂಡಿದ ವ್ಯಾಪಾರಿಗಳ ಸಭೆಯಲ್ಲಿ ಕ್ರಯನಿಯಂತ್ರಣದ ಬಗ್ಗೆ ಹೀಗೆ ಹೇಳಿದರು.

ಹಿಂದುಸ್ತಾನದಲ್ಲಿ ಕ್ರಯ ನಿಯಂತ್ರಣವು ನಿಂದೆಹೋಗುವದಿಲ್ಲವೆಂಬ ಮಾತಿಗೆ ನಾನು ಒಪ್ಪಿಕೊಳ್ಳುತ್ತೇನೆ. ಇನ್ನುಳಿದಲ್ಲಿ ಅದು ಹೇಗೇ ಇದ್ದಿರಲಿ. ಅನ್ನ ವಸ್ತ್ರಗಳ ಬಗ್ಗೆಯಂತೂ ಈ ನಿಯಂತ್ರಣ ಎಷ್ಟು ಸರಿಹೋಗದು. ಮಂತ್ರಿಗಳು ಜನತೆಯ ಸೇವಕರು. ಜನತೆಯ ಇಚ್ಛೆಯ ವಿರುದ್ಧ ಅವರು ವಿನಸನ್ನು ಮಾಡಲಾರರು ಜನತೆಗೆ ಬೇಡವಾಗಿ ಅವರು ಒಂದು ನಿಮಿಷ ಕೂಡ ಅಧಿಕಾರದಲ್ಲಿ ಉಳಿಯುವದಿಲ್ಲ. ಕಳೆದ ೩೦ ವರ್ಷ ಬ್ರಿಟಿಶರೊಡನೆ ಹೋರಾಡಿ ಜನಾಭಿಪ್ರಾಯವೆಂದರೇನು ಎಂಬುದು ವ್ಯಕ್ತವಾಗಿ ಹೋಗಿದೆ. ಜನಾಭಿಪ್ರಾಯಕ್ಕೆ ಅಪರಿಮಿತ ಬಲವಿದೆ. ಬ್ರಿಟಿಶರಿಗೆ ಬೆಂಬಲವಾಗಿ ಶಸ್ತ್ರಾಸ್ತ್ರಗಳಿದ್ದವು. ಇಂದಿನ ಸರಕಾರಕ್ಕೆ ಇದಿಲ್ಲ ಮತ್ತು ಇದು ಬೇಡ ಸುಸಂಸ್ಕೃತ ಹಾಗು ಜ್ಞಾನಯುತ ಸಾರ್ವಜನಿಕ ಅಭಿಪ್ರಾಯ ಬಲವಿದ್ದರೆ ಅದು ಮಿಗಿಲಾದ ಬೆಂಬಲವೇ.

ನಿಯಂತ್ರಣದ ಕಾರಣ

ಲಾಭಬಡಕತನ ಮತ್ತು ಅಪ್ರಾಮಾಣಿಕತೆಗಳೇ ನಿಯಂತ್ರಣದ ಕಾರಣಗಳು ಕ್ರಮಬೇಡವನ್ನು ಕ್ರಮಕ್ಕಿಂತ ಹೆಚ್ಚಾಗಿ ವ್ಯಾಪಾರಿಗಳು ತಾವೇಕೆ ಲಾಭ ಪಡೆಯಬೇಕು? ನನ್ನ ಮತದಂತೆ ನಿಜವಾದ ನಿಯಂತ್ರಣ ಬಂದುದು ಆಹಾರ ಬೆಳೆವವರ, ನಿರ್ಮಾಪಕರ ಮತ್ತು ದಲಾಲರ ಪ್ರಾಮಾಣಿಕತೆಯ ಮೂಲಕವಾಗಿ. ಜನತೆಯಲ್ಲಿ ನೆಲೆಗೊಂಡ ಸಂಶಯ ವೃತ್ತಿಯನ್ನು ನಿವಾರಿಸುವದು ವ್ಯಾಪಾರಿಗಳಿಗೂ ಗಿರಣಿಯ ಒಡೆಯರಿಗೂ ಕೂಡಿದೆ. ವ್ಯಾಪಾರಿಗಳು ಜನರಿಗಾಗಿ ನಿಯಂತ್ರಣ ಎತ್ತಬೇಕೆಂದರಾಗಲಿ ತಮ್ಮ ಲಾಭಬಡಕತನಕ್ಕಲ್ಲ. ಆದ್ದರಿಂದ ಅವರು ನಖಶಿಖಾಂತವೂ ಪ್ರಾಮಾಣಿಕರಾಗಿರಬೇಕು. ಗಿರಣಿಗಳ ಒಡೆಯರ ಮತ್ತು ವ್ಯಾಪಾರಿಗಳ ವಿವಿಧ ಸಂಘಗಳೂ ಜನ ಸಾಮಾನ್ಯರೂ ಕೂಡಿಯೇ ಪರಸ್ಪರದಿಂದ ಬಲಪಡೆದು ನಿಯಂತ್ರಣ ಎತ್ತಲು ಹೆಣಗಬೇಕು ಅಂದರೆ ಮಾತ್ರ ಅವರೇ ಸರಕಾರಕ್ಕೆ ನಿಜವಾದ ಬಲಗೈಯಾಗಬಲ್ಲರು. ಇವರಿದಿರು ಅಧಿಕಾರೀ ವರ್ಗದ ಬಲವೇನೂ ಅಲ್ಲ. ಗೀತೆ ಹೇಳುತ್ತದೆ,

---

ನೋಡಲಸಾಧ್ಯವಾದ ಹೊಲಸಿನ ರಾಶಿ ಮತ್ತು ಜನವಸತಿ ಹೆಚ್ಚಿದಲ್ಲಿ ಕುಂಭೀಪಾಕದ ದುರ್ಗಂಧವು ಸಂದರ್ಶಕರನ್ನು ರಸ್ತೆ ಮತ್ತು ಗಲ್ಲಿಗಳತ್ತ ಕರೆಯುತ್ತದೆ. ಇದರಿಂದ ಶುಚಿಕರಣ ಸುಧಾರಿಸದಿದ್ದರೆ ಬಹುಬೇಗ ಕಾಹಿಲೆಯು ಬಹು ಜನರನ್ನು ಆಹುತಿ ತೆಗೆದುಕೊಳ್ಳದಿರದೆಂಬುದು ಯಾರಿಗೂ ತಿಳಿಯಬಹುದಾಗಿದೆ."

ನನ್ನ ಪ್ರಕಾರ ನಿರಾಶ್ರಿತರು ಜವಾನರನ್ನು ಸೇವೆಗಿಟ್ಟುಕೊಳ್ಳುವದು ತಪ್ಪು. ಅವನ್ನು ಅವರು ತಾವೇ ಮಾಡಬೇಕು. ಮತ್ತು ಇಡಿಯ ಶಿಬಿರಕ್ಕಾಗಿ ಬೇರೆ ಯಾವುದಾದರೂ ಕೆಲಸವನ್ನು ಮಾಡಲು ಯತ್ನಿಸಬೇಕು, ಅವರು ತಮ್ಮ ದುರ್ಭಾಗ್ಯವನ್ನು ಸರಿಯಾಗಿ ಸದುಪಯೋಗ ಪಡಿಸಿಕೊಳ್ಳಬೇಕು. ಅವರಿಗೆ ಆಹಾರ ನೀರು ನೆರಳು ವಸ್ತ್ರ ಬಟ್ಟೆ ಒದಗಿಸುವುದು ಎರಡೂ ಸರಕಾರಗಳ ಕರ್ತವ್ಯ, ಆದರೆ ಅವರಿಗಾಗಿ ಒಂದು ಸೇವಕರ ಸೈನ್ಯವನ್ನು ತಯಾರಿಸಿ ಕೊಡುವುದು ಎಂದೂ ಅವುಗಳ ಕರ್ತವ್ಯವಲ್ಲ. ಅವರು ಹಿಂದುಗಳಿರಲಿ, ಶೀಖರಿರಲಿ, ಮುಸ್ಲಿಮರಿರಲಿ- ಕಕ್ಕಸತೊಳೆಯುವದನ್ನು ಹಿಡಿದು ಹೀನ ಕೆಲಸವೆಂದು ತಪ್ಪಾಗಿ ಕರೆಯಲಾಗುವ ಯಾವ ಕೆಲಸವನ್ನು ಮಾಡಲೂ ಹಿಂದೆ ಸರಿಯಬಾರದು, ಅವರೆಂದೂ ಸೋಮಾರಿಗಳಾಗಬಾರದು. ಶುಚೀಕರಣವು ಒಂದು ನಿಶಿಷ್ಟ ವರ್ಗದ ಜನರು ಮಾಡಬೇಕಾದ ಕೆಲಸವೆಂದು ತಿಳಿವ ಮರಭ್ರಾಂತವನ್ನು ಜನರು ಬಿಟ್ಟುಬಿಡಬೇಕು. ಪಾಕಿಸ್ತಾನದ ಮುಸ್ಲಿಂ ನಿರಾಶ್ರಿತರಿಗೆ ಅಷ್ಟು ಲಕ್ಷ್ಯವಿತ್ತುದನ್ನು ಸಭಿಕರು ಕ್ಷಮಿಸಬೇಕು. ನಾನೆಂದೂ ಅಂಥ ಅನುಮಾನುಸ ಭೇದವನ್ನೆಣಿಸಲಾರೆ.

ನವಖಾಲಿಯ ಸುದ್ದಿ

"ನನ್ನ ಕಾರ್ಯದರ್ಶಿ ಪ್ಯಾರೇಲಾಲರು ತನ್ನ ಸಹೋದ್ಯೋಗಿಗಳೊಡನೆ ನನ್ನನ್ನು ನೋಡಲು ನವಖಾಲಿಯಿಂದ ಬಂದಿದ್ದಾರೆ. ಅವರು ನನ್ನ ಮತದಂತೆ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ನನ್ನ ಬಿನ್ನಹದ ಮೇರೆಗೆ ಅವರು ಅಲ್ಲಿ ಉಳಿದಿ

(೧೧ನೆಯ ಪುಟಕ್ಕೆ)

ದೇವರಿಗೆ ಪ್ರಿಯವಾದುದನ್ನು ಮಾಡಿದರೆ ನಿನಗೆ ಪ್ರಿಯವಾದುದನ್ನು ದೇವರು [illegible] ಕೊಡುತ್ತಾನೆ. [illegible] ನಲ್ಲಿ [illegible] ಇಲ್ಲ. [illegible] ಹೋದರಿಲ್ಲ [illegible] ದೇವರಿಗೆ [illegible] ತನ್ನ [illegible] ಬೇಕೆಂದು [illegible] ಹಿಂದೆಗೆದಿತು. [illegible] ಮನುಷ್ಯರು [illegible] ಹೃದಯಗಳು, [illegible] ಪ್ರಾಮಾಣಿಕರು. [illegible] ಬುದು [illegible] ಹೋಗುವದು.

ವಸ್ತ್ರ ಸ್ವಾವಲಂಬನ

ಜನರು ತಮ್ಮ ತಮ್ಮ ಹಳ್ಳಿಗಳಲ್ಲಿಯೇ ತಮಗೆ ಬೇಕಾದ ವಸ್ತ್ರ ನಿಷ್ಪಾದಿಸಿಕೊಳ್ಳುವದು ಸಾಧ್ಯವೆಂದೂ ನನ್ನ ನಂಬಿಗೆ. [illegible] ವಸ್ತ್ರಕ್ಕಾಗಿ ವ್ಯಯವಾಗುವ ಕೋಟಿ ಕೋಟಿ ರೂಪಾಯಿಗಳು ಹಳ್ಳಿಯಲ್ಲಿಯೇ [illegible] ಹಳ್ಳಿಗರ ಜೋಳಿಗೆಗೆ ಬೀಳುವದು. [illegible] ಹಿಂದುಸ್ತಾನ [illegible] ಕೃಷಿಪ್ರಧಾನವಲ್ಲದೆಯೇ ಇದೆ ಎಂಬುದಾಗಿ [illegible] ನದ ಒಂದು ಮರಗೆ ಹಳಹಳ [illegible]. ಇದನ್ನು ನಾನು ಹೃತ್ಪೂರ್ವಕ ಒಪ್ಪುತ್ತೇನೆ. ಯಾಕೆಂದರೆ ನನಗೆ ವ್ಯವಹಾರಸ್ಥರ ಪ್ರಾಮಾಣಿಕತೆಯಲ್ಲಿ ತುಂಬ ನಂಬುಗೆಯಿದೆ. ನನ್ನ ನಂಬುಗೆಯನ್ನು ನೀವು [illegible] ಬೇಡು ತ್ತೇನೆ.

ವಿದೇಶದ ವಸ್ತ್ರ ಬರುವದು ನಿಲ್ಲದೆ ಹೋದರೂ ಭಾರತದಿಂದ ನಮ್ಮ ವಸ್ತ್ರ ನಿರ್ಯಾತವಾಗುತ್ತಿದೆಯೆಂದೂ ನಾನು ಕೇಳಿದ್ದೇನೆ. ನನ್ನ ಅಭಿಪ್ರಾಯ ಕೇಳಿದರೆ ಇದೆರಡೂ ಶುದ್ಧ ತಪ್ಪು. ಹಿಂದುಸ್ತಾನಕ್ಕೆ ಹೊರಗಿನ ಅರಿವೆಯ ಅವಶ್ಯಕತೆಯಿಲ್ಲ. ಅದರಂತೆ ಹಿಂದುಸ್ತಾನದಲ್ಲಿ ಅರಿವೆಯ ಕೊರತೆ ಇರುವವರೆಗೆ ಹಿಂದುಸ್ತಾನವೇಕೆ ಹೊರಗೆ ತನ್ನ ವಸ್ತ್ರ ಕಳಿಸಬೇಕು? ಭಾರತದ [illegible] ಕ್ಕೆಲ್ಲ ಜಾಣರಾಗಿ ಸಹಕೋದ್ಯೋಗಿಗಳಾಗಿ ತಮ್ಮ ತಮ್ಮ ವಸ್ತ್ರಗಳನ್ನು ತಮ್ಮ ಹಳ್ಳಿಯಲ್ಲಿ ತಾವೇ ನೇಯುವದಾದಲ್ಲಿ ನಾನು ಹಿಂದುಸ್ತಾನದ ಗಿರಣಿಯ ಅರಿವೆಯನ್ನೆಲ್ಲ ಅತ್ಯಾನಂದದಿಂದ ವಿದೇಶಕ್ಕೆ ನಿರ್ಯಾತ ಮಾಡಹೇಳುವೆ.

ಇನ್ನೊಂದು ಪಲಗೈ "ಗಿರಣಿಯ ಒಡೆಯರ ಹವಣಾರಿಕೆಯಿಂದ ಎಚ್ಚರ" ಎಂದು ಹೇಳುತ್ತದೆ. ನಾನು ಇದಕ್ಕೂ ಎರಡು ಹೆಜ್ಜೆ ಮುಂದೆ ಹೋಗಿ "ಎಲ್ಲರಿಂದೂ ಎಚ್ಚರಿಕೆ" ಎಂದು ಹೇಳಬಯಸುತ್ತೇನೆ. ಈ ಎಚ್ಚರಿಕೆಗೆ ನಾನೂ ಹೊರತಲ್ಲ, ಇನ್ನಿತರ ಸಾರ್ವಜನಿಕ ಸೇವಕರು ಎದುರಿಗಿರುವ ಈ ವ್ಯವಹಾರಸ್ಥರು ಯಾರೂ ಹೊರತಲ್ಲ. ಎಲ್ಲರಿಂದೂ ಎಚ್ಚರಿಕೆ.

ಹೊಸದಿಲ್ಲಿ
೨೪—೧೨—೪೭

ಸರಿಯಾಗಿರಿಸಿದ ಕಸ

ಮಲದ ಗೊಬ್ಬರಕ್ಕಾಗಿ ಮಾಡಿದ ವ್ಯವಸ್ಥೆ ಎಂದರೆ ಸರಿಬೆರಿಕೆಯಾಗಿರಿಸಿದ ಕಸ. ಗಟ್ಟಿಯಾದ ಮತ್ತು ನೀರಾದದ ಕಸವೂ ಮಲವೂ ಸಿಕ್ಕಾಬಟ್ಟೆ ಬಿದ್ದು ಬಿಟ್ಟರೆ ಅದು ಜನರಿಗೆ ಅಸಹ್ಯವಾಗಿ ಆರೋಗ್ಯಕ್ಕೆ ಗಂಡಾಂತರವಾಗಿ ಪರಿಣಮಿಸುತ್ತದೆ. ಹೀಗೆ ಕಸ ಎಸೆದುವಾದರೆ ಅದು ಅಕ್ಷಮ್ಯ ಅಪರಾಧ ಮತ್ತು ವ್ಯರ್ಥವ್ಯಯ. ಇದರಿಂದ ಭೂಮಿ ತಾಯಿಯು ಅತಿಪೋಷಕ ಆಹಾರದಿಂದ ಆಕೆಯನ್ನು ವಂಚಿಸಿದ ಪಾಪ ಕಟ್ಟಿದಿರೆಮು. [illegible] ನಮು ತಮ್ಮ ಒಂದು ಪುಸ್ತಿಕೆಯಲ್ಲಿ ಹೀಗೆಹೇಳುತ್ತಾರೆ. (ಇಂಗ್ಲೀಷ ಹರಿಜನದ ೨೮—೧೧—೪೭ ರ ಸಂಚಿಕೆಯ ೪೨೮-೪೩೫ ರ ವರೆಗಿನ ಪುಟಗಳಲ್ಲಿ ಇದರ ಪೂರ್ತಿ ಪಾಠವಿದೆ.)

"ನಾವು ಭೂಮಾತೆಯನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ನಮ್ಮ ಹೊಟ್ಟೆಗೆ ಹಾಕಬೇಕೆಂದು ಅವಳೇನೋ ತುಂಬ ಪ್ರಯಾಸಪಡುತ್ತಾಳೆ ಆದರೆ ನಾವು ಪ್ರತಿಯಾಗಿ ಅವಳಿಗೆ ಆಹಾರ ಒದಗಿಸಲಿಲ್ಲ. ಹೀಗಾದರೆ ಅವಳೆಂತು ನಮ್ಮನ್ನು ಪೋಷಿಸಬಲ್ಲಳು? ನಾವು ಅವಳ ಮಕ್ಕಳು ಕರ್ತವ್ಯ ತತ್ಪರರಾದ ಸಂತಾನ [illegible] ವರ್ಷವೂ ನಾವು ಉತ್ತಿ ಬಿತ್ತಿ ಹೊಲಗಳಿಂದ ಫಲ ಎತ್ತುತ್ತೇವೆ. ಆದರೆ ಆ ನೆಲಕ್ಕೆ ನಾವು ಗೊಬ್ಬರ ಕೊಡುವದು ಬಹು ವಿರಳ. ಕೊಟ್ಟ ಗೊಬ್ಬರವಾದರೋ ಅರ್ಧಮರ್ಧ [illegible] ಮಾತ್ರ ನಮಗೆ. ಮುಖ್ಯವಾಗಿ ಬೇಯಿಸಿದ ಅನ್ನ ಬೇಕಾಗುವಂತೆ ಭೂಮಿಗೂ [illegible] ಗೊಬ್ಬರಬೇಕು."

ಈ ಬಗ್ಗೆ ಇನ್ನು ಹೆಚ್ಚಿಗೆ ತಿಳಿಯಬೇಕೆನ್ನುವವರು ಅದರಿಂದ ಆ ಪುಸ್ತಿಕೆಯ ಪ್ರತಿಯೊಂದನ್ನು ಪಡೆದು ನೋಡಬಹುದು. [illegible]

ಹೊಸದಿಲ್ಲಿ
೨೮-೧೨-೪೭

ನನ್ನ ತಪೋಃ ಯಾತ್ರೆ

(ಹೋದ ಸಂಚಿಕೆಯಿಂದ ಮುಂದುವರಿದು ೯೬)

ದೈನ್ಯ ಭಾವ

ಇದೇ ಬಗೆಯ ಇನ್ನೊಂದು ಕೆಡುಕೆಂದರೆ ನಿರಾಶ್ರಿತರಲ್ಲಿ ತೋರಿ ಬರುವ ದೈನ್ಯಭಾವ. ಪುಕ್ಕಟೆಯಾಗಿ ಇವರಿಗೆ ಅನ್ನ ಒದಗಿಸಿದ್ದರ ಫಲವಿದು. ಗತ ಹತ್ಯಾಕಾಂಡದ ನಂತರ ಬಿಹಾರ ಮುಸಲ್ಮಾನರಿಗೆ ಇದೊಂದು ಬಗೆಯ ದೊಡ್ಡ ನೈತಿಕ ಹಾನಿಯೇ. ನೌಖಾಲಿಯ ದುರಂತದ ಕಾಲದಿಂದಲೇ ಗಾಂಧೀಯವರು ಈ ಬಗೆಯ ಅನಿಷ್ಟದ ಬಗ್ಗೆ ಎಚ್ಚರಿಕೆ ಹೇಳುತ್ತ ಬಂದಿದ್ದಾರೆ. ದುಡಿಮೆಯ ವಿನಿಮಯದಲ್ಲಿಯೇ ನಿರಾಶ್ರಿತರಿಗೆ ದಿನದ ಅನ್ನ ದೊರಕಬೇಕು. ಇದು ಕ್ರೂರ ವಿಧಾನವಾಗಿ ಕಂಡರೂ ನಿರಾಶ್ರಿತರ ಸಾಮೂಹಿಕ ಕಲ್ಯಾಣಕ್ಕಾಗಿ ಈ ಕ್ರೌರ್ಯ ಕೆಟ್ಟದ್ದಲ್ಲ.

ನಿಯಂತ್ರಿತ ದರಕ್ಕೆ ಸೀದಾ

ನಿರಾಶ್ರಿತರಿಗೆ ಹೊರಗೆ ನಿಯಂತ್ರಿತ ದರಕ್ಕೆ ಪದಾರ್ಥ ಸಿಕ್ಕದಿರುವದೂ ಇವರ ಈ ದೈನ್ಯಭಾವಕ್ಕೆ ಕಾರಣವಾಗಿರುವದಲ್ಲದೆ ಇವರನ್ನು ನಿರಾಶ್ರಿತ ಶಿಬಿರಗಳಲ್ಲಿ ಸೇರಹಚ್ಚಿದೆ. ಜನರು ಇಲ್ಲದ ಸೋಗು ಹಾಕಿ ಶಿಬಿರಗಳಲ್ಲಿ ಇರತೊಡಗುವರು. ಅಮುಥುಆ ಮುಸಲ್ಮಾನರ ಗಂಡು ಮೆಟ್ಟು. ಇಲ್ಲಿ ಹತ್ತಿರದ ಹಳ್ಳಿಗಳ ಮುಸಲ್ಮಾನರನೇಕರು ಬಂದಿದ್ದಾರೆ. ಈ ಹಳ್ಳಿಗಳು ಅಮುಥುಆದಿಂದ ಒಂದು ಮೈಲಿನ ದೂರದಲ್ಲಿ ಮಾತ್ರ ಇವೆ. ಕುಟುಂಬದ ಕೆಲ ಜನರಂತೂ ತಮ್ಮ ತಮ್ಮ ಭೂಮಿಗಳ ಮೇಲ್ವಿಚಾರಣೆಗೋಸುಗ ಅಲ್ಲಿ ವಾಸಿಸಿಕೊಂಡಿದ್ದಾರೆ. ಅಮುಥುಆ ಒಂದೇ ಈ ಬಗೆಯ ಉದಾಹರಣೆಯಲ್ಲ. ವೈಯಕ್ತಿಕವಾಗಿ ನಿರಾಶ್ರಿತರು ತಮ್ಮ ತಮ್ಮ ಹಳ್ಳಿಗಳಿಗೆ ಹೋಗಿ ಅಲ್ಲಿಯೇ ಮಲಗುತ್ತಾರೆ. ಹಿಂದು ಬಂಧುಗಳೊಡನೆ ಸಹ ಭೋಜನ ಕೂಡ ಮಾಡುತ್ತಾರೆ. ಆದರೆ ಅಲ್ಲಿಯೇ ಎಲ್ಲರೂ ಹೋಗಿ ವಾಸಿಸಲು ಅದೇಕೋ ಹೆದರುತ್ತಾರೆ.

ಅನುಚಿತ ವೃತ್ತಿ

ನಿರಾಶ್ರಿತರು ಸ್ಥಾನಿಕ ನಿವಾಸಿಗಳಲ್ಲಿ ಹಂಚಿ ಹರಡಿಹೋದಲ್ಲಿ ಅವರ ಸಂಖ್ಯೆ ಎಷ್ಟಿವೆ ಎಂದು ಕಂಡುಹಿಡಿಯುವದು ಅಶಕ್ಯವೇ. ಕುಟುಂಬದವರು ಸೀದಾ ಆಹಾರವನ್ನು ತಂದೆ, ತಾಯಿ ಹಾಗು ಮನೆಯವರ ವೈಯಕ್ತಿಕ ಹೆಸರಿನಲ್ಲಿ ತರುತ್ತಾರೆ. ವೈಯಕ್ತಿಕ ಸೀದಾ ಪ್ರಮಾಣ ಹೆಚ್ಚಿಲ್ಲದಿದ್ದರೂ ನಿರಾಶ್ರಿತರೇನು ಕಡಮೆ ತಿಂದು ಬದುಕುತ್ತಿಲ್ಲ. ಹೆಣ್ಣುಮಕ್ಕಳ ಪರ್ದಾ ಪದ್ಧತಿಯ ಮೂಲಕ ವಿಚಾರಣೆ ಇನ್ನೂ ಗಡಚಾಗುತ್ತದೆ. ಎಷ್ಟು ಜನ ನಿರಾಶ್ರಿತರಿಗೆ ಅನ್ನ ಒದಗಿಸಲಾಗುತ್ತದೆ ಎಂಬುದನ್ನು ಈ ವರೆಗೆ ಯಾರೂ ಅರಿತಂತೆ ಕಾಣಲಿಲ್ಲ. ಸೀದಾ ತೆಗೆದುಕೊಳ್ಳಬಾಗುತ್ತಿದ್ದ ನಿರಾಶ್ರಿತರ ಸಂಖ್ಯೆ ವಿಪರೀತ ಹೆಚ್ಚಿ ಹೋಗಿದೆ.

ಸೀದಾ ಪದ್ಧತಿಯ ವಿಷಯದಲ್ಲಿ ಕೈಯಿಕ್ಕಿದ ಯಾರಿಗೂ ಗೆಲುವಾಗಲೀ ಗೌರವವಾಗಲೀ ಒಂದಿಷ್ಟೂ ಸಿಕ್ಕಲಾರದೆಂದೇ ಹೇಳಬೇಕಾಗುತ್ತದೆ. ಮೊನ್ನೆ ಮೊನ್ನೆಯ ವರೆಗೆ ಎಲ್ಲ ನಿರಾಶ್ರಿತ ಶಿಬಿರಗಳಲ್ಲಿ ಅನ್ನ ವಸ್ತ್ರಗಳನ್ನು ಹಂಚುವ ಭಾರವು ಮುಸ್ಲಿಂ ಲೀಗಿನವರ ಹಸ್ತದಲ್ಲಿಯೇ ಇತ್ತು. ಅನಿರೀಕ್ಷಿತವಾಗಿ ನಡೆದ ಸಾರ್ವತ್ರಿಕ ಪ್ರಾಣಹರಣದಿಂದ ಖಿನ್ನಗೊಂಡ ಮಂತ್ರಿಮಂಡಲವು ನಿರಾಶ್ರಿತರ ರಕ್ಷಣಾ ಭಾರವನ್ನು ಮುಸ್ಲಿಂಲೀಗಿಗೆ ಸಂಪೂರ್ಣ ಒಪ್ಪಿಸಿ ಬಿಟ್ಟಿತು. ಲೀಗು ಕೇಳಿದ್ದನ್ನೆಲ್ಲ ಒಡನೆಯೇ ಒದಗಿಸಲಾಯ್ತು. ಆ ನೇಲೆ ಲೆಕ್ಕಪತ್ರವನ್ನು ಕೇಳುವ ಸಾಹಸ ಯಾರಿಗೂ ಆಗಲಿಲ್ಲ. ಸಾವಿರಾರು ಮಣ ಅನ್ನ ಸಾಮಗ್ರಿ ಎಂದು ಕಳ್ಳಪೇಟೆಯಲ್ಲಿ ಮಾಯವಾಯ್ತು. ಹಂಚಲೆಂದು ಕಳುಹಿದ ಅರಿವೆಯು ಗತಿಯೂ ಇದೆ. ಗಯಾ ಶಿಬಿರ ಒಂದಕ್ಕೇ ಸಾವಿರಕ್ಕೆ ಮಿಕ್ಕಿ ಉಣ್ಣೆಯ ಹೊದಿಕೆಗಳನ್ನೂ, ಅಸಂಖ್ಯಾತ ಸೀರೆಗಳನ್ನೂ ಹಂಚಲೆಂದು ಕೊಡಲಾಗಿತ್ತು. ಇಂದು ನೋಡಿದರೆ ನಿರಾಶ್ರಿತರ ಬಳಿ ಇವು ಒಂದಾದರೂ ಇದ್ದುದು ಕಾಣುವದಿಲ್ಲ. ಆ ಪದಾರ್ಥಗಳು ಲೀಗ ಸ್ವಯಂ ಸೇವಕರ ಸ್ವಕೀಯ ಸ್ವತ್ತಾದರೂ ಆಗಿರಬೇಕು ಅಥವಾ ನಿರಾಶ್ರಿತರೇ ಅವನ್ನು ಮಾರಿಕೊಂಡಿರಬಹುದು ಬಿಟ್ಟಿರಬೇಕು.

ಅನ್ಯಾಯ ಮತ್ತು ವೈರ

ಇಲ್ಲಿ ಹಿಂದುಗಳ ಮನಸ್ಸಿನಲ್ಲಿ ಒಂದು ಪ್ರಕಾರದ ವಿಪರೀತ ಭಾವವನ್ನುಂಟು ಮಾಡಿದೆ. ಅನಿಗಿ ಇದು ಅನ್ಯಾಯವೆಂದು ತೋರಿ ನಿರಾಶ್ರಿತರಿಗೆ ಅನ್ನವಿತ್ತು ಸಹಾಯ ಮಾಡುತ್ತಿದ್ದರೆ ಇಲ್ಲದಾಗಿದೆ, ಇವರಿಂದ ಸಂಕಷ್ಟ ಪರಿಹಾರ ಕಾರ್ಯಕ್ಕೆ ನಿಲ್ಲಬೇಕಾಗಿದೆ. ಮುಂದಿನ ಸುಸ್ಥಿರ ಸಂಬಂಧಕ್ಕೆ ಇದು ಬಾಧಕವಾಗಿದೆ. ಅನ್ಯಾಯ ಬಲವಾಗಿ ಹಿಂದುಗಳ ಸ್ನೇಹ ಭಾವವನ್ನು ಕಳೆದುಕೊಳ್ಳುವಂತೆ ಮಾಡುತ್ತಿದೆ. ಅನ್ನ

ಸರಕಾರದ ರಾಜನೀತಿಯ ವಿರೋಧಿ ಪಕ್ಷವು ಈ ಭಾವನೆಯನ್ನೇ ದೊಡ್ಡದು ಮಾಡಿ ಹುಡುಕಿಬಿಟ್ಟಿರುವನು. ಇಂದಿನ ಅಭಾವದ ಕಾಲದಲ್ಲಿ ಲಕ್ಷಾನುಲಕ್ಷ ಹೊಟ್ಟೆಗಿಲ್ಲದ ಬಟ್ಟೆಯಿಲ್ಲದ ಜನಗಳಲ್ಲಿ ಈ ಬಗೆಯ ವಿರೋಧಭಾವ ಬಲವಾಗಿಯೇ ಇದೆ.

ಅವರು ಸ್ನೇಹಕ್ಕೆ ಎರವಾದರು

ಲೀಗಿನವರು ಸೇಡಿನ ಬುದ್ಧಿಯಿಂದಲೇ ಹೀಗೆಲ್ಲ ಮಾಡಿದರು. ನಿರಾಶ್ರಿತರು ತಮ್ಮ ನಿಯಂತ್ರಣದಲ್ಲಿ ಬರುವದೊಂದೇ ತಡ ಅವರ ಸಂಕಷ್ಟ ಅಭಿವೃದ್ಧಿ ಕೋಟಿಯನ್ನೇ ಕಟ್ಟಿದಂತೆ ಮಾಡಿದರು. ಈ ಜನಗಳನ್ನು ಬದುಕಿಸಲು ತಮ್ಮ ಪ್ರಾಣವನ್ನೂ ಗಂಡಾಂತರಕ್ಕೆ ಗುರಿಮಾಡಿಕೊಂಡ ಪ್ರಮುಖ ಕಾಂಗ್ರೆಸ ಕಾರ್ಯಕರ್ತರನ್ನೂ ಕೂಡ ಈ ನಿರಾಶ್ರಿತರು ಸನಿಹಕ್ಕೆ ಬರಗೊಡದಾದರು. ಲೀಗಿನವರ ಪ್ರಚೋದನೆಯಿಂದ ಕೆಲ ಕಾರ್ಯಕರ್ತರನ್ನು ಈ ಜನರು ಇಲ್ಲದ ತೊಡಕಿನಲ್ಲಿ ಸಹ ಸಿಲುಕಿಸಿದರು. ಕೆಲವು ಪ್ರಮುಖ ಕಾಂಗ್ರೆಸ ಕಾರ್ಯಕರ್ತರು ಸಾಹಸದಿಂದ ಈ ನಿರಾಶ್ರಿತರ ಶಿಬಿರದಲ್ಲಿ ಹೊಕ್ಕಾಗ ಅವರನ್ನು ಒದೆದು ಹಾಕಿದರು. ಇದೆಲ್ಲದರ ಪ್ರತಿಕ್ರಿಯೆಯು ಕೆಡುಕಾಗದೆ ಬಿಡುವದೆ? ಇದರಿಂದ ನಿರಾಶ್ರಿತರು ತಮ್ಮ ಅತ್ಯಂತ ಶ್ರೇಷ್ಠ ಹಿತೈಷಿಗಳಿಗೂ ಮಿತ್ರರಿಗೂ ಎರವಾಗಬೇಕಾಗಿ ಬಂದಿತು. ಗಾಂಧೀಜಿಯವರು ಬಂದಮೇಲೆಯೋ ಕಾಂಗ್ರೆಸ ಕಾರ್ಯಕರ್ತರು ಕೆಲವರಲ್ಲಿ ಮನೆ ಮಾಡಿದ ಅನಿಷ್ಟ ಭಾವವೂ ಇನ್ನು ಕೆಲವರಲ್ಲಿದ್ದ ವೈರ ಭಾವವೂ ಬದಲುತ್ತ ಕರಗತೊಡಗಿತೆನ್ನಬಹುದು.

ಕಾದಿಟ್ಟ ಸಿಡಿಮದ್ದು

ಪ್ರಾಂತದ ಮುಸಲ್ಮಾನರನ್ನು ಅಲ್ಲಲ್ಲಿ ಒಟ್ಟುಗೂಡಿಸಿ ಮುಸಲ್ಮಾನ ದುರ್ಗಗಳನ್ನು ರಚಿಸಿಕೊಳ್ಳುವ ಉದ್ದೇಶ ಸಾಧನೆಗಾಗಿ ಲೀಗು ಇವರನ್ನು ಕಾದಿಟ್ಟ ಸಿಡಿ ಮದ್ದಿನಂತೆ ಇರಿಸಿದ್ದರು. ಯಾರಿಗೆ ಗೊತ್ತು ಇದಕ್ಕೂ ಇನ್ನೂ ಹೆಚ್ಚಿನ ಹೊಂಚಿದ್ದರೂ ಇರಬಹುದು. ಮುಸಲ್ಮಾನರು ಹಿಂದೂಗಳಿಂದ ಕಡೆತನಕ ವಿಂಗಡಿಸಿಹೋಗುವಷ್ಟಾದರೂ ಇದರಿಂದ ಸಾಧಿಸುತ್ತಿತ್ತು. ಇವರಲ್ಲಿದ್ದ ವೈರಭಾವವನ್ನೂ ಅವಿಶ್ವಾಸವನ್ನೂ ಭಯವನ್ನೂ ಕೆರಳಿಸಿಯೇ ಇವರನ್ನು ಶಿಬಿರದಲ್ಲಿರಿಸಿಕೊಂಡರು. ಮುಸಲ್ಮಾನ ದುರ್ಗ ರಚನೆಯಲ್ಲಿ ತಾವು ತೊಡಗಿದ್ದಾಗ ಇವರ ಮೂಲಕ ತುಂಬ ಲಾಭವೂ ಬರುತ್ತಿತ್ತಲ್ಲವೆ?

ಕೇಡಿನಲ್ಲಿ ಕೇಡು

ಹೀಗೆ ಬಹು ದೀರ್ಘ ಕಾಲದ ವರೆಗೆ ಇವರನ್ನು ಹಿಡಿದಿರಿಸಿದ್ದರ ಫಲವಾಗಿ ಮೈಗಳ್ಳತನ, ಕಾದ್ಯನ್ಯಭಾವ ಇವಿಷ್ಟೇ ಬೆಳೆಯಲಿಲ್ಲ. ಶಿಬಿರದಲ್ಲಿ ಕೇಡೆಸಗಿಕೊಂಡ ಅನಾಚಾರಕ್ಕೂ ಇವರು ಗುರಿಯಾಗಿದ್ದಾರೆ. ಕೆಲಸವಿಲ್ಲದ ಹೆಣ್ಣು ಗಂಡು ಮನಬಲ್ಲಂತೆ ಬೆರೆತುಕೊಂಡು ಇದ್ದುದರಿಂದ ನೈತಿಕ ಅಧೋಗತಿ ಕಟ್ಟಿಟ್ಟದ್ದೇ. ಈ ನಿರಾಶ್ರಿತರಲ್ಲಿ ಕೆಲರು ಪಟ್ಟಣದಲ್ಲಿ ಕೆಲಸ ದೊರಕಿಸಿಕೊಳ್ಳುತ್ತಾರೆ. ಹೀಗೆ ದುಡಿದು ತಂದ ಹಣವು ಅನವಶ್ಯವಾಗಿಯೇ ಖರ್ಚಾಗಿ ಹೋಗುವದೇ ಬಹಳ.

ಈ ನಿಧವಾಗಿ ಗಳಿಸುವ ಮೂಲಕ ಉಂಟಾದ ಸ್ವಾರ್ಥಪರಾಯಣತೆಯಿಂದ ಇವರು ಶಾಶ್ವತ ಶಿಬಿರಕ್ಕೆ ಹೋಗಲು ನಿರಾಕರಿಸುತ್ತಾರೆ. ಇವರು ಶಾಶ್ವತ ಶಿಬಿರಕ್ಕೆ ಹೋದುದಾದಲ್ಲಿ ಇವರಿವರ ಹಳ್ಳಿಗಳಲ್ಲಿಯೇ ಈ ಜನಗಳನ್ನು ಸುಲಭವಾಗಿ ಪುನರ್ವಸತಿಗೊಳಿಸಬಹುದು.

ಪಾಟಣಾ ದೇವಪ್ರಕಾಶ ನಯ್ಯರ

೪—೧೦—೪೭

ಜಡವಿಗ್ರಹ ಚೈತನ್ಯ ಮೂರ್ತಿ ಯಾಯಿತು

(೭ನೆಯ ಪುಟದಿಂದ)

ಅದೇರೀತಿಯಲ್ಲಿ ಪ್ರಸಾದಕ್ಕಾಗಿ ಒಂದು ಕಾಸನ್ನು ಕೂಡ ವೆಚ್ಚ ಮಾಡಲಿಲ್ಲ. ದೇವರ ನೈವೇದ್ಯವನ್ನು ಮುನ್ನಿನಿಂದ ಕೆಲವರು ಸಾಧ್ಯವಿಲ್ಲವೆಂದು ನಾನವರಿಗೆ ಹೇಳಿದೆ. ಅದು ಕೊಂಡುವದಾದುದು ವಸ್ತುವಲ್ಲ; ಅದು ನಮ್ಮ "ಮಧುರವಾದ ರಕ್ತ ಮತ್ತು ಕಂಬನಿಗಳಿಂದ" ಮಾತ್ರಲಭ್ಯ. ಕೆಲ ಕಾಲದಿಂದ ಗ್ರಾಮಸ್ಥರಿಗಾಗಿಯೆಂದು ಸ್ತ್ರೀಯರಿಡಿಯಾಗಿ ತೆಂಗಿನೆಣ್ಣೆಯನ್ನು ತಯಾರಿಸಲಾರಂಭಿಸಿದ್ದೆ. ಅವಶ್ಯಕತೆಯೇ ಹೊಸ ಸಂಶೋಧನೆ, ಸಾಧನೆಗಳಿಗೆ ಮೂಲ. ೨೮ ರೂಪಾಯಿಗಳಗೊಂದು ಮಣದಂತೆ ಅಕ್ಕಿ ಮಾರುತ್ತಿದ್ದಾಗ ನಮ್ಮೊಡನೆ ಹಾಲಿಗೆ ಹೋಗುತ್ತಿದ್ದ, ಅದಿಣಿ ಮುತ್ತಿದ್ದ, ಮಾಡುತ್ತಿದ್ದ ಚಿಕ್ಕಮಕ್ಕಳಿಗ ಹುಡುಗರು ಹೊಟ್ಟೆ ತುಂಬಲಿಲ್ಲವೆಂದು ದೂರುಕೊಡತೊಡಗಿದರು. ಕೆಲಸಮಾಡುವ ಇಚ್ಛೆಯು ಹರಿದು ಅವರು ದುಃಖಿತರಾಗಿ ಅಳುತ್ತಿದ್ದುದು ಯಾರ ಸಹಾನುಭೂತಿಯನ್ನಾದರೂ ಹಿಂಡುವಂತಿತ್ತು.

ಅವಕ್ಕೆ ತೆಂಗಿನೆಣ್ಣೆಯೇ ಉತ್ತರವಾಯಿತು. ಕೆಲಸಮಾಡಿದ ಪ್ರತಿಯೊಬ್ಬ ಗಂಡು, ಹೆಂಗಸು, ಮಗು ಇವರಿಗೆ ದಿನಕ್ಕೆ ೧ ರಿಂದ ... ರ ವರೆಗೆ ಅದು ಸಂಪಾದಿಸಿಕೊಟ್ಟಿತು. ಪ್ರತಿದಿನ ನನಗಾಗಿ ನೀವು ಎಷ್ಟು ತೆಗೆಯುವಿರಿ, ಒಂದು ದಿನ ನನ್ನ ದೇವರಿಗಾಗಿ ತೆಗೆಯಿರಿ' ಎಂದೆ. ಅವಕ್ಕವರೊಪ್ಪಿದರು. ಆ ಪ್ರಕಾರ ೬೫೦ ತೆಂಗಿನ ಕಾಯಿಗಳನ್ನು ಕೊಂಡು ಬೇರೆಬೇರೆ ಮನೆಗಳಿಗೆ ಆ ಸಂಜೆ ಹಂಚಲಾಯಿತು. ನೋಡಿದರೆ ಮಾತ್ರ ನಂಬಬಹುದೆಂಬಷ್ಟು ಉತ್ಸಾಹ ಮತ್ತು ಸಂತೋಷದಿಂದ ಸ್ತ್ರೀಪುರುಷ ಬಾಲಕ ಬಾಲಿಕೆಯರು ಅಂದು ಕೆಲಸವನ್ನಾರಂಭಿಸಿದರು. ಆ ರಾತ್ರಿ ೧೧—೧೨ ಗಂಟೆಗಳವರೆಗೆ ಅಡಿಗೆಮನೆಯ ಒಲೆಗಳು ಎಷ್ಟೋ ಮನೆಗಳಲ್ಲಿ ಉರಿಯುತ್ತಿದ್ದುದು ಕಂಡುಬರುತ್ತಿತ್ತು. ಅವರಿಂದ ಒಟ್ಟು ೧೩ ಚಿಲ್ಲರೆ ರೂಪಾಯಿ ಆದಾಯ ಬಂದಿತು. ಅದರಿಂದ ನಾಲ್ಕು ರೂಪಾಯಿ ತೆಗೆದು ಬೆಲ್ಲವನ್ನು ಕೊಳ್ಳಲಾಯಿತು. ಬೆಲ್ಲಕಾಕಿ ತೆಂಗಿನೆಣ್ಣೆಯ ಜೊತೆಗೆಬರುವ ಬೆಣ್ಣೆ ಮತ್ತು ಹಿಂಡಿಗಳಿಂದ ರುಚಿಕರವಾದ 'ಸಂದೇಶ' ವನ್ನು ತಯಾರಿಸಿ ಸಂಜೆಯ ಸನಾರಂಭದಲ್ಲಿ ಬಂದವರಲ್ಲಿ ಅನೇಕರಿಗೆ ರಾತ್ರಿ ಊಟಕ್ಕೆ ಹೊಟ್ಟೆಯಲ್ಲಿ ಜಾಗ ಉಳಿಯದಂತೆ ತಿಂದು ತೇಗುವಷ್ಟು ಪ್ರಸಾದವನ್ನಾಗಿ ಬಡಿಸಲಾಯಿತು. ಅದರಲ್ಲಿ ೯ ಚಿಲ್ಲರೆ ರೂಪಾಯಿಗಳುಳಿದವು. ಭಕ್ತರಿಗಾಗಿ ದರಿದ್ರ ನಾರಾಯಣ ಕೊಟ್ಟನದ! 'ತೇನತ್ಯಕ್ತೇನ ಭುಂಜೀಥಾಃ' ಅದನ್ನು ತ್ಯಜಿಸಿ ಭೋಗಿಸಿರಿ.

ಬಹಳವಾಗಿ ತಾವೇತಾವಾಗಿ ಬಂದ ಜನರೇ ವಿಗ್ರಹವನ್ನು ನಿಲ್ಲಿಸಿದ್ದರು. ವೇದಿಕೆಗೆ ಬೇಕಾದ ಮಣ್ಣನ್ನು ಹತ್ತಿರದ ಕೆರೆಯಿಂದ ತೋಡಿ ತಂದು ಅದನ್ನು ಶುಧಾರಿಸುವ ಕೆಲಸವನ್ನು ಜೊತೆಗೇ ಮಾಡಿದರು. ತನ್ನ ಅಂಗಳದಲ್ಲಿ ಬೆಳೆಸಿದ ಚೆಕ್ಕದಿಂದ ಒಬ್ಬ ನಿರಾಶ್ರಿತ ವಿಧವೆ ಎಲ್ಲ ಭಕ್ತರೂ ಕುಳಿತುಕೊಳ್ಳಲು ಚಾಪೆಯೊಂದನ್ನು ಹೆಣೆದು ಕೊಟ್ಟಳು. ದೇವರಿಗೆ ಸಮರ್ಪಣೆಯೆಂದು ಹಳ್ಳಿಗರು (ಅವರಲ್ಲಿ ಎಷ್ಟೋ ಮುಂದಿಗೆ ಮುಲೇರಿಯ ಜ್ವರಬರುತ್ತಿದ್ದರೂ) ರಾತ್ರಿ ಬಹಳಹೊತ್ತು ದುಡಿದು ಹಳ್ಳಿಯ ಕೆರೆಯನ್ನು ಸ್ವಚ್ಛಪಡಿಸಿದರು; ಮತ್ತು ದಂಡೆಯನ್ನು ಸರಿಮಾಡಿದರು.

ದೇವರೆದುರು ಗೀತೆಯನ್ನು ಪಠಿಸಲ್ಪಟ್ಟಿತು. ಪರಿಕೀರ್ತನದ ನಂತರ ನೆರವಿಗೆಂದೆ: 'ನಿಮ್ಮ ಪ್ರೀತಿಯ ಕೆಲಸದಿಂದ ಜಡವಿಗ್ರಹವನ್ನು ಚೈತನ್ಯಮೂರ್ತಿಯನ್ನಾಗಿ ಮಾಡಿದಿರಿ. ನೀವು ಅವನೊಡನೆ ಕರಾರಿನಂತೆ ನಡೆದುಕೊಂಡರೆ ಅವನು ನಿಮ್ಮನ್ನು ಉಳಿಸುತ್ತಾನೆ'. ಕೆಲವು ಜನರು ದೂರಿಕೊಂಡಂತೆ ಅವರ ದೇವರು ಅವರ ಕೈ ಬಿಟ್ಟನೆಂಬುದು ಸುಳ್ಳು. ತಮ್ಮ ದುಃಖಕರವಾದ ವಿಪ ಜೀವಿತಗಳಿಗಾಗಿ ಅವರೇ ಅವನನ್ನು ಮಾರಿಕೊಂಡದ್ದು. ಅವರು ಅವನನ್ನು ಕಳೆದು ಕೊಂಡಿದ್ದರು. ಆದರೆ ಪ್ರಾಣ ಹೋದರೂ ಮತ್ತೊಮ್ಮೆ ಹಾಗಾಗದಂತೆ ನೋಡಿಕೊಳ್ಳುವೆವೆಂದು ಅವರು ಪ್ರತಿಜ್ಞೆಮಾಡಿದರೆ ಅವನು ಪುನಃ ಬಂದು ಅವರನ್ನು ರಕ್ಷಿಸುವನು. ಅರಾಜಕತೆ ಮತ್ತು ಭಯದ ದುರ್ದಿನಗಳನ್ನು ಅವರು ನಿತ್ಯಹೇಳುತ್ತಿದ್ದ ರಾಮನಾಮವೆಂಬ ವಸ್ತುವನ್ನು ಹೊಡೆದು ಕಳೆದರು. ಅವರೀಗ ಮಾಡಿದ ಕೆಲಸದಿಂದ ಅವರು ಪ್ರಾರ್ಥನೆಗೆ ತಮ್ಮ ಶರೀರವನ್ನು ಅರ್ಪಿಸಿದ್ದರು, ಅವರಿಗೆ ಅನಿಶ್ಚಿತ ಭವಿಷ್ಯ ಎದುರಾಗಿತ್ತು. ಪೂರ್ವ ಬಂಗಾಲದಲ್ಲೊಂದು ಬೇರೆಯ ಸಾರ್ವಭೌಮ ಪ್ರಾಂತವಾದ ಬಳಿಕ ಅವರು ಅಲ್ಪಸಂಖ್ಯಾಕರಾಗಿ ಯಾವಾಗಲೂ ಉಳಿಯಬೇಕಾಗಿ ಬಂದಿತು. ಸದಾ ತಮ್ಮ ಅಂತಃಶಕ್ತಿಯಿಂದಲೆ ಒಂದಿಕೆ ಸುರಕ್ಷತೆಗಳನ್ನು ಕಾಯ್ದುಕೊಳ್ಳಬೇಕಾಯಿತು. ಆದರೆ ದೇವರೊಡನೆ ಸಂಬಂಧ ಬೆಳೆಸಿಕೊಂಡು ಒಂದು ಅಲ್ಪಸಂಖ್ಯಾಕ ಜನತೆಯು ಬಹು ಸಂಖ್ಯಾಕವನ್ನಾಗಿ ತನ್ನನ್ನು ಮಾರ್ಪಡಿಸಿಕೊಳ್ಳಬಲ್ಲುದು. ಅವರು ಆ ಸಂಜೆ ಮಾಡಿದ್ದು ಅದನ್ನು ಮಾಡುವ ಬಗೆಯನ್ನು ಸೂಚಿಸಿತು. ಸರ್ವಭಯ ನಾಶಕನಾದ ಪ್ರಭುವನ್ನು ನಿಮ್ಮಲ್ಲಿ ತುಂಬುವದಲ್ಲದೆ ನಿಮ್ಮ ದೇವರು ಅನ್ನ ವಸ್ತ್ರವನ್ನು ಕೊಟ್ಟು ನೀವು ಸಸಿನಿಂದ ನರಳುತ್ತನಗ್ನರಂಗಿ ತಿರುಗಾಡದಂತೆ ನಿಮ್ಮನ್ನು ಕಾಯುತ್ತಾನೆ! ಅದಕ್ಕೆ ನೀವು ಮಾತ್ರ ಕೂಗಿನಂತೆಯೇ ಯಾವಾಗಲೂ ಅವನ ಸೇವೆ ಮಾಡುತ್ತಿರಬೇಕು.

ಅ ಹಿರಿಯ ಪೂರ್ಣ ಮೌನದಲ್ಲಿದ್ದು ಎಲ್ಲರೂ ಪ್ರತಿಜ್ಞೆ ಮಾಡಿದರು. ಅವರ ಕೇಂದ್ರದಲ್ಲಿ ಅವರಿಗಾಗಿಟ್ಟ ನಾಲ್ಕು ಹಣ ೯೦೫ ರೂಪಾಯಿಗಳಲ್ಲದೆ ಅವರಿಗೆ ತೆಂಗಿನೆಣ್ಣೆಯ ಉತ್ಪಾದನದಿಂದ ಆ ಕಾಲದಲ್ಲಿ ೧೫೦೦ ರೂಪಾಯಿಗಳು ಶುದ್ಧ ಲಾಭವಾಗಿ ದೊರೆತವು.

ಅವರ ಗುಡಿಯೆದುರಿನಲ್ಲಿ ಇಂದಿನ ವಿವರನ ಟಸ್ತಾಲಿನಿಂದ ಬಂದ ಸುದ್ದಿಯ ಪ್ರಕಾರ ದಿನವೂ ೧೧ ಚರಕ ಮತ್ತು ೩೨ ತಕಲಿ (ಕದಿರು) ಗಳು ಬಳಕೆಯಾಗುತ್ತಿವೆ. ಇಲ್ಲಿಯವರೆಗೆ ೧ ತಿಂಗಳಲ್ಲಿ ಈ

(೯ನೆಯ ಪುಟದಿಂದ)

ದ್ದರು. ಅವರ, ... ವರು ತಮ್ಮ ... ಕರೆಲಿದ್ದರು. ಅವರಿಂದ ಹಿಂದೂಗಳಿಗೆ ... ಧೈರ್ಯ. ... ಉಂಟಾಯಿತು. ... ಸರ್ಕಾರದ ಮಿತ್ರರು ... ಶಾಂತಿ ... ಗಳನ್ನು ... ದವರು ... ವಂತಾಯಿತು. ... ಒಂದು ಸಂಗತಿ ಹೇಳಿದ್ದಾರೆ. ಅವರದೇ ಮಾತಿನಲ್ಲಿ ನಾನೀಗ ಅದನ್ನು ... ತ್ತೇನೆ.

"ಶಾಹಪುರದಲ್ಲಿಯ ... ಪ್ರಸಂಗದ್ದಾಗಿ ಕಾರ್ಯವೆಂದು ... ಒಂದು ಸಂಗತಿ ಮೊನ್ನೆ ನಡೆಯಿತು. ಗಲಭೆಯ ಕಾಲದಲ್ಲಿ ಶಾಹಪುರದ ಕೇಂದ್ರ ಸ್ಥಳ, ಪ್ರಾರಂಭಿಕ ... ಸಿತ್ತು. ನಾನು ಅಲ್ಲಿ ಕಳೆದ ೧೪ ತಿಂಗಳಿಂದ ಗಾಂಧಿಯವರ "ಮಾಡು ಇಲ್ಲವೆ ಮಡಿ" ಎಂಬ ಸಂದೇಶದ ಪ್ರಕಾರ ದುಡಿಯುತ್ತಿದ್ದೇನೆ. ಅಂತಹ ಸಂಗತಿಯೆಂದರೆ, ಸ್ಥಳೀಯ ಮುಸಲ್ಮಾನರು ಸ್ಥಳೀಯ ಹಿಂದು ವ್ಯಾಪಾರಿಯೊಬ್ಬನ ಅಳಿದ ... ಸಾಮಗ್ರಿಗಳಿಂದ ಹಿಂದುಗಳಿಗೆ ಸೇರಿದ ... ದಲ್ಲಿ ತಾವು ಕಟ್ಟಿದ್ದ ಒಂದು ... ಕೆಡ ಹಿಡಿದು ಅಳಿದ ಸಾಮಗ್ರಿ ... ಗಳನ್ನು ಸರಿಯಾದ ಹಕ್ಕುದಾರರಿಗೆ ಮರಳಿ ಕೊಡಲಾಯಿತು. ಸ್ಥಳೀಯ ಮುಸ್ಲಿಂ ಮುಖಂಡರು ಒಂದು ಬದ್ಧ ಪ್ರಕಟನೆ ಹೊರಡಿಸಿ, ಅದರಲ್ಲಿ "... ಹಿಂದು ಬಾಂಧವರಿಗೆ ಕೋರುವ ... ಗುರುತು; ಅವರ ಪುನರ್ನಿವಾಸ... ಮೆಟ್ಟಿಲು" ಎಂದು ಸಾರಿದ್ದಾರೆ.

